**ಅನುಬಂಧ-ಅ**

**ಭಾರತೀಯ ವಿದೇಶೀ/ ವಿದೇಶೀ ಪತಿಯಿಂದ ಪರಿತ್ಯಕ್ತರಾದ ಭಾರತೀಯ ಮಹಿಳೆಯರಿಗೆ ಕಾನೂನು/ ಆರ್ಥಿಕ ಸಹಾಯ ಒದಗಿಸಲು ಮಾರ್ಗದರ್ಶಿ ಸೂತ್ರಗಳು (1ನೇ ಸೆಪ್ಟೆಂಬರ್ 2017ರಿಂದ ಪರಿಷ್ಕರಿಸಲ್ಪಟ್ಟಿದೆ):**

1. **ಉದ್ದೇಶ:**

1.1. ತೊಂದರೆಯಲ್ಲಿರುವ (ಭಾರತೀಯ ವಿದೇಶೀ/ ವಿದೇಶೀ ಪತಿಯರಿಂದ ಪರಿತ್ಯಕ್ತರಾದ) ಅರ್ಹ ಭಾರತೀಯ ಮಹಿಳೆಯರಿಗೆ ಕಾನೂನು ಸಲಹೆ ಮತ್ತು ಸೇವೆಗಳನ್ನು ಪಡೆಯಲು ಅಲ್ಪ ಆರ್ಥಿಕ ಸಹಾಯ ಒದಗಿಸುವುದೇ ಈ ಯೋಜನೆಯ ಸೌಲಭ್ಯದ ಉದ್ದೇಶ.

1.2. ಇಂತಹ ಸೇವೆಗಳನ್ನು ನೀಡಲು ಭಾರತೀಯ ದೂತಾವಾಸ ಕಚೇರಿಗಳು ಗುರುತಿಸಿ, ನಿಗದಿಪಡಿಸಿರುವ ವಿಶ್ವಾಸಾರ್ಹ ಭಾರತೀಯ ಮಹಿಳಾ ಸಂಸ್ಥೆಗಳ/ ಭಾರತೀಯ ಸಮುದಾಯ ಸಂಘಗಳ/ ಸರ್ಕಾರೇತರ ಸಂಸ್ಥೆಗಳ ಮೂಲಕ ಈ ಕಾನೂನು ಸಲಹೆ ಮತ್ತು ಸೇವೆಗಳನ್ನು ಒದಗಿಸಲಾಗುತ್ತದೆ.

2. **ಯೋಜನೆಯ ವ್ಯಾಪ್ತಿ ಮತ್ತು ಅದರ ಫಲಾನುಭವಿಗಳ ಅರ್ಹತೆಗಳು:**

2.1. ಈ ಯೋಜನೆಯ ಅಡಿಯಲ್ಲಿನ ಸಹಾಯವು ಭಾರತೀಯ ವಿದೇಶೀ/ ವಿದೇಶೀ ಪತಿಯರಿಂದ ಪರಿತ್ಯಕ್ತರಾಗಿರುವ ಅಥವ ವಿದೇಶದಲ್ಲಿ ವಿಚ್ಛೇದನ ಕಾನೂನು ಕ್ರಮ ಎದುರಿಸುತ್ತಿರುವಂತಹ ಭಾರತೀಯ ಮಹಿಳೆಯರಿಗೆ ದೊರೆಯುತ್ತದೆ.

2.1.1. ವಿದೇಶ ಸಚಿವಾಲಯದ ಈ ಯೋಜನೆಯ ಅಡಿಯಲ್ಲಿ ಆರ್ಥಿಕ ಸಹಾಯ ಒದಗಿಸಲು ಇರುವ ಅರ್ಹತೆಯ ಹಿನ್ನೆಲೆಯಲ್ಲಿ "ಪರಿತ್ಯಕ್ತ" ಶಬ್ದದ ಅರ್ಥವು 'ಪತಿಯು ಸ್ವೇಚ್ಛೆಯಿಂದ ಪತ್ನಿಯನ್ನು ತೊರೆಯುವುದು' ಎಂದರ್ಥ. ಅಲ್ಲದೆ, ಪತಿಯು ಮಾತಿನಿಂದಾಗಲೀ, ಕೃತಿಯಿಂದಾಗಲೀ ಪತ್ನಿಯನ್ನು ಮನೆ ಬಿಟ್ಟು ಹೋಗುವಂತೆ ಒತ್ತಾಯ ಮಾಡುವುದಾಗಲೀ, ವಿನಾಕಾರಣ ದೂರವಿಡುವುದಾಗಲೀ ಮಾಡಿದರೆ, ಹೊರನೋಟಕ್ಕೆ ಪತ್ನಿಯೇ ಪತಿಯನ್ನು ತೊರೆದುಹೋದಂತೆ ಕಂಡರೂ, ಪತಿಯೇ ಪತ್ನಿಯನ್ನು ಅನ್ಯಾಯವಾಗಿ ತೊರೆದು ತಪ್ಪಿತಸ್ಥನಾದಂತೆ ತೀರ್ಮಾನಿಸಲಾಗುತ್ತದೆ. ಇಂತಹ ವಿನಾಕಾರಣ ಪತ್ನಿ ತೊರೆಯುವಿಕೆಯು ಬಹುತೇಕ ಸಂದರ್ಭಗಳಲ್ಲಿ ಆಕೆಗೆ ಆಸರೆ ನೀಡದಿರುವುದರಿಂದ ಉಂಟಾಗುತ್ತದೆ. ಅಂದರೆ ಪತ್ನಿಗೆ ಕೊಡಬೇಕಾದ ಆರ್ಥಿಕ ಸೌಲಭ್ಯಗಳನ್ನು ಕೊಡದಿರುವುದು, ವಿದೇಶದಲ್ಲಿರುವಾಗ ಆಕೆಗೆ ಅವಶ್ಯವಿರುವ ವೀಸಾ ಮಾನ್ಯತೆಯ ವಿಸ್ತರಣೆಯ ದಾಖಲೆಗಳನ್ನು ನೀಡದಿರುವುದು, ಹಣ, ಆಸ್ತಿ ಅಥವ ಒಡವೆಗಳನ್ನು ತರುವಂತೆ ನ್ಯಾಯಸಮ್ಮತವಲ್ಲದ ರೀತಿಯಲ್ಲಿ ನಿರ್ಬಂಧಿಸುವ/ ಬಲಾತ್ಕರಿಸುವ ಉದ್ದೇಶದಿಂದ ಆಕೆಗೆ ಅಥವ ಆಕೆಯ ಸಂಬಂಧಿಕರಿಗೆ ಕಿರುಕುಳ ನೀಡುವುದು ಅಥವ ಅಂತಹ ಬೇಡಿಕೆಯನ್ನು ಆಕೆಯಾಗಲೀ, ಆಕೆಯ ಸಂಬಂಧಿಕರಾಗಲೀ ಪೂರೈಸಲು ವಿಫಲರಾಗುವುದರಿಂದ ಉಂಟಾಗುತ್ತದೆ.

2.1.2. ಯೋಜನೆಯ ವ್ಯಾಪ್ತಿ : ವಿದೇಶಗಳಲ್ಲಿರುವ ಎಲ್ಲಾ ಭಾರತೀಯ ದೂತಾವಾಸ ಕಚೇರಿಗಳಲ್ಲಿಯೂ ಇದು ಚಾಲ್ತಿಯಲ್ಲಿರುತ್ತದೆ.

2.1.3. ಅಂತಹ ಭಾರತೀಯ ಮಹಿಳೆಯು ಭಾರತೀಯ ಪಾಸ್‌ಪೋರ್ಟ್ ಹೊಂದಿರಬೇಕು.

2.1.4. ಅಂತಹ ಮಹಿಳೆಯು ಭಾರತೀಯ ವಿದೇಶೀ/ ವಿದೇಶೀ ವರನೊಂದಿಗೆ ಭಾರತದಲ್ಲಿಯಾಗಲೀ, ವಿದೇಶದಲ್ಲಿಯಾಗಲೀ ವಿಧ್ಯುಕ್ತವಾಗಿ ವಿವಾಹವಾಗಿರಬೇಕು.

2.1.5. ಇಲ್ಲಿ "ಭಾರತೀಯ ವಿದೇಶೀ" ಶಬ್ದವು ಅನಿವಾಸಿ ಭಾರತೀಯರನ್ನೂ, ಭಾರತೀಯ ಮೂಲದ ವ್ಯಕ್ತಿಗಳನ್ನೂ ಒಳಗೊಂಡಿರುತ್ತದೆ.

2.1.6. ವಿವಾಹವಾದ ಏಳು ವರ್ಷಗಳೊಳಗೆ ಮಹಿಳೆಯು ಪತಿಯಿಂದ ಪರಿತ್ಯಕ್ತಗೊಂಡಿರಬೇಕು.

2.1.7. ವಿವಾಹವಾದ ಏಳು ವರ್ಷಗಳೊಳಗೆ ಮಹಿಳೆಯ ಭಾರತೀಯ ವಿದೇಶೀ/ ವಿದೇಶೀ ಪತಿಯು ವಿಚ್ಛೇದನ ಕ್ರಮವನ್ನು ಆರಂಭಿಸಿರಬೇಕು.

2.1.8. ಮಹಿಳೆಯ ಅನುಪಸ್ಥಿತಿಯಲ್ಲಿ ಆಕೆಯ ಭಾರತೀಯ ವಿದೇಶೀ/ ವಿದೇಶೀ ಪತಿಯು ವಿವಾಹವಾದ ಏಳು ವರ್ಷಗಳೊಳಗೆ ವಿಚ್ಛೇದನ ಪಡೆದುಕೊಂಡಿದ್ದು, ಆಕೆಯು ಜೀವನಾಂಶ ಮತ್ತು ಅಸನ-ವಸನಗಳಿಗಾಗಿ ದಾವೆಯನ್ನು ಹೂಡಿರಬೇಕು.

2.1.9. ಸಕ್ಷಮ ನ್ಯಾಯಾಲಯದಿಂದ ಮಗುವಿನ ಜವಾಬ್ದಾರಿಯು ಯಾರದೆಂದು ತೀರ್ಮಾನವಾಗದಿರುವಾಗ 'ಪೋಷಕರಿಂದ ಮಕ್ಕಳ ಅಪಹರಣ' ರೀತಿಯ ಆರೋಪದ ಹೊರತಾಗಿ, ಮಹಿಳೆಯು ಯಾವುದೇ ಕ್ರಿಮಿನಲ್ ದಾವೆಯಲ್ಲಿ ತಪ್ಪಿತಸ್ಥಳೆಂದು ತೀರ್ಮಾನವಾಗಿದ್ದಲ್ಲಿ ಆಕೆಗೆ ಈ ಸೌಲಭ್ಯವು ದೊರೆಯುವುದಿಲ್ಲ.

2.1.10. ಈ ಯೋಜನೆಯ ಅಡಿಯಲ್ಲಿ ಸೌಲಭ್ಯವನ್ನು ಪಡೆಯಲು ಉದ್ದೇಶಿಸಿರುವ ಮಹಿಳೆಯು ಯಾವ ದೇಶದಲ್ಲಿ ನೆಲೆಸಿದ್ದಾಳೆಂಬುದು ಇಲ್ಲಿ ಪ್ರಕೃತವಾಗುವುದಿಲ್ಲ (ಯಾವ ದೇಶದಲ್ಲಿ ನೆಲೆಸಿದ್ದರೂ ಅರ್ಹ ಮಹಿಳೆಗೆ ಈ ಸೌಲಭ್ಯವು ದೊರೆಯುತ್ತದೆ).

2.1.11. ಅರ್ಜಿಗಳು ಬಹಳ ಸಂಖ್ಯೆಯಲ್ಲಿದ್ದಾಗ ಆರ್ಥಿಕ ಅವಶ್ಯಕತೆಯ ಆಧಾರದ ಮೇಲೆ ಅರ್ಜಿದಾರರ ಆದ್ಯತೆಯು ನಿರ್ಧರಿಸಲ್ಪಡುವುದು.

2.1.12. ಈ ಸೌಲಭ್ಯದಡಿಯಲ್ಲಿ ಪ್ರತಿ ದಾವೆಗೂ US$ 4,000/- (ಅಮೆರಿಕನ್ ಡಾಲರ್‌ಗಳ) ಗರಿಷ್ಠ ಮಿತಿಯಿರುತ್ತದೆ. ಮಹಿಳೆಯು ತನ್ನ ದಾವೆಯನ್ನು ಹೂಡಲು ಹಾಗೂ ಅದಕ್ಕೆ ಬೇಕಾಗುವ ದಾಖಲೆಗಳನ್ನು ಹಾಗೂ ಪೂರ್ವತಯಾರಿಯ ಕೆಲಸಗಳನ್ನು ಮಾಡಿಕೊಳ್ಳಲು ಅನುವಾಗುವಂತೆ ಪ್ರಸ್ತುತ ಆರ್ಥಿಕ ಸಹಾಯವನ್ನು ಅರ್ಜಿದಾರಳ ಕಾನೂನು ಸಲಹೆಗಾರರಿಗೆ ಅಥವ ಭಾರತೀಯ ದೂತಾವಾಸಗಳು ಗುರುತಿಸಿ ನಿಗದಿಪಡಿಸಿರುವ ಸಂಬಂಧಿತ ವಿಶ್ವಾಸಾರ್ಹ ಭಾರತೀಯ ಮಹಿಳಾ ಸಂಸ್ಥೆಗಳಿಗೆ/ ಭಾರತೀಯ ಸಮುದಾಯ ಸಂಘಗಳಿಗೆ/ ಸರ್ಕಾರೇತರ ಸಂಸ್ಥೆಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತದೆ.

**ಸೂಚನೆ** : ಇಂತಹ ಕಾನೂನು ಹಾಗೂ ಆರ್ಥಿಕ ಸಹಾಯವನ್ನು ಅಪೇಕ್ಷಿಸುವ ಅರ್ಜಿದಾರರು ಈ ವಿಷಯದ ಅರ್ಜಿಯನ್ನು ಆಯಾ ಸಂಬಂಧಿತ ಭಾರತೀಯ ದೂತಾವಾಸ/ ರಾಯಭಾರ ಕಚೇರಿಗಳಿಗೆ ನೇರವಾಗಿ ಸಲ್ಲಿಸಬೇಕು.

## **ಹೆಚ್ಚಾಗಿ ಕೇಳಿದ ಪ್ರಶ್ನೆಗಳು (FAQ)**

ಭಾರತೀಯ ಪ್ರಜೆಗಳು ಸಾಗರೋತ್ತರ ಭಾರತೀಯರನ್ನು ವಿವಾಹ ಮಾಡಿಕೊಂಡ ಸಂಬಂಧದ ವ್ಯಾಜ್ಯಗಳನ್ನು ಪರಿಹರಿಸುವುದು ಹೇಗೆ?

**1) ನನ್ನ ಸಾಗರೋತ್ತರ ಭಾರತೀಯ ಭಾವಿ ಸಂಗಾತಿಯ (ಭಾವಿ ಪತಿ ಅಥವ ಪತ್ನಿ) ಹಿನ್ನೆಲೆಯನ್ನು ನಾನು ಪರೀಕ್ಷಿಸುವ/ ಪರಿಶೀಲಿಸುವ ಬಗೆ ಹೇಗೆ?**

ನೀವು ಸಾಗರೋತ್ತರ ಭಾರತೀಯ ಸಂಗಾತಿಯೊಡನೆ ನಿಶ್ಚಿತಾರ್ಥ ಮಾಡಿಕೊಳ್ಳುವ ಅಥವ ವಿವಾಹ ಮಾಡಿಕೊಳ್ಳುವ ಮೊದಲು (ಭಾರತ ಹಾಗೂ ವಿದೇಶ ಎರಡೂ ಕಡೆ ಇರುವ) ನಿಮ್ಮ ಸಂಬಂಧಿಕರು, ಸ್ನೇಹಿತರು, ನೆರೆಹೊರೆಯವರು ಇತ್ಯಾದಿ ಜನರಲ್ಲಿ ಈ ಕೆಳಗಿನ ವಿವರಗಳ ಬಗ್ಗೆ ವಿಚಾರಿಸಿರಿ:

(ಅ) ನಿಮ್ಮ ಸಂಗಾತಿಯು ಅವರ ಬಗ್ಗೆ ನಿಮಗೆ ತಿಳಿಸಿರುವ ಸಂಗತಿಗಳ ಬಗ್ಗೆ, ವಿಶೇಷವಾಗಿ ಕೆಳಗೆ ನೀಡಿರುವ ವಿವರಗಳ ಬಗ್ಗೆ, ವಿಚಾರಿಸಿ ಅದರ ಸತ್ಯಾಸತ್ಯತೆಯನ್ನು ಪರೀಕ್ಷಿಸಿಕೊಳ್ಳಿ:

i. ಅವರ ವೈವಾಹಿಕ ಸಂಗತಿ : ಅವರು ವಿವಾಹಿತರೋ, ವಿಚ್ಛೇದಿತರೋ ಅಥವ ವಿವಾಹಾನಂತರ ಬೇರೆಯಾಗಿ ವಾಸಿಸುತ್ತಿದ್ದಾರೋ ಎಂದು ಪರೀಕ್ಷಿಸಿಕೊಳ್ಳಿರಿ.

ii. ಅವರ ಉದ್ಯೋಗ ವಿವರಗಳು : ವಿದ್ಯಾರ್ಹತೆ, ಹುದ್ದೆ, ವಯಸ್ಸು, ವೇತನ, ಕಚೇರಿ ವಿಳಾಸ, ಉದ್ಯೋಗದಾತರ ವಿಳಾಸ ಇತ್ಯಾದಿ ವಿವರಗಳು ಮತ್ತು ವಿಶ್ವಾಸಾಧಾರಗಳು.

iii. ವಲಸೆ ವಿವರಗಳು : ಯಾವ ವಿಧದ ವೀಸಾ, ಸಂಗಾತಿಯನ್ನು ವಿದೇಶಕ್ಕೆ ಕರೆದೊಯ್ಯಲು ಅದರಲ್ಲಿ ಇರುವ ಅರ್ಹತೆಗಳು.

iv. ಆರ್ಥಿಕ ಪರಿಸ್ಥಿತಿ : ಇದನ್ನು ಅವರ ಉದ್ಯೋಗದಾತರೊಂದಿಗೆ ಚರ್ಚಿಸಿ ಪರೀಕ್ಷಿಸಿಕೊಳ್ಳಬೇಕು.

v. ಅಪರಾಧಗಳ ಹಿನ್ನೆಲೆ : ಯಾವುದಾದರೂ ಅಪರಾಧ ಹಿನ್ನೆಲೆ ಹೊಂದಿದ್ದರೆ ಭಾರತೀಯ ರಾಯಭಾರ ಕಚೇರಿ/ ಆ ದೇಶದ/ ನಗರದ ಪೋಲೀಸರಲ್ಲಿ ವಿಚಾರಿಸಿ.

vi. ಕೌಟುಂಬಿಕ ಹಿನ್ನೆಲೆ : ಕುಟುಂಬದ ಸ್ಥಾನ, ಮಾನ, ಗೌರವ, ಕುಲೀನತೆ, ಸಂಸ್ಕೃತಿ ಇತ್ಯಾದಿ.

(ಆ) ನಿಮ್ಮ ಭಾವಿ ಸಂಗಾತಿಯ ಈ ಕೆಳಗಿನ ದಾಖಲೆಗಳನ್ನು ಪರೀಕ್ಷಿಸಿ ಮತ್ತು ಅವುಗಳೆಲ್ಲದರ ಒಂದೊಂದು ಪ್ರತಿಯನ್ನು ನಿಮ್ಮ ಮತ್ತು ನಿಮ್ಮ ಪೋಷಕರ ಬಳಿ ಇಟ್ಟುಕೊಳ್ಳಿರಿ :

i. ವೀಸಾ ಮತ್ತು ವೀಸಾ ವಿವರಗಳು.

ii. ಸಾಮಾಜಿಕ ಭದ್ರತಾ ಸಂಖ್ಯೆ.

iii. ಪಾಸ್‌ಪೋರ್ಟ್ ಮತ್ತು ಪಾಸ್‌ಪೋರ್ಟ್ ವಿವರಗಳು.

iv. ಹಿಂದಿನ ಮೂರು ವರ್ಷಗಳ ತೆರಿಗೆ ಸಲ್ಲಿಕೆಯ ವಿವರಗಳು.

v. ವಿದೇಶದಲ್ಲಿನ ವಿಳಾಸದ ಸಾಕ್ಷ್ಯಾಧಾರ.

ಒಂದೊಮ್ಮೆ ನಿಮ್ಮ ಸಂಬಂಧಿಕರ, ಸ್ನೇಹಿತರ, ನೆರೆಹೊರೆಯವರ ಸಂಪರ್ಕದಿಂದ ಮೇಲಿನ ವಿವರಗಳನ್ನು ಪರೀಕ್ಷಿಸಲಾಗದಿದ್ದಲ್ಲಿ, ನಿಮ್ಮ ಭಾವಿ ಸಂಗಾತಿಯು ವಾಸಿಸುತ್ತಿರುವ ದೇಶ/ ನಗರದಲ್ಲಿರುವ ಸ್ಥಳೀಯ ಭಾರತೀಯ ಸಂಘಗಳು/ ಸಂಸ್ಥೆಗಳು/ ಸರ್ಕಾರೇತರ ಸಂಸ್ಥೆಗಳನ್ನು ಸಂಪರ್ಕಿಸಿ ವಿಚಾರಿಸುವ ಮೂಲಕ ನಿಮ್ಮ ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ ಭಾವಿ ಸಂಗಾತಿಯ ವಿವರಗಳನ್ನು ಸಂಗ್ರಹಿಸಿ, ಪರೀಕ್ಷಿಸಿಕೊಳ್ಳಿರಿ.

(ಇ) ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿಯೊಂದಿಗಿನ ವಿವಾಹದ ಬಗ್ಗೆ ಈ ಕೆಳಗಿನ ಪ್ರಮಾದಗಳ ಬಗ್ಗೆ ಖಂಡಿತವಾಗಿಯೂ ಎಚ್ಚರದಿಂದಿರಿ:

i. ಯಾವುದೇ ಬ್ಯೂರೋ, ಏಜೆನ್ಸಿ, ದಳ್ಳಾಳಿ ಅಥವ ಮಧ್ಯವರ್ತಿಗಳನ್ನು ಕುರುಡುತನದಿಂದ ನಂಬಬೇಡಿ.

ii. ಯಾವುದೇ ಕಾರಣಕ್ಕಾಗಿಯೂ, ಯಾವುದೇ ನೆಪದಲ್ಲಿಯೂ, ಯಾವುದೇ ಸಂದರ್ಭದಲ್ಲಿಯೂ ಬೇರೆಯವರ ಹಸ್ತಾಕ್ಷರವನ್ನು ನಕಲು ಮಾಡಲು ಅಥವ ನಕಲಿ ವ್ಯವಹಾರದ ಪತ್ರಗಳಿಗೆ ಸಹಿ ಮಾಡಲು ಎಂದೂ ಒಪ್ಪಿಕೊಳ್ಳಬೇಡಿ.

iii. ವಿದೇಶಕ್ಕೆ ವಲಸೆ ಹೋಗಲು ಯಾವುದೇ ದಳ್ಳಾಳಿಯ ಯಾವುದೇ ಯೋಜನೆಯ ಬೋನಿಗೆ ಬೀಳಬೇಡಿ; ವಿಶೇಷವಾಗಿ ಮದುವೆಯ ಮೂಲಕ ಹಸಿರು ಕಾರ್ಡು ಪಡೆಯುವ ಆಮಿಷಕ್ಕೊಳಗಾಗಬೇಡಿ.

iv. ಬೀಗರ ಕಡೆಯ ಒತ್ತಾಯಕ್ಕೊಳಗಾಗಿ ವಿವಾಹವನ್ನು ಎಂದೂ ಗುಟ್ಟಾಗಿ ಮಾಡಿಕೊಳ್ಳಬೇಡಿ. ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿಯೊಂದಿಗಿನ ವಿವಾಹದ ಮಾಹಿತಿಯನ್ನು ಬಹಿರಂಗಗೊಳಿಸುವ ಮೂಲಕ ಹಾಗೂ ಅದನ್ನು ನಿಮ್ಮ ಸಂಬಂಧಿಕರು, ಸ್ನೇಹಿತರು, ನೆರೆಹೊರೆಯವರೊಂದಿಗೆ ಹಂಚಿಕೊಳ್ಳುವ ಮೂಲಕ ವರನ ಬಗ್ಗೆ ನಿಮಗೆ ಗೊತ್ತಿರದ ಅನೇಕ ಮಾಹಿತಿಗಳು ಸಿಗಬಹುದು.

v. ವಿವಾಹವನ್ನು ಕೇವಲ ರಿಜಿಸ್ಟರ್ ಮದುವೆ ಅಥವ ದೂರದ ಪ್ರದೇಶದಲ್ಲಿ ಮಾಡಿಕೊಳ್ಳಲು ಎಂದೂ ಒಪ್ಪಿಕೊಳ್ಳಬೇಡಿ.

vi. ವಿವಾಹವನ್ನು ವಿದೇಶದಲ್ಲಿ ಮಾಡಿಕೊಳ್ಳಲು ಎಂದೂ ಒಪ್ಪಿಕೊಳ್ಳಬೇಡಿ.

**2) ನನ್ನ ಪತಿಯೊಡನೆ ವಿದೇಶಕ್ಕೆ ಹೋದ ಬಳಿಕ ಆತ ವರದಕ್ಷಿಣೆಗಾಗಿ ಒತ್ತಾಯಿಸುತ್ತಿದ್ದಾನೆ ಹಾಗೂ ಕಿರುಕುಳ ನೀಡುತ್ತಿದ್ದಾನೆ. ನಾನೇನು ಮಾಡಬೇಕು?**

i. ಮೊದಲನೆಯದಾಗಿ ಮತ್ತು ಅತ್ಯಂತ ಪ್ರಮುಖವಾಗಿ ನಿಮ್ಮ ಪತಿಯು ನೀಡುತ್ತಿರುವ ಕಿರುಕುಳ, ದೌರ್ಜನ್ಯ ಅಥವ ಪರಿತ್ಯಜಿಸುವುದನ್ನು ತಡೆಯುವ ಸಲುವಾಗಿ ನೀವು ನಿಮ್ಮ ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ ಪತಿ ಅಥವ ಅವನ ಕಡೆಯವರ ಒತ್ತಾಯಕ್ಕೆ ಒಳಗಾಗಿ, ಅವರ ವರದಕ್ಷಿಣೆ ಅಥವ ಅಂತಹ ಇನ್ನಾವುದೇ ಅವಿವೇಕದ/ ದುರಾಸೆಯ ಬೇಡಿಕೆಗಳನ್ನು ಒಪ್ಪಿಕೊಳ್ಳದಿರಿ.

ii. ಕಿರುಕುಳ, ದೌರ್ಜನ್ಯ ಅಥವ ಪರಿತ್ಯಜಿಸುವುದರ ವಿರುದ್ಧ ಸ್ಥಳೀಯ ಪೊಲೀಸರಲ್ಲಿ ದೂರು ದಾಖಲಿಸಲು ಸಲಹೆ, ಸೂಚನೆ, ಸಹಾಯಗಳಿಗಾಗಿ ಹತ್ತಿರದ ರಾಯಭಾರ ಕಚೇರಿ/ ದೂತಾವಾಸ ಕಚೇರಿಯನ್ನು ಕೂಡಲೆ ಸಂಪರ್ಕಿಸಿ.

iii. ನಿಮಗೆ ಸಹಾಯ ಮಾಡಬಲ್ಲಂತಹ ಸ್ಥಳೀಯ ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಪೊಲೀಸರು ಅಥವ ನಿಮ್ಮ ಹತ್ತಿರದ ಸಂಬಂಧಿಗಳು/ ಸ್ನೇಹಿತರನ್ನು ಸಂಪರ್ಕಿಸಲು ಅಥವ ಅವರ ವಿವರಗಳನ್ನು ಪಡೆಯಲು ರಾಯಭಾರ ಕಚೇರಿ/ ದೂತಾವಾಸ ಕಚೇರಿಯವರು ಸಹಾಯ ಮಾಡುತ್ತಾರೆ.

iv. ವಿದೇಶದಲ್ಲಿ ನಿಮ್ಮ ಪತಿಯ ವಿರುದ್ಧ ದೂರು ದಾಖಲಿಸಲು ಆರಂಭಿಕ ಕಾನೂನು/ ಆರ್ಥಿಕ ಸಹಾಯಕ್ಕಾಗಿ ಸ್ಥಳೀಯ ಭಾರತೀಯ ನಿಯೋಗದ ಕಚೇರಿಯನ್ನೂ ಕೂಡ ಸಂಪರ್ಕಿಸಬಹುದು.

**3) ಭಾರತದಲ್ಲಿ ವಿವಾಹ ನೋದಣಿಯು ಕಡ್ಡಾಯವೆ?**

ವಿವಾಹ ನೋದಣಿಯನ್ನು ಕಡ್ಡಾಯ ಮಾಡಲು ಭಾರತದ ಹಲವಾರು ರಾಜ್ಯಗಳು ಕಾನೂನುಗಳನ್ನು ರಚಿಸಿವೆ. ಆಂಧ್ರ ಪ್ರದೇಶ, ದೆಹಲಿ, ಗೋವಾ, ಗುಜರಾತ್, ಹಿಮಾಚಲ ಪ್ರದೇಶ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಈ ಬಗ್ಗೆ ಕಾನೂನನ್ನು ರಚಿಸಿವೆ. ಉಳಿದ ರಾಜ್ಯಗಳಲ್ಲಿ ವಿವಾಹ ನೋಂದಣಿ ಕಡ್ಡಾಯವಲ್ಲ.

ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿಯನ್ನು ವಿವಾಹವಾದ ನಂತರ ಆತನೊಡನೆ ದೇಶ ಬಿಡುವುದಕ್ಕೆ ಮೊದಲು ವಿವಾಹ ನೋಂದಣಿ ಕಚೇರಿಯಲ್ಲಿ ನಿಮ್ಮ ವಿವಾಹವನ್ನು ನೋಂದಾಯಿಸಿರಿ. ವಿವಾಹ ನೋಂದಣಿ ಪತ್ರ ಹಾಗೂ ಅದರ ಹಲವು ಪ್ರತಿಗಳನ್ನು ನಿಮ್ಮ ಬಳಿ ಹಾಗೂ ಭಾರತದಲ್ಲಿರುವ ನಿಮ್ಮ ಪೋಷಕರ ಬಳಿ ಕಡ್ಡಾಯವಾಗಿ ಇಟ್ಟುಕೊಳ್ಳಿರಿ.

ವಿವಾಹದ ಸಾಕ್ಷ್ಯಗಳಾಗಿ ವಿವಾಹ ಆಮಂತ್ರಣ ಪತ್ರಿಕೆ, ವಿವಾಹ ಸಮಾರಂಭದ ಫೋಟೋ/ವಿಡಿಯೋಗಳು, ನಿಮ್ಮ ಪತಿಯ ಪಾಸ್‌ಪೋರ್ಟ್, ವಾಹನ ಚಾಲನಾ ಪರವಾನಗಿ ಅಥವ ವಿದೇಶದಲ್ಲಿ ನೀಡಿರುವ ಇನ್ನಾವುದೇ ಗುರುತಿನ ಚೀಟಿ, ವೀಸಾ, ವರ ಹಾಗೂ ವಧುವಿನ ವಿಳಾಸ ಮುಂತಾದ ದಾಖಲೆಗಳನ್ನು ಇಟ್ಟುಕೊಂಡಿರಿ.

ಈ ಕೆಳಗಿನ ಅಂಶಗಳನ್ನು ಯಾವಾಗಲೂ ನೆನಪಿಟ್ಟುಕೊಂಡಿರಿ:

- ವಿವಾಹ ನೋಂದಣಿ ಪತ್ರವು ಯಾವಾಗಲೂ ನಿಮ್ಮೊಂದಿಗಿರಲಿ.
- ವೀಸಾ ಮತ್ತು ಇತರ ವಿಧ್ಯುಕ್ತ ಪತ್ರ ವ್ಯವಹಾರಗಳನ್ನು ನೀವೇ ಮಾಡಿಕೊಳ್ಳಿರಿ ಹಾಗೂ ಆ ಎಲ್ಲಾ ಮೂಲ ದಾಖಲೆಗಳನ್ನೂ ಹಾಗೂ ಅದರ ಹಲವಾರು ಪ್ರತಿಗಳನ್ನೂ ನಿಮ್ಮ ಬಳಿಯೇ ಇಟ್ಟುಕೊಂಡಿರಿ.
- ಹಾಲಿ ವಿವಾಹದ ಬಗ್ಗೆ ನಿಮ್ಮ ಪತಿಯಿಂದ ಒಂದು ಅಫಿಡವಿಟ್ಟನ್ನು ಪಡೆದಿಟ್ಟುಕೊಂಡಿರಿ.
- ವಿದೇಶಕ್ಕೆ ಹೊರಡುವ ಮೊದಲು ಭಾರತದಲ್ಲಿ ಒಂದು ಸಮಗ್ರ/ ಸಂಪೂರ್ಣ ಆರೋಗ್ಯ ವಿಮಾ ಪಾಲಿಸಿಯನ್ನು ಮಾಡಿಸಿಕೊಂಡು ಅದನ್ನು ನಿಮ್ಮ ಜೊತೆಯಲ್ಲಿ ವಿದೇಶಕ್ಕೆ ಒಯ್ಯಿರಿ.
- ವಿದೇಶದಲ್ಲಿರುವಾಗ ನಿಮ್ಮ ಪಾಸ್‌ಪೋರ್ಟನ್ನು ಹಾಗೂ ಅದರ ಕನಿಷ್ಠ ಒಂದು ಪ್ರತಿಯನ್ನು ನಿಮ್ಮ ಬಳಿ ಯಾವಾಗಲೂ ಇಟ್ಟುಕೊಂಡಿರಿ.

**4) ಅನಿವಾಸಿ ಭಾರತೀಯ ವರನೊಂದಿಗೆ ವಿವಾಹವಾದ ನಂತರ ಭಾರತವನ್ನು ಬಿಡುವ ಮೊದಲು ತೆಗೆದುಕೊಳ್ಳಬೇಕಾದ ಇನ್ನಿತರ ಮುನ್ನೆಚ್ಚರಿಕೆಗಳೇನು?**

i. ನಿಮ್ಮ ಅನಿವಾಸಿ ಭಾರತೀಯ ಪತಿ ನೆಲೆಸಿರುವ ದೇಶದಲ್ಲಿರುವ ಅಲ್ಲಿನ ನೆರೆ ಹೊರೆಯವರು, ಸ್ನೇಹಿತರು, ಸಂಬಂಧಿಗಳು, ನಿಮ್ಮ ಪತಿಯ ಉದ್ಯೋಗದಾತರು, ಪೊಲೀಸರು, ಆಂಬುಲೆನ್ಸ್ ಹಾಗೂ ಭಾರತೀಯ ರಾಯಭಾರ/ ದೂತಾವಾಸ ಕಚೇರಿಯ ಸಂಪರ್ಕ ವಿವರಗಳನ್ನು ನಿಮ್ಮೊಂದಿಗಿಟ್ಟುಕೊಳ್ಳಿರಿ.

ii. ನಿಮ್ಮ ಪಾಸ್‌ಪೋರ್ಟ್, ವೀಸಾ, ಬ್ಯಾಂಕ್ ಖಾತೆ, ಆಸ್ತಿ, ವಿವಾಹ ನೋಂದಣಿ ಪತ್ರಗಳನ್ನೊಳಗೊಂಡಂತೆ, ವಿವಾಹ ಸಮಾರಂಭದ ಛಾಯಾ ಚಿತ್ರಗಳು, ಇತ್ಯಾದಿ ಎಲ್ಲಾ ಆವಶ್ಯಕ ಪ್ರಮುಖ ದಾಖಲೆಗಳ ಛಾಯಾಪ್ರತಿಗಳನ್ನೂ, ಎಲ್ಲರ ದೂರವಾಣಿ ಸಂಖ್ಯೆಗಳ ವಿವರಗಳನ್ನೂ ಭಾರತ/ ವಿದೇಶಗಳಲ್ಲಿರುವ ನಿಮ್ಮ ಪೋಷಕರು ಹಾಗೂ ಇನ್ನಿತರ ವಿಶ್ವಾಸಾರ್ಹ ವ್ಯಕ್ತಿಗಳ ಬಳಿ ಇಟ್ಟಿರಿ.

iii. ಒಂದು ವೇಳೆ ಮೇಲಿನ ಮೂಲ ದಾಖಲೆಗಳನ್ನು ನಿಮ್ಮ ಪತಿ ಅಥವ ಅತ್ತೆ–ಮಾವಂದಿರು ಬಲಾತ್ಕಾರವಾಗಿ ಕಿತ್ತುಕೊಂಡಲ್ಲಿ/ ನಾಶ ಮಾಡಿದಲ್ಲಿ ಅಥವ ಕಳೆದುಹೋದಲ್ಲಿ, ಆಗ ಈ ಛಾಯಾಪ್ರತಿ ದಾಖಲೆಗಳು ನಿಮಗೆ ಉಪಯೋಗಕ್ಕೆ ಬರುತ್ತವೆ. ಸಾಧ್ಯವಿದ್ದಲ್ಲಿ ಈ ಎಲ್ಲಾ ದಾಖಲೆಗಳ ಫೋಟೋ ತೆಗೆದು ಅವುಗಳನ್ನು ನಿಮ್ಮ ಇ–ಅಂಚೆಯಲ್ಲಿಯೂ, ನಿಮ್ಮ ಹಾಗೂ/ ಅಥವ ನಿಮ್ಮ ವಿಶ್ವಾಸಾರ್ಹ ವ್ಯಕ್ತಿಗಳ ಬಳಿಯಲ್ಲಿಯೂ ಇಟ್ಟಿರಿ.

**5) ನನ್ನ ಅನಿವಾಸಿ ಭಾರತೀಯ ಪತಿಯು ನನ್ನನ್ನು ತ್ಯಜಿಸಿದ್ದಾನೆ. ನಾನೇನು ಮಾಡಲಿ?**

i. ಭಾರತದಲ್ಲಿ ನಿಮ್ಮನ್ನು ತ್ಯಜಿಸಿದ್ದರೆ, ತ್ಯಜಿಸಿದ ಸ್ಥಳದ ಸ್ಥಳೀಯ ಪೊಲೀಸು ಠಾಣೆಯಲ್ಲಿ ಕೌಟುಂಬಿಕ ಹಿಂಸೆಯ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ 498 ಎ ಸೆಕ್ಷನ್ನಿನ ಅಡಿಯಲ್ಲಿ ನಿಮ್ಮ ಅನಿವಾಸಿ ಭಾರತೀಯ ಪತಿಯ ವಿರುದ್ಧ ಪ್ರಥಮ ಮಾಹಿತಿ ದೂರು (ಪ್ರ.ಮಾ.ದೂ. – ಎಫ್.ಐ.ಆರ್.) ದಾಖಲಿಸಿ.

ii. ಭಾರತದ ಕ್ರಿಮಿನಲ್ ಪ್ರೊಸೀಜರ್ ಕೋಡಿನ 188 ನೇ ಸೆಕ್ಷನ್ನಿನ ಪ್ರಕಾರ ಭಾರತೀಯರ ವಿರುದ್ಧ ಭಾರತದ ಹೊರಗಡೆ ಅಪರಾಧ ನಡೆದರೂ, ಅದನ್ನು ಭಾರತದ ಗಡಿಯೊಳಗೇ ನಡೆದ ಅಪರಾಧವೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲೂ ನಿಮ್ಮ ಪತಿಯ ವಿರುದ್ಧ ಭಾರತದಲ್ಲೇ ದೂರು ದಾಖಲಿಸಬಹುದು.

iii. ನಿಮ್ಮ ಪತಿಯು ನಿಮ್ಮನ್ನು ವಿದೇಶದಲ್ಲಿ ತ್ಯಜಿಸಿದ್ದರೆ ಅಥವ ಯಾವುದೇ ರೀತಿಯ ಕಿರುಕುಳ ನೀಡಿದ್ದರೆ, ನೀವು ಸ್ಥಳೀಯ ಪೊಲೀಸರನ್ನು ಸಂಪರ್ಕಿಸಬಹುದು/ ಕಾಣಬಹುದು. ತುರ್ತು ಸಂದರ್ಭಗಳಲ್ಲಿ ವಿದೇಶದಲ್ಲಿ ಸಹಾಯವನ್ನಪೇಕ್ಷಿಸಲು ಕೂಡಲೆ ಈ ಕೆಳಗಿನ ಸಂಸ್ಥೆಗಳನ್ನು ಸಂಪರ್ಕಿಸಬಹುದು:

- ಆ ದೇಶದಲ್ಲಿರುವ ಭಾರತೀಯ ರಾಯಭಾರ ಕಚೇರಿ.
- ಭಾರತೀಯ ದೂತಾವಾಸ ಅಥವ ಸ್ಥಳೀಯ ಸಮುದಾಯ ಕಲ್ಯಾಣ ಕಚೇರಿ (ಅವುಗಳ ಸಂಪರ್ಕ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಯಾವಾಗಲೂ ಬಳಿಯಲ್ಲಿಟ್ಟುಕೊಂಡಿರಿ).
- ನಿಮ್ಮ ಪತಿಯ ಉದ್ಯೋಗದಾತ ಸಂಸ್ಥೆ.
- ನಿಮ್ಮ ವಿದೇಶೀ ಪತಿಯು ನೆಲೆಸಿರುವ ಪ್ರದೇಶದ ಸ್ಥಳೀಯ ಭಾರತೀಯ ಸಂಘಟನೆ ಮತ್ತು ಭಾರತೀಯ ನಾಗರಿಕರ/ ಪೌರರ ಸಂಪರ್ಕಜಾಲ ಸಂಸ್ಥೆಗಳು.
- ಆ ದೇಶದಲ್ಲಿರುವ ನಿಮ್ಮ ಸ್ನೇಹಿತರು ಹಾಗೂ ಬಂಧು, ಬಾಂಧವರು.

**6) ವಿದೇಶದಲ್ಲಿರುವ ನವ ವಿವಾಹಿತ ಭಾರತೀಯ ಮಹಿಳೆಯರು ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಗಳೇನು?**

- ನೀವು ವಾಸಿಸುತ್ತಿರುವ/ ನೆಲೆಸಿರುವ ದೇಶದಲ್ಲಿ ಒಂದು ಬ್ಯಾಂಕ್ ಖಾತೆಯನ್ನು ತೆರೆಯಿರಿ. ತುರ್ತು ಸಂದರ್ಭಗಳಲ್ಲಿ ಹಣ ಪಡೆದುಕೊಳ್ಳುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಯಾಗಿರಲು ಅನುವಾಗುವಲ್ಲಿ ಇದು ಸಹಕಾರಿ.
- ನೀವು ವಾಸಿಸುವ ದೇಶದ ಕಾನೂನುಗಳ ಬಗ್ಗೆ ಹಾಗೂ ನಿಮ್ಮ ಹಕ್ಕುಗಳ ಬಗ್ಗೆ ಓದಿಕೊಳ್ಳಿರಿ ಮತ್ತು ಅರ್ಥ ಮಾಡಿಕೊಳ್ಳಿರಿ. ವಿಶೇಷವಾಗಿ ದೌರ್ಜನ್ಯ, ನಿರ್ಲಕ್ಷ್ಯ, ಅನಾದರಣೆ, ಕೌಟುಂಬಿಕ ಹಿಂಸೆ, ಶಾಶ್ವತ ನಿವಾಸಿ ರಹದಾರಿ ಪಡೆಯುವ ವಿಧಾನಗಳು ಇತ್ಯಾದಿಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಿರಿ.
- ವಿವಾಹಾನಂತರ, ನೀವು ನೆಲೆಸಿರುವ ದೇಶದ ಭಾಷೆಯನ್ನು ಕಲಿತುಕೊಳ್ಳಲು ಸಾಧ್ಯವಿದ್ದಲ್ಲಿ/ ಸಾಧ್ಯವಾದಷ್ಟೂ ಪ್ರಯತ್ನಿಸಿರಿ.

**7) ತಮ್ಮ ವಿದೇಶೀ ಸಂಗಾತಿ/ ಪತಿಯಿಂದ ಪರಿತ್ಯಕ್ತರಾಗಿರುವ ಭಾರತೀಯ ಮಹಿಳೆಯರಿಗೆ ವಿದೇಶ ವ್ಯವಹಾರಗಳ ಸಚಿವಾಲಯವು ಕಾನೂನು ಮತ್ತು ಆರ್ಥಿಕ ಸಹಾಯವನ್ನು ಒದಗಿಸುತ್ತದೆಯೆ?**

- ಹೌದು. ತಮ್ಮ ವಿದೇಶೀ ಸಂಗಾತಿ/ ಪತಿಯಿಂದ ಪರಿತ್ಯಕ್ತರಾಗಿರುವ ಭಾರತೀಯ ಮಹಿಳೆಯರಿಗೆ ಕಾನೂನು ಮತ್ತು ಆರ್ಥಿಕ ಸಹಾಯವನ್ನೊದಗಿಸಲು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಯೋಜನೆಯನ್ನು ಹಮ್ಮಿಕೊಂಡಿದೆ. ನಿಗದಿಪಡಿಸಿದ ಸರ್ಕಾರೇತರ ಸಂಸ್ಥೆಗಳು, ಕಾನೂನಾತ್ಮಕ ಸಂಸ್ಥೆಗಳು, ರಾಯಭಾರ ಕಚೇರಿಗಳ ಮೂಲಕ ಈ ಸಹಾಯವನ್ನು ಒದಗಿಸಲಾಗುತ್ತದೆ.
- ಇಂತಹ ಸಹಾಯವನ್ನು ಅಮೆರಿಕ, ಇಂಗ್ಲೆಂಡ್, ಕೆನಡ, ಆಸ್ಟ್ರೇಲಿಯ, ನ್ಯೂಝಿಲೆಂಡ್, ಮಲೇಷಿಯ, ಸಿಂಗಾಪುರ ಮತ್ತು ಗಲ್ಫ್ ರಾಷ್ಟ್ರಗಳಾದ ಓಮನ್, ಬಹರೇನ್, ಕುವೈತ್, ಕತಾರ್, ಸೌದಿ ಅರೇಬಿಯ ದೇಶಗಳಲ್ಲಿ ಆಯಾ ದೇಶಗಳ ರಾಯಭಾರ/ ದೂತಾವಾಸ ಕಚೇರಿಗಳ ಮೂಲಕ ಒದಗಿಸಲಾಗುತ್ತದೆ.
- ಹೀಗೆ ಒದಗಿಸುವ ಸಹಾಯದ ಮೊತ್ತವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ US $ 3,000.00 ದವರೆಗಿದ್ದರೆ, ಅಭಿವೃದ್ಧಿಪರ ದೇಶಗಳಲ್ಲಿ US $ 2,000.00 ದವರೆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಆಯಾ ದೇಶಗಳಲ್ಲಿರುವ ಭಾರತೀಯ ರಾಯಭಾರ/ ದೂತಾವಾಸ ಕಚೇರಿಗಳ ಕಲ್ಯಾಣಾಧಿಕಾರಿ/ ಭಾರತೀಯ ಸಮುದಾಯ ಅಧಿಕಾರಿಯನ್ನು ಸಂಪರ್ಕಿಸಿರಿ.

ಸಂಪರ್ಕಿಸಬೇಕಾದ ಅಂತರ್ಜಾಲ ವಿಳಾಸ : http://mea.gov.in/legal-and-financial-assistance.htm.

**8) ತಮ್ಮ ವಿದೇಶೀ ಸಂಗಾತಿ/ ಪತಿಯಿಂದ ಪರಿತ್ಯಕ್ತರಾಗಿರುವ ಭಾರತೀಯ ಮಹಿಳೆಯರಿಗೆ ಇರುವ ಯೋಜನೆಗಳ ಉದ್ದೇಶವೇನು?**

ಈ ಯೋಜನೆಯು, ತಮ್ಮ ವಿದೇಶೀ ಸಂಗಾತಿ/ ಪತಿಯಿಂದ ಪರಿತ್ಯಕ್ತರಾಗಿರುವ ಭಾರತೀಯ ಮಹಿಳೆಯರಿಗೆ ಸಹಾಯ ಒದಗಿಸಲೆಂದು ಮಾಡಿರುವ ಒಂದು ಕಲ್ಯಾಣ ಕಾರ್ಯಕ್ರಮವಾಗಿದೆ. ಆಯಾ ದೇಶಗಳ ದೂತಾವಾಸ ಕಚೇರಿಗಳ ಮೂಲಕ, ಅವು ನಿಗದಿಪಡಿಸಿರುವ ಸರ್ಕಾರೇತರ ಸಂಸ್ಥೆಗಳ ಮೂಲಕ ಈ ಸಹಾಯವನ್ನು ಒದಗಿಸಲಾಗುತ್ತದೆ.

**9) ಈ ಯೋಜನೆ ಅಡಿಯಲ್ಲಿ ಸಹಾಯ ಪಡೆಯಲು ಯಾರು ಅರ್ಹರು?**

ವಿದೇಶದಲ್ಲಿ ತಮ್ಮ ವಿದೇಶೀ ಸಂಗಾತಿ/ ಪತಿಯಿಂದ ಪರಿತ್ಯಕ್ತರಾಗಿರುವ ಅಥವ ವಿಚ್ಛೇದನ ಕಾನೂನು ಕ್ರಮ ಎದುರಿಸುತ್ತಿರುವ ಭಾರತೀಯ ಮಹಿಳೆಯರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಈ ಸಹಾಯವು ದೊರೆಯುತ್ತದೆ.

i. ಅಂತಹ ಮಹಿಳೆಯು ಭಾರತೀಯ ಪಾಸ್‌ಪೋರ್ಟ್ ಹೊಂದಿರಬೇಕು.

ii. ಅನಿವಾಸಿ/ ವಿದೇಶೀ ಭಾರತೀಯ/ ವಿದೇಶಿಯನೊಂದಿಗೆ ಮಹಿಳೆಯ ವಿವಾಹವು ಭಾರತದಲ್ಲಿ ಅಥವ ವಿದೇಶದಲ್ಲಿ ವಿಧ್ಯುಕ್ತವಾಗಿ ನಡೆದಿರಬೇಕು.

iii. ವಿವಾಹವಾದ 15 ವರ್ಷಗಳೊಳಗೆ ಮಹಿಳೆಯು ಭಾರತದಲ್ಲಿ ಅಥವ ವಿದೇಶದಲ್ಲಿ ಪತಿಯಿಂದ ಪರಿತ್ಯಕ್ತಗೊಂಡಿರಬೇಕು.

iv. ವಿವಾಹವಾದ 15 ವರ್ಷಗಳೊಳಗೆ ಮಹಿಳೆಯ ವಿದೇಶೀ ಭಾರತೀಯ/ ವಿದೇಶೀ ಪತಿಯು ವಿಚ್ಛೇದನಕ್ಕೆ ಕಾನೂನು ಕ್ರಮ ಆರಂಭಿಸಿರಬೇಕು.

v. ವಿವಾಹವಾದ 20 ವರ್ಷಗಳೊಳಗೆ ಮಹಿಳೆಯ ಅನುಪಸ್ಥಿತಿಯಲ್ಲಿ ವಿದೇಶೀ ಭಾರತೀಯ/ ವಿದೇಶೀ ಪತಿಯು ವಿಚ್ಛೇದನ ಪಡೆದುಕೊಂಡಿದ್ದು, ಮಹಿಳೆಯು ಜೀವನಾಂಶ ಮತ್ತು ಅಸನ–ವಸನಗಳಿಗಾಗಿ ದಾವೆ ಹೂಡಿರಬೇಕು.

vi. ಸಕ್ಷಮ ನ್ಯಾಯಾಲಯದಿಂದ ಮಗುವಿನ ಜವಾಬ್ದಾರಿಯು ಯಾರದೆಂದು ತೀರ್ಮಾನವಾಗದಿರುವಾಗ 'ಪೋಷಕರಿಂದ ಮಕ್ಕಳ ಅಪಹರಣ' ರೀತಿಯ ಆರೋಪದ ಹೊರತಾಗಿ, ಮಹಿಳೆಯು ಯಾವುದೇ ಕ್ರಿಮಿನಲ್ ದಾವೆಯಲ್ಲಿ ತಪ್ಪಿತಸ್ಥಳೆಂದು ತೀರ್ಮಾನವಾಗಿದ್ದಲ್ಲಿ ಆಕೆಗೆ ಈ ಸೌಲಭ್ಯವು ದೊರೆಯುವುದಿಲ್ಲ.

vii. 'ಪೋಷಕರಿಂದ ಮಕ್ಕಳ ಅಪಹರಣ' ಎಂದರೆ, ತಂದೆಯ ಒಪ್ಪಿಗೆ ಇಲ್ಲದೆ ಅಕ್ರಮವಾಗಿ ತಾಯಿಯು ಮಗುವನ್ನು ಅಧೀನದಲ್ಲಿಟ್ಟುಕೊಳ್ಳುವುದು, ಕೌಟುಂಬಿಕ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ತಂದೆಯ ಅಥವ ಅವರ ಕುಟುಂಬದವರ ರಕ್ಷಣೆ, ಅಧೀನತೆ ಮತ್ತು ಸಂಪರ್ಕವನ್ನು ಪ್ರತಿಬಂಧಿಸಿ, ಮಗುವನ್ನು ತಾಯಿಯು ತನ್ನ ಅಧೀನದಲ್ಲಿಟ್ಟುಕೊಳ್ಳುವುದನ್ನು 'ಪೋಷಕರಿಂದ ಮಕ್ಕಳ ಅಪಹರಣ' ಎಂದು ಪರಿಭಾವಿಸಲಾಗುತ್ತದೆ.

viii. ಸ್ವಾಧೀನ ಡಿಕ್ರಿ ಅಥವ ಭೇಟಿ ಆದೇಶದ ವಿರುದ್ಧ ಮಗು ಅಥವ ಮಕ್ಕಳನ್ನು ಪೋಷಕರು, ಸಂಬಂಧಿಕರು ಅಥವ ಪರಿಚಿತರು ದೇಶದಿಂದ ಹೊರಗೆ ಕರೆದೊಯ್ದಲ್ಲಿ ಅದನ್ನು 'ಅಂತಾರಾಷ್ಟ್ರೀಯ ಮಕ್ಕಳ ಅಪಹರಣ' ಎನ್ನಲಾಗುತ್ತದೆ. ಮಕ್ಕಳನ್ನು ರಜೆಯಲ್ಲಿ ಬೇರೆ ದೇಶಕ್ಕೆ ಕರೆದೊಯ್ದು ಹಿಂದಿರುಗಿ ಕರೆತರದಿರುವುದು ಇನ್ನೊಂದು ರೀತಿಯ 'ಅಂತಾರಾಷ್ಟ್ರೀಯ ಮಕ್ಕಳ ಅಪಹರಣ'ವಾಗುತ್ತದೆ.

ix. ಎಫ್.ಐ.ಆರ್. ಅಥವ ಅಂತಹ ದೂರಿನ ಆಧಾರದ ಮೇಲೆ ಪೊಲೀಸರು ತಾಯಿಯ ವಿರುದ್ಧ ಆರೋಪ ಪಟ್ಟಿ ಸಿದ್ಧಪಡಿಸಿದಾಗ ಅದನ್ನು 'ಪೋಷಕರಿಂದ ಮಗುವಿನ ಅಪಹರಣದ ಕ್ರಿಮಿನಲ್ ಆರೋಪ' ಎಂದು ಈ ಯೋಜನೆಯಲ್ಲಿ ಪರಿಗಣಿಸಲಾಗುತ್ತದೆ.

x. ಈ ಯೋಜನೆಯ ಅಡಿಯಲ್ಲಿ ಸೌಲಭ್ಯವನ್ನು ಪಡೆಯಲು ಉದ್ದೇಶಿಸಿರುವ ಮಹಿಳೆಯು ಯಾವ ದೇಶದಲ್ಲಿ ನೆಲೆಸಿದ್ದಾಳೆಂಬುದು ಇಲ್ಲಿ ಪ್ರಕೃತವಾಗುವುದಿಲ್ಲ. ಯಾವ ದೇಶದಲ್ಲಿ ನೆಲೆಸಿದ್ದರೂ ಅರ್ಹ ಮಹಿಳೆಗೆ ಈ ಸೌಲಭ್ಯವು ದೊರೆಯುತ್ತದೆ. ಅಂತಹ ಮಹಿಳೆಯು ಈ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಾಗ ವಿದೇಶೀ ಭಾರತೀಯ/ ವಿದೇಶೀ ಪತಿಯ ದೇಶದಲ್ಲಾದರೂ ಇರಬಹುದು ಅಥವ ಭಾರತದಲ್ಲಾದರೂ ಇರಬಹುದು.

xi. ಅರ್ಜಿಗಳು ಬಹಳ ಸಂಖ್ಯೆಯಲ್ಲಿದ್ದಾಗ ಆರ್ಥಿಕ ಅವಶ್ಯಕತೆಯ ಆಧಾರದ ಮೇಲೆ ಅರ್ಜಿದಾರರ ಆದ್ಯತೆಯು ನಿರ್ಧರಿಸಲ್ಪಡುವುದು.

xii. ಅರ್ಜಿದಾರಳ ಕಾನೂನು ಪ್ರಕ್ರಿಯೆಯ ಹಾಗೂ ಇತರ ವೆಚ್ಚಗಳನ್ನು ಭರಿಸಲು ಪ್ರಸ್ತುತ ಆರ್ಥಿಕ ಸಹಾಯವನ್ನು ಭಾರತೀಯ ದೂತಾವಾಸಗಳು ಗುರುತಿಸಿ ನಿಗದಿಪಡಿಸಿರುವ ಅಥವ ಭಾರತೀಯ ಮಹಿಳಾ ಸಂಸ್ಥೆಗಳ/ ಭಾರತೀಯ ಸಮುದಾಯ ಸಂಘಗಳ/ ಸರ್ಕಾರೇತರ ಸಂಸ್ಥೆಗಳ ಮುಖ್ಯಸ್ಥರ ಮೂಲಕ ಅರ್ಜಿದಾರಳ ಕಾನೂನು ಸಲಹೆಗಾರರಿಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತದೆ.

xiii. ಹೀಗೆ ಒದಗಿಸುವ ಸಹಾಯದ ಮೊತ್ತವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ US $ 3,000 ದವರೆಗಿದ್ದರೆ, ಅಭಿವೃದ್ಧಿಪರ ದೇಶಗಳಲ್ಲಿ US $ 2,000 ದವರೆಗಿರುತ್ತದೆ. ಮಹಿಳೆಯು ತನ್ನ ದಾವೆಯನ್ನು ಹೂಡಲು ಹಾಗೂ ಅದಕ್ಕೆ ಬೇಕಾಗುವ ದಾಖಲೆಗಳನ್ನು ಹಾಗೂ ಪೂರ್ವತಯಾರಿಯ ಕೆಲಸಗಳನ್ನು ಮಾಡಿಕೊಳ್ಳಲು ಅನುವಾಗುವಂತೆ ಪ್ರಸ್ತುತ ಆರ್ಥಿಕ ಸಹಾಯವನ್ನು ಕಾನೂನು ಸಲಹೆಗಾರರಿಗೆ ಅಥವ ಭಾರತೀಯ ದೂತಾವಾಸಗಳು ಗುರುತಿಸಿ ನಿಗದಿಪಡಿಸಿರುವ ಸಂಬಂಧಿತ ವಿಶ್ವಾಸಾರ್ಹ ಭಾರತೀಯ ಮಹಿಳಾ ಸಂಸ್ಥೆಗಳಿಗೆ/ ಭಾರತೀಯ ಸಮುದಾಯ ಸಂಘಗಳಿಗೆ/ ಸರ್ಕಾರೇತರ ಸಂಸ್ಥೆಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತದೆ.

**10) ಅನಿವಾಸಿ ಭಾರತೀಯ ಪತಿಯಿಂದ ಪರಿತ್ಯಕ್ತಳಾದ ಭಾರತೀಯ ಮಹಿಳೆಗೆ ಸಲಹೆ, ಸೂಚನೆಗಳನ್ನೂ, ಕಾನೂನು ಸೇವೆಗಳನ್ನೂ ಹೇಗೆ ಒದಗಿಸಲಾಗುತ್ತದೆ?**

ಅಮೆರಿಕ, ಇಂಗ್ಲೆಂಡ್, ಕೆನಡ, ಆಸ್ಟ್ರೇಲಿಯ, ನ್ಯೂಝಿಲೆಂಡ್, ಮಲೇಷಿಯ, ಸಿಂಗಾಪುರ, ಗಲ್ಫ್ ದೇಶಗಳು ಮುಂತಾದೆಡೆಗಳಲ್ಲಿರುವಂತೆ, ಭಾರತೀಯ ದೂತಾವಾಸ ಕಚೇರಿಗಳು ಗುರುತಿಸಿ ನಿಗದಿಪಡಿಸಿರುವ ಅಂತಹ ಕಾನೂನು ಸೇವೆಗಳನ್ನು ಒದಗಿಸುವ ವಿಶ್ವಾಸಾರ್ಹ ಭಾರತೀಯ ಮಹಿಳಾ ಸಂಸ್ಥೆಗಳ/ ಭಾರತೀಯ ಸಮುದಾಯ ಸಂಘಗಳ/ ಸರ್ಕಾರೇತರ ಸಂಸ್ಥೆಗಳ ಮೂಲಕ ಇಂತಹ ಸಲಹೆ, ಸೂಚನೆಗಳನ್ನೂ, ಕಾನೂನು ಸೇವೆಗಳನ್ನೂ ಒದಗಿಸಲಾಗುತ್ತದೆ.

**11) ಈ ಯೋಜನೆ ಅಡಿಯಲ್ಲಿ ಇಂತಹ ಸಹಾಯಕ್ಕಾಗಿ ಸಲ್ಲಿಸಲು ಅರ್ಜಿ ನಮೂನೆಗಳಿವೆಯೆ?**

ವಿದೇಶಾಂಗ ಸಚಿವಾಲಯದ ಅಂತರ್ಜಾಲ ತಾಣವಾದ http://mea.gov.in/legal-and-financial-assistance.htm ನಲ್ಲಿ ಇದಕ್ಕಾಗಿ ಉಪಯೋಗಿಸಬೇಕಾದ ಅರ್ಜಿ ನಮೂನೆಯನ್ನು ಒದಗಿಸಲಾಗಿದೆ. ಈ ಸೌಲಭ್ಯಕ್ಕಾಗಿ ಸ್ವೀಕರಿಸಿದ ಅರ್ಜಿಗಳನ್ನು ಭಾರತೀಯ ದೂತಾವಾಸ/ ನಿಯೋಗಗಳ ಕಚೇರಿಗಳ ಮುಖ್ಯಸ್ಥರು ನಿಯೋಜಿಸಿರುವ ಅಧಿಕಾರಿಯು ಒಂದೊಂದು ಅರ್ಜಿಯನ್ನೂ ಕೂಲಂಕಷವಾಗಿ ಪರಿಶೀಲಿಸಿ, ನಂತರ ಆಯಾ ದೂತಾವಾಸ/ ನಿಯೋಗಗಳ ಕಚೇರಿಗಳ ಮುಖ್ಯಸ್ಥರು/ ಉಪ ಮುಖ್ಯಸ್ಥರು ಅನುಮೋದಿಸಿದ ಮೇಲೆ, ವಿದೇಶ ಸಚಿವಾಲಯವು ಆರ್ಥಿಕ ಹಾಗೂ ಕಾನೂನು ಸೇವೆಗಳನ್ನು ಒದಗಿಸಲು ಅರ್ಜಿಯನ್ನು ಪರಿಗಣಿಸುತ್ತದೆ.

**12) ಈ ಯೋಜನೆ ಅಡಿಯಲ್ಲಿ ಸಹಾಯವನ್ನು ಪಡೆಯಲು ಅನುಸರಿಸಬೇಕಾದ ವಿಧಾನಗಳೇನು?**

ಆರ್ಥಿಕ ಮತ್ತು ಕಾನೂನು ಸೇವೆಗಳನ್ನು ಅಪೇಕ್ಷಿಸುವ ಅಭ್ಯರ್ಥಿಗಳು ಮೇಲೆ ತಿಳಿಸಿರುವ ಭರ್ತಿ ಮಾಡಿ ಸಹಿ ಮಾಡಿರುವ ಅರ್ಜಿ ನಮೂನೆಯನ್ನು ಈ ಕೆಳಗೆ ಪಟ್ಟಿ ಮಾಡಿರುವ ಸೂಕ್ತ ದಾಖಲೆಗಳೊಡನೆ, ಮೇಲೆ ತಿಳಿಸಿರುವ ಯಾವುದಾದರೂ ಸಂಸ್ಥೆಗೆ ತಲುಪಿಸಬೇಕು:

i. ಅರ್ಜಿದಾರಳ ವಿವಾಹ ನೋಂದಣಿ ಪ್ರತಿ,

ii. ಅರ್ಜಿದಾರಳ ಭಾರತೀಯ ಪಾಸ್‌ಪೋರ್ಟ್ ಪ್ರತಿ,

iii. ವಾರ್ಷಿಕ ಆದಾಯ ಘೋಷಣಾ ಪ್ರತಿ,

iv. ಹೂಡಿರುವ ಮೊಕದ್ದಮೆಯ ಸದ್ಯದ ಸ್ಥಿತಿಯ ವಿವರಗಳು. ಮೊಕದ್ದಮೆ ಮುಗಿದ ನಂತರ ಅದರ ವಿವರ/ ದಾಖಲೆಗಳನ್ನು ಆಯಾ ದೇಶದ ಭಾರತೀಯ ದೂತಾವಾಸ/ ನಿಯೋಗಗಳ ಕಚೇರಿಗಳಿಗಾಗಲೀ, ಭಾರತದ ವಿದೇಶಾಂಗ ಸಚಿವಾಲಯದ ಸಾಗರೋತ್ತರ ಭಾರತೀಯ ವ್ಯವಹಾರಗಳ ವಿಭಾಗ–IIಕ್ಕಾಗಲೀ ಕಳುಹಿಸಬೇಕು.

ಈ ಸೌಲಭ್ಯಕ್ಕಾಗಿ ಸ್ವೀಕರಿಸಿದ ಅರ್ಜಿಗಳನ್ನು ಭಾರತೀಯ ದೂತಾವಾಸ/ ನಿಯೋಗಗಳ ಕಚೇರಿಗಳ ಮುಖ್ಯಸ್ಥರು ನಿಯೋಜಿಸಿರುವ ಅಧಿಕಾರಿಯು ಒಂದೊಂದು ಅರ್ಜಿಯನ್ನೂ ಕೂಲಂಕಷವಾಗಿ ಪರಿಶೀಲಿಸಿ, ನಂತರ ಆಯಾ ದೂತಾವಾಸ/ ನಿಯೋಗಗಳ ಕಚೇರಿಗಳ ಮುಖ್ಯಸ್ಥರು/ ಉಪ ಮುಖ್ಯಸ್ಥರು ಅನುಮೋದಿಸಿದ ಮೇಲೆ, ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಆರ್ಥಿಕ ಹಾಗೂ ಕಾನೂನು ಸೇವೆಗಳನ್ನು ಒದಗಿಸಲು ಅರ್ಜಿಯನ್ನು ಪರಿಗಣಿಸುತ್ತದೆ.

**13) ವಿದೇಶಾಂಗ ಸಚಿವಾಲಯದ ಯೋಜನೆಯ ಅಡಿಯಲ್ಲಿನ ಸೌಲಭ್ಯವನ್ನು ಪಡೆಯುವ ಅರ್ಜಿಯನ್ನು ಯಾರ ವಿಳಾಸಕ್ಕೆ ರವಾನಿಸಬೇಕು?**

ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಬೇಕು:

ಜಂಟಿ ಕಾರ್ಯದರ್ಶಿ (Joint Secretary),
ಸಾಗರೋತ್ತರ ಭಾರತೀಯ ವ್ಯವಹಾರಗಳು–ವಿಭಾಗ II (Overseas Indian Affairs-II),
ವಿದೇಶಾಂಗ ವ್ಯವಹಾರಗಳ ಸಚಿವಾಲಯ (Ministry of External Affairs),
ಅಕ್ಬರ್ ಭವನ, ಚಾಣಕ್ಯಪುರಿ (Akbr Bhavan, Chanakyapuri),
ನವದೆಹಲಿ (New Delhi).
ದೂರವಾಣಿ : **011–2467 6210,**
ಫ್ಯಾಕ್ಸ್ : **011–2688 2431,**
ಇ–ಅಂಚೆ : isoia2@mea.gov.in

**14) ವಿದೇಶೀ ವರನ ವಿರುದ್ಧ ಮೋಸ, ದೈಹಿಕ ಹಲ್ಲೆ/ ಹಿಂಸೆ ಹಾಗೂ ವಿವಾಹದ ಮಿಥ್ಯಾ ಭರವಸೆಯ ಆರೋಪಗಳಿದ್ದರೆ, ಆತನ ವಿರುದ್ಧ ಏನೇನು ಕ್ರಮಗಳನ್ನು ಕೈಗೊಳ್ಳಬಹುದು?**

i. ಸಕ್ಷಮ ವ್ಯಾಪ್ತಿಯ ನ್ಯಾಯಾಲಯಗಳಲ್ಲಿ ಆತನ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸಬಹುದು. ಅಂತಹ ಆರೋಪಿಯ ವಿರುದ್ಧ ನ್ಯಾಯಾಲಯವು ಸಮನ್ಸ್/ ನೋಟೀಸು/ ವಾರಂಟುಗಳನ್ನು ಹೊರಡಿಸಬಹುದು.

ii. ವಿದೇಶ ಸಚಿವಾಲಯದ ಯೋಜನೆಯ ಅಡಿಯಲ್ಲಿ ನೀವು ಕಾನೂನು/ ಆರ್ಥಿಕ ಸಹಾಯಕ್ಕೆ ಅರ್ಜಿ ಹಾಕಿಕೊಳ್ಳಬಹುದು. ತಮ್ಮ ಸಾಗರೋತ್ತರ ಭಾರತೀಯ/ ವಿದೇಶೀ ಪತಿಯಿಂದ ಪರಿತ್ಯಕ್ತರಾದ ಅಥವ ಆತನಿಂದ ವಿದೇಶದಲ್ಲಿ ವಿವಾಹ ವಿಚ್ಛೇದನದ ಕಾನೂನು ಕ್ರಮವನ್ನೆದುರಿಸುತ್ತಿರುವ ಭಾರತೀಯ ಮಹಿಳೆಯರಿಗೆ ಈ ಯೋಜನೆಯು ದೊರೆಯುತ್ತದೆ. ಇಂತಹ ಭಾರತೀಯ ಮಹಿಳಾ ಅರ್ಜಿದಾರರು ವಿದೇಶೀ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸುವ ತಮ್ಮ ಅಪೇಕ್ಷೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರೆ, ಅಂತಹವರಿಗೆ ಈ ಯೋಜನೆಯ ಅಡಿಯಲ್ಲಿ ಸಹಾಯವು ಲಭಿಸುತ್ತದೆ. ಆದರೆ ಭಾರತದ ನ್ಯಾಯಾಲಯಗಳಲ್ಲಿ ಹೂಡುವ ಮೊಕದ್ದಮೆಗಳಿಗೆ ಈ ಯೋಜನೆಯ ಸಹಾಯವು ದೊರೆಯುವುದಿಲ್ಲ.

iii. ತಮ್ಮ ಸಾಗರೋತ್ತರ ಭಾರತೀಯ/ ವಿದೇಶೀ ಪತಿಯಿಂದ ಪರಿತ್ಯಕ್ತರಾದ ಭಾರತೀಯ ಮಹಿಳೆಯರಿಗೆ ಕಾನೂನು/ ಆರ್ಥಿಕ ಸಹಾಯ ಒದಗಿಸಲೆಂದು ಭಾರತೀಯ ದೂತಾವಾಸ/ ನಿಯೋಗದ ಕಚೇರಿಗಳು ಗುರುತಿಸಿ ನಿಗದಿಪಡಿಸಿರುವ ಅಂತಹ ಕಾನೂನು ಸೇವೆಗಳನ್ನು ಒದಗಿಸುವ ವಿಶ್ವಾಸಾರ್ಹ ಭಾರತೀಯ ಮಹಿಳಾ ಸಂಸ್ಥೆಗಳು/ ಭಾರತೀಯ ಸಮುದಾಯ ಸಂಘಗಳು/ ಸರ್ಕಾರೇತರ ಸಂಸ್ಥೆಗಳು ನಿಮಗೆ ಸಹಾಯ ಒದಗಿಸಬಲ್ಲವು.

iv. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಈ ಯೋಜನೆಯ ಅಡಿಯಲ್ಲಿ ಸಿಗುವ ಕಾನೂನು/ ಆರ್ಥಿಕ ಸಹಾಯದ ವಿವರಗಳು ಹಾಗೂ ಅವನ್ನು ಒದಗಿಸುವ ಅಂತಹ ಸಂಸ್ಥೆ/ ಸರ್ಕಾರೇತರ ಸಂಸ್ಥೆಗಳ ಪಟ್ಟಿಯನ್ನು http://mea.gov.in/legal-and-financial-assistance.htm ಈ ಜಾಲತಾಣದಲ್ಲಿ ನೀಡಲಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಂತರ್ಜಾಲ ತಾಣವಾದ http://mea.gov.in/legal-and-financial-assistance.htm ನಲ್ಲಿ ಇದಕ್ಕಾಗಿ ಉಪಯೋಗಿಸಬೇಕಾದ ಅರ್ಜಿ ನಮೂನೆಯನ್ನು ಒದಗಿಸಲಾಗಿದೆ. ಈ ಸೌಲಭ್ಯಕ್ಕಾಗಿ ಸ್ವೀಕರಿಸಿದ ಅರ್ಜಿಗಳನ್ನು ಭಾರತೀಯ ದೂತಾವಾಸ/ ನಿಯೋಗಗಳ ಕಚೇರಿಗಳ ಮುಖ್ಯಸ್ಥರು ನಿಯೋಜಿಸಿರುವ ಅಧಿಕಾರಿಯು ಒಂದೊಂದು ಅರ್ಜಿಯನ್ನೂ ಕೂಲಂಕಷವಾಗಿ ಪರಿಶೀಲಿಸಿ, ನಂತರ ಆಯಾ ದೂತಾವಾಸ/ ನಿಯೋಗಗಳ ಕಚೇರಿಗಳ ಮುಖ್ಯಸ್ಥರು/ ಉಪಮುಖ್ಯಸ್ಥರು ಅನುಮೋದಿಸಿದ ಮೇಲೆ, ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಆರ್ಥಿಕ ಹಾಗೂ ಕಾನೂನು ಸೇವೆಗಳನ್ನು ಒದಗಿಸಲು ಅರ್ಜಿಯನ್ನು ಪರಿಗಣಿಸುತ್ತದೆ.

v. ನೀವು ಇರುವ ದೇಶದ ಭಾರತೀಯ ರಾಯಭಾರ/ ದೂತಾವಾಸ ಕಚೇರಿಯನ್ನೂ ಸಹ ಸಂಪರ್ಕಿಸಬಹುದು.

**15) ನನ್ನ ಅನುಪಸ್ಥಿತಿಯಲ್ಲಿ ನನ್ನ ಪತಿಯು ವಿದೇಶೀ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನಕ್ಕೆ ಡಿಕ್ರಿ ಪಡೆದುಕೊಂಡಿದ್ದಾನೆ. ಈಗ ನನಗೆ ಭಾರತದಲ್ಲಿ ಯಾವ ರೀತಿಯ ಕಾನೂನಾತ್ಮಕ ರಕ್ಷಣೆಗಳು ಸಿಗುತ್ತವೆ?**

1994ರಲ್ಲಿ ಶ್ರೀ ಜಯಂತ್ ಸರಾಫ್ ವಿರುದ್ಧ ಶ್ರೀಮತಿ ನೀರಜಾ ಸರಾಫ್ ಹೂಡಿದ ಮೊಕದ್ದಮೆಯಲ್ಲಿ ಮಹಿಳೆಯರ ಹಿತಾಸಕ್ತಿಗಳನ್ನು ಕಾಪಾಡುವ ಕಾನೂನುಗಳನ್ನು ರಚಿಸುವ ಅವಶ್ಯಕತೆಯನ್ನು ಸರ್ವೋಚ್ಚ ನ್ಯಾಯಾಲಯವು ಸೂಚಿಸಿತ್ತು. ಅದರಲ್ಲಿ ಈ ಕೆಳಗಿನ ಮೂರು ನಿರ್ದಿಷ್ಟ ಅಂಶಗಳನ್ನು ಸೂಚಿಸಲಾಗಿದೆ:

i. ಅನಿವಾಸಿ ಭಾರತೀಯರೊಂದಿಗೆ ಭಾರತದಲ್ಲಿ ಜರುಗಿರುವ ಭಾರತೀಯ ಮಹಿಳೆಯ ಯಾವುದೇ ವಿವಾಹವನ್ನು ಯಾವುದೇ ವಿದೇಶೀ ನ್ಯಾಯಾಲಯವು ಅನೂರ್ಜಿತಗೊಳಿಸಲಾಗದು,

ii. ಭಾರತ ಹಾಗೂ ವಿದೇಶಗಳಲ್ಲಿ ಪತಿಯು ಹೊಂದಿರುವ ಆಸ್ತಿಯಲ್ಲಿ ಪತ್ನಿಗೆ ಸಾಕಷ್ಟು ಜೀವನಾಂಶವು ಸಿಗುವಂತೆ ಮಾಡಲು ಸೂಕ್ತ ವ್ಯವಸ್ಥೆಯಾಗಬೇಕು,

iii. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 44ಎ ಪ್ರಕಾರ ವಿದೇಶೀ ನ್ಯಾಯಾಲಯದ ಡಿಕ್ರಿಯನ್ನು ನಮ್ಮದೇ ನ್ಯಾಯಾಲಯದ ಡಿಕ್ರಿಯಂತೆ ಭಾರತದಲ್ಲಿ ಜರುಗಿಸುವ ಅವಕಾಶವಿರುವಂತೆಯೇ, ಭಾರತೀಯ ನ್ಯಾಯಾಲಯಗಳ ಡಿಕ್ರಿಯನ್ನೂ ಕೂಡ ವಿದೇಶಗಳಲ್ಲಿ ಅನುಷ್ಠಾನಗೊಳಿಸುವ/ ಜರುಗಿಸುವ ಅವಕಾಶವನ್ನು ಸೌಹಾರ್ದತೆಯ ತತ್ವದ ಹಾಗೂ ಪರಸ್ಪರ ಒಪ್ಪಂದದ ಮೂಲಕ ಒದಗಿಸುವ ವ್ಯವಸ್ಥೆಯಾಗಬೇಕು.

**16)** **(ಅ) ನನ್ನ ಪತಿಯ ವಿರುದ್ಧ ನಾನು ಆಶ್ರಯ ಪಡೆಯುವ/ ಕ್ರಿಮಿನಲ್ ಕಾನೂನು ಕ್ರಮ ಜರುಗಿಸುವ ಪ್ರಕ್ರಿಯೆಗಳನ್ನು ಹೇಗೆ ಆರಂಭಿಸಬಹುದು?**

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 154(1)ರ ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಡಿಯಲ್ಲಿ ನಿಮ್ಮ ಪತಿಯ ವಿರುದ್ಧ ನೀವು ಕ್ರಿಮಿನಲ್ ಮೊಕದ್ದಮೆ ಹೂಡಬಹುದು.

**(ಆ) ಐ.ಪಿ.ಸಿ. ಸೆಕ್ಷನ್ 498ಎ ಎಂದರೇನು?**

ಮಹಿಳೆಯರ ಮೇಲೆ ಹಿಂಸೆ, ದೌರ್ಜನ್ಯ ನಡೆಸುವ ಪತಿ ಅಥವ ಅವನ ಸಂಬಂಧಿಕರ ವಿರುದ್ಧ ವ್ಯವಹರಿಸಲು ಇರುವ ಕಾನೂನು ಈ ಸೆಕ್ಷನ್ 498ಎ. ಇದರ ಪ್ರಕಾರ ತಪ್ಪಿತಸ್ಥರಿಗೆ ಮೂರು ವರ್ಷಗಳವರೆಗೆ ಸೆರೆವಾಸ ಹಾಗೂ ದಂಡ ವಿಧಿಸಿ ಶಿಕ್ಷಿಸಬಹುದು.

**(ಇ) ಪೊಲೀಸರು ಎಫ್.ಐ.ಆರ್. ದಾಖಲಿಸಲು ನಿರಾಕರಿಸಿದರೆ ಏನು ಮಾಡಬೇಕು?**

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 154(3)ರ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಠಾಣಾಧಿಕಾರಿಗೆ ನೀವು ಲಿಖಿತ ದೂರು ನೀಡಬೇಕು. ಪೊಲೀಸರು ದೂರನ್ನು ದಾಖಲಿಸಿಕೊಳ್ಳಲು ನಿರಾಕರಿಸಿದರೆ ಆಗ ನೀವು ಸಂಬಂಧಿಸಿದ ಜಿಲ್ಲೆಯ ಪೊಲೀಸು ಸೂಪರಿಂಟೆಂಡೆಂಟರಿಗೆ ದೂರನ್ನು ರವಾನಿಸಬಹುದು. ಮೇಲ್ನೋಟಕ್ಕೆ ನಿಮ್ಮ ದೂರಿನಲ್ಲಿ ಸತ್ಯಾಂಶವಿದೆ ಎನ್ನಿಸಿದರೆ, ಅವರು ಒಂದೋ ತಾವೇ ಆ ದೂರಿನ ತನಿಖೆ ಮಾಡಬಹುದು ಅಥವ ತಮ್ಮ ಯಾವುದಾದರೂ ಅಧೀನ ಅಧಿಕಾರಿಗೆ ಅದನ್ನು ತನಿಖೆ ಮಾಡುವ ಜವಾಬ್ದಾರಿಯನ್ನು ಒಪ್ಪಿಸಬಹುದು.

**(ಈ) ಪೊಲೀಸು ಸೂಪರಿಂಟೆಂಡೆಂಟರೂ ಕ್ರಮ ತೆಗೆದುಕೊಳ್ಳಲು ನಿರಾಕರಿಸಿದರೆ ಏನು ಮಾಡುವುದು?**

ಮ್ಯಾಜಿಸ್ಟ್ರೇಟರ ಮುಂದೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 156(3)ರ ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಡಿಯಲ್ಲಿ ಒಂದು ಕ್ರಿಮಿನಲ್ ದೂರು ಕೊಡಿರಿ. ಸಂತ್ರಸ್ತೆ ಪತ್ನಿಯ ಅಂತಹ ಕ್ರಿಮಿನಲ್ ದೂರಿನ ಆಧಾರದ ಮೇಲೆ ಸೆಕ್ಷನ್ 190ರ ಅಡಿಯಲ್ಲಿ ಅಧಿಕಾರ ಹೊಂದಿರುವ ಯಾವುದೇ ಮ್ಯಾಜಿಸ್ಟ್ರೇಟರೂ ಅಂತಹ ತನಿಖೆಗೆ ಆದೇಶಿಸಬಹುದಾಗಿದೆ.

ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್ 188ರ ಪ್ರಕಾರ ಪತಿಯಿಂದ ಭಾರತದ ಹೊರಗೆ ನಡೆದ ಎಲ್ಲಾ ಅಪರಾಧಗಳನ್ನೂ ಭಾರತದ ಗಡಿಯೊಳಗಡೆಯೇ ನಡೆದ ಅಪರಾಧಗಳೆಂದು ಪರಿಗಣಿಸಲಾಗುತ್ತದೆ.

**17)** **ಐ.ಪಿ.ಸಿ.ಯ 498ಎ ಸೆಕ್ಷನ್ನಿನ ಅಡಿಯಲ್ಲಿ ನಾನು ದೂರು ನೀಡಿದ್ದೇನೆ. ಆದರೆ ನನ್ನ ಅತ್ತೆ, ಮಾವಂದಿರು ನನ್ನನ್ನು ಮನೆಯಿಂದ ಹೊರಹಾಕಿದ್ದಾರೆ. ನಾನೇನು ಮಾಡಬೇಕು?**

'ಕೌಟುಂಬಿಕ ಹಿಂಸೆ ಕಾನೂನಿನ ಅಡಿಯಲ್ಲಿ ಮಹಿಳೆಯರ ರಕ್ಷಣೆ–2005' ಕಾನೂನಿನ ಅಡಿಯಲ್ಲಿ ನೀವು ಅರ್ಜಿ ಹಾಕಬಹುದು ಮತ್ತು ನ್ಯಾಯಾಲಯವು ನಿಮಗೆ ಮನೆಯಲ್ಲಿ ವಾಸಿಸುವ ಹಕ್ಕನ್ನು ನೀಡುತ್ತದೆ.

ಸಂತ್ರಸ್ತ ಮಹಿಳೆ ಅಥವ ಅವರ ರಕ್ಷಣಾಧಿಕಾರಿ ಅಥವ ಸಂತ್ರಸ್ತ ಮಹಿಳೆಯ ಪರವಾಗಿ ಯಾವುದೇ ವ್ಯಕ್ತಿಯು 'ಕೌಟುಂಬಿಕ ಹಿಂಸೆ ಕಾನೂನಿನ ಅಡಿಯಲ್ಲಿ ಮಹಿಳೆಯರ ರಕ್ಷಣೆ–2005' ಕಾನೂನಿನ ಸೆಕ್ಷನ್ 27ರ ಅಡಿಯಲ್ಲಿ ಸಹಾಯ ಕೋರಿ ಜುಡಿಷಿಯಲ್ ಮ್ಯಾಜಿಸ್ಟ್ರೇಟರಿಗೆ, ಈ ಕೆಳಕಂಡ ಸ್ಥಳೀಯ ಮಿತಿಗಳೊಳಗೆ ಜುಡಿಷಿಯಲ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಸಲ್ಲಿಸಬಹುದಾಗಿದೆ:

i. ಸಂತ್ರಸ್ತ ವ್ಯಕ್ತಿಯು ಶಾಶ್ವತವಾಗಿ ಅಥವ ತಾತ್ಕಾಲಿಕವಾಗಿ ವಾಸಿಸುತ್ತಿದ್ದರೆ ಅಥವ ವ್ಯಾಪಾರ–ವ್ಯವಹಾರ ನಡೆಸುತ್ತಿದ್ದರೆ ಅಥವ ನೌಕರಿಯಲ್ಲಿದ್ದರೆ ಅಥವ

ii. ಜವಾಬ್ದಾರಿ ಹೊತ್ತ ವ್ಯಕ್ತಿ ವಾಸಿಸುತ್ತಿದ್ದರೆ ಅಥವ ವ್ಯಾಪಾರ–ವ್ಯವಹಾರ ನಡೆಸುತ್ತಿದ್ದರೆ ಅಥವ ನೌಕರಿಯಲ್ಲಿದ್ದರೆ ಅಥವ

iii. ಅಂತಹ ಕ್ರಿಯೆಗಳು ಸಕಾರಣವಾಗಿದ್ದಲ್ಲಿ, ಮೇಲಿನ ಕಾನೂನಿನ ಅಡಿಯಲ್ಲಿ ಸಕ್ಷಮ ನ್ಯಾಯಾಲಯವು ರಕ್ಷಣಾ ಆದೇಶ ಅಥವ ಇತರ ಆದೇಶಗಳನ್ನು ಹೊರಡಿಸಬಹುದು ಮತ್ತು ಇಂತಹ ಅಪರಾಧಗಳ ವಿಚಾರಣೆ ನಡೆಸಬಹುದು.

**18)** **ಭಾರತದಲ್ಲಿ ಬಾಕಿ ಇರುವ ಕ್ರಿಮಿನಲ್ ವಿಚಾರಣೆಗೆ ನನ್ನ ಪತಿಯು ಹಾಜರಾಗುತ್ತಿಲ್ಲ ಹಾಗೂ ಭಾರತೀಯ ಪ್ರಜೆಯಾಗಿರುವ ಆತನ ಬಂಧನಕ್ಕೆ ವಾರಂಟನ್ನು ಹೊರಡಿಸಿದೆ. ನಾನೇನು ಮಾಡಬೇಕು?**

ನಿಮ್ಮ ಪತಿಯ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲು ಅರ್ಜಿ ಸಲ್ಲಿಸಿರಿ. ಇದಕ್ಕೆ ಸಂಬಂಧಿಸಿದ ನಿಯಮಗಳು ಹೀಗಿವೆ:

i. 1967ರ ಪಾಸ್‌ಪೋರ್ಟ್ ಕಾಯಿದೆಯ ಸೆಕ್ಷನ್10, ಪಾಸ್‌ಪೋರ್ಟ್ ಮುಟ್ಟುಗೋಲು ಹಾಗೂ ರದ್ದತಿಯನ್ನು ನಿಯಂತ್ರಿಸುತ್ತದೆ. ಈ ಕಾಯಿದೆಯಲ್ಲಿ ಯಾವುದೇ ಅರ್ಜಿ ನಮೂನೆಯನ್ನು ನೀಡದಿರುವುದರಿಂದಾಗಿ, ಒಂದು ಸರಳವಾಗಿ ಬರೆದ ಅರ್ಜಿಯನ್ನು ಇಂತಹ ಪಾಸ್‌ಪೋರ್ಟ್ ಮುಟ್ಟುಗೋಲು ಅಥವ ರದ್ದತಿಗಾಗಿ ಸಂಬಂಧಿಸಿದ ಪಾಸ್‌ಪೋರ್ಟ್ ನೀಡಿಕೆ ಪ್ರಾಧಿಕಾರಕ್ಕೆ ಸಲ್ಲಿಸಬಹುದು.

ii. ಪಾಸ್‌ಪೋರ್ಟ್ ಅಥವ ಪ್ರಯಾಣ ದಾಖಲೆ ಹೊಂದಿರುವ ವ್ಯಕ್ತಿಯು ಅಂತಹ ದಾಖಲೆ ಪಡೆದ ನಂತರ ಯಾವುದೇ ಸಮಯದಲ್ಲಿ ನೈತಿಕ ನೀಚತನವನ್ನೊಳಗೊಂಡ ಅಪರಾಧಕ್ಕಾಗಿ ನ್ಯಾಯಾಲಯದಿಂದ ಬಂಧನಕ್ಕೊಳಗಾಗಿದ್ದರೆ ಮತ್ತು ಆ ವಿಚಾರದಲ್ಲಿ ಎರಡು ವರ್ಷಕ್ಕೆ ಕಡಿಮೆ ಇಲ್ಲದಂತೆ ಬಂಧನ ಶಿಕ್ಷೆಗೊಳಪಟ್ಟಿದ್ದರೆ ಆತನ ಪಾಸ್‌ಪೋರ್ಟನ್ನು ರದ್ದು ಮಾಡಬಹುದೆಂದು ಸಂಬಂಧಿತ ಉಪಸೆಕ್ಷನ್ (3) ತಿಳಿಸುತ್ತದೆ.

iii. ಪಾಸ್‌ಪೋರ್ಟ್ ಅಥವ ಪ್ರಯಾಣ ದಾಖಲೆ ಹೊಂದಿರುವ ವ್ಯಕ್ತಿಯು ಮಾಡಿದ್ದಾನೆಂದು ಆರೋಪಿಸಲಾದ ಅಪರಾಧದ ಬಗೆಗಿನ ವಿಚಾರಣೆಯು ಭಾರತದ ಕ್ರಿಮಿನಲ್ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ ಉಪಸೆಕ್ಷನ್ (3)ಇ ಪಾಸ್‌ಪೋರ್ಟನ್ನು ರದ್ದು ಮಾಡಬಹುದೆಂದು ತಿಳಿಸುತ್ತದೆ.

iv. ಪಾಸ್‌ಪೋರ್ಟ್ ಅಥವ ಪ್ರಯಾಣ ದಾಖಲೆ ಹೊಂದಿರುವ ವ್ಯಕ್ತಿಗೆ ಅಸ್ತಿತ್ವದಲ್ಲಿರುವ ಕಾಯಿದೆಯ ಪ್ರಕಾರ ನ್ಯಾಯಾಲಯವು ವಾರಂಟ್ ಅಥವ ಹಾಜರಿಗೆ ನೀಡಿರುವ ಸಮನ್ಸ್ ಅಥವ ಬಂಧನ ವಾರಂಟನ್ನು ಹೊರಡಿಸಿದ್ದರೆ ಅಥವ ಆ ವ್ಯಕ್ತಿಯು ಭಾರತದಿಂದ ಹೊರಹೋಗದಂತೆ ನಿರ್ಬಂಧಿಸಿದ್ದರೆ ಮತ್ತು ಹಾಗಿದೆ ಎಂದು ಪಾಸ್‌ಪೋರ್ಟ್ ನೀಡಿಕೆ ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ ಉಪಸೆಕ್ಷನ್ (3)ಎಚ್ ಪ್ರಕಾರ ಪಾಸ್‌ಪೋರ್ಟನ್ನು ರದ್ದು ಮಾಡಬಹುದೆಂದು ತಿಳಿಸುತ್ತದೆ.

**19) ಘನತೆವೆತ್ತ ನ್ಯಾಯಾಲಯದ ಕ್ರಿಮಿನಲ್ ತೀರ್ಪು/ ಆದೇಶದ ಪಾಲನೆಗಾಗಿ ನಾನು ಯಾರನ್ನು ಕಾಣಬಹುದು?**

ವಿದೇಶಗಳಲ್ಲಿ ನೆಲೆಸಿರುವ ವ್ಯಕ್ತಿಗಳಿಗೆ ಸಮನ್ಸ್/ ಸೂಚನೆಗಳು/ ನ್ಯಾಯಾಂಗ ವಿಚಾರಣೆಗಳ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಕೆಲವು ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಅರ್ಜಿದಾರರು ತಮ್ಮ ವಕೀಲರೊಂದಿಗೆ ಸಮಾಲೋಚಿಸಿ, http://cbi.nic.in/interpol/mha_circ_service_process.pdf ಜಾಲತಾಣದಲ್ಲಿ ಕೊಟ್ಟಿರುವ ವಿದೇಶಾಂಗ ಸಚಿವಾಲಯದ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಬಹುದು.

ನ್ಯಾಯಾಲಯದ ಆದೇಶಗಳನ್ನು ಅಧೀನ ಕಾರ್ಯದರ್ಶಿ(ಕಾನೂನು), (ಐ.ಎಸ್.–II), ವಿದೇಶಾಂಗ ಸಚಿವಾಲಯ, ಎನ್.ಡಿ.ಸಿ.ಸಿ.– II ಕಟ್ಟಡ, ಜೈಸಿಂಗ್ ರಸ್ತೆ, ನವದೆಹಲಿ–110 001 ಇಲ್ಲಿಗೆ ತಲುಪುವಂತೆ ಕಳಿಸಬೇಕು.

**20) ಅನಿವಾಸಿ ಭಾರತೀಯ ಪತಿಯ ಸ್ಥಳ/ ಗುರುತು–ಪತ್ತೆಗಳನ್ನು ಮಹಿಳೆಯರು ಹೇಗೆ ಹುಡುಕಬಹುದು?**

ಅನಿವಾಸಿ ಭಾರತೀಯ ಪತಿಯು ನೆಲೆಸಿರುವ ದೇಶದಲ್ಲಿರುವ ನಿಮ್ಮ ಕುಟುಂಬದವರು, ಸ್ನೇಹಿತರು, ನೆರೆ–ಹೊರೆಯವರು ಅಥವ ಭಾರತೀಯ ಸಮುದಾಯದವರು/ ಸರ್ಕಾರೇತರ ಸಂಸ್ಥೆಗಳನ್ನು ಸಂಪರ್ಕಿಸಬಹುದು. ಅಂತಹ ಸಂಸ್ಥೆಗಳ ಪಟ್ಟಿಯು http://mea.gov.in/legal-and-financial-assistance.htm# ಜಾಲತಾಣದಲ್ಲಿ ದೊರೆಯುತ್ತದೆ.

**21) ವಿದೇಶದಲ್ಲಿರುವ ಪತಿಯು ತನ್ನ ಪತ್ನಿ ಹಾಗೂ ಮಕ್ಕಳನ್ನು ಆ ದೇಶದಲ್ಲಿ ತ್ಯಜಿಸಿ, ಬೇರೊಬ್ಬ ಮಹಿಳೆಯನ್ನು ವಿವಾಹವಾದರೆ ಸಂತ್ರಸ್ತೆ ಪತ್ನಿಯು ಯಾರನ್ನು ಸಂಪರ್ಕಿಸಬೇಕು?**

ಮೊದಲು ನೀವು ವಾಸವಾಗಿರುವ ದೇಶ ಹಾಗೂ ಭಾರತದಲ್ಲಿರುವ ನಿಮ್ಮ ಕುಟುಂಬದವರು, ಸ್ನೇಹಿತರು, ನೆರೆ–ಹೊರೆಯವರನ್ನು ಸಂಪರ್ಕಿಸಿ ಅವರ ಸಹಾಯ, ಸಲಹೆ ಅಥವ ಸಹಕಾರ ಕೇಳಿರಿ.

ಮೊಕದ್ದಮೆ ಹೂಡಲು, ಸರ್ಕಾರೇತರ ಸಂಸ್ಥೆಗಳನ್ನು ಸಂಪರ್ಕಿಸಲು, ನಿಮ್ಮ ಕುಟುಂಬದವರನ್ನು ಸಂಪರ್ಕಿಸಲು ಅಥವ ಕಾನೂನು ಸಲಹೆ ಪಡೆಯಲು ಭಾರತೀಯ ದೂತಾವಾಸ ಕಚೇರಿಗಳು ಗುರುತಿಸಿ ನಿಗದಿಪಡಿಸಿರುವ ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಸಮುದಾಯ ಹಿತರಕ್ಷಣಾ ಸಂಘಗಳ ಮೂಲಕ ನೆರವು ನೀಡುತ್ತಾರೆ. ಭಾರತೀಯ ದೂತಾವಾಸ/ ರಾಯಭಾರ ಕಚೇರಿಗಳು ಗುರುತಿಸಿ ನಿಗದಿಪಡಿಸಿರುವ ಸರ್ಕಾರೇತರ ಸಂಸ್ಥೆಗಳ ಪಟ್ಟಿಯು http://mea.gov.in/legal-and-financial-assistance.htm# ಜಾಲತಾಣದಲ್ಲಿ ದೊರೆಯುತ್ತದೆ. ನೆರವಿಗಾಗಿ ನೀವು ಅವರನ್ನು ಸಂಪರ್ಕಿಸಬಹುದು.

**22) "2005ರ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ" ಕಾನೂನಿನ ಪ್ರಕಾರ ಶೋಷಿತ ಮಹಿಳೆಯರಿಗಿರುವ ನಿರ್ದಿಷ್ಟ ಹಕ್ಕುಗಳೇನು?**

i. ದೈಹಿಕ/ ಲೈಂಗಿಕ ಶೋಷಣೆಯ ವಿರುದ್ಧದ ಹಕ್ಕುಗಳು (498ಎ – ಐ.ಪಿ.ಸಿ.)
ii. ಆರ್ಥಿಕ ಶೋಷಣೆಯ ವಿರುದ್ಧದ ಹಕ್ಕುಗಳು (ಸೆಕ್ಷನ್ 125 – ಕ್ರಿಮಿನಲ್ ಪ್ರೊಸೀಜರ್ ಕೋಡ್)
iii. ಪರಿತ್ಯಾಗದ ವಿರುದ್ಧ ಪರಿಹಾರದ ಹಕ್ಕುಗಳು (1994 6 ಎಸ್.ಸಿ.ಸಿ. 641)
iv. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ತನ್ನ ಬಳಿ ಇಟ್ಟುಕೊಳ್ಳುವ ತಾಯಿಯ ಅಧಿಕಾರ
v. ವೈವಾಹಿಕ ಉಡುಗೊರೆಗಳು ಮತ್ತು ಸ್ತ್ರೀಧನವನ್ನು ಹಿಂಪಡೆಯುವ ಹಕ್ಕುಗಳು
vi. ವರದಕ್ಷಿಣೆ ವಿರುದ್ಧದ ಹಕ್ಕುಗಳು
vii. ಕ್ರೌರ್ಯ, ದೈಹಿಕ ಹಲ್ಲೆ, ಹಿಂಸೆ ಇತ್ಯಾದಿಗಳ ವಿರುದ್ಧದ ಹಕ್ಕುಗಳು
viii. ಕೌಟುಂಬಿಕ ದೌರ್ಜನ್ಯದ ವಿರುದ್ಧದ ಹಕ್ಕುಗಳು (ಎಸ್ 3)

**23) ಪರಸ್ಪರ ಒಪ್ಪಿಗೆಯ ಆಧಾರದಲ್ಲಿ ವಿಚ್ಛೇದನ ಪಡೆಯಲು ಇರುವ ಪ್ರಕ್ರಿಯೆಗಳೇನು?**

i. ವಿಚ್ಛೇದನವು ಪರಸ್ಪರ ಒಪ್ಪಿಗೆಯ ಆಧಾರದಲ್ಲಿದ್ದರೆ ಅದಕ್ಕೆ ಯಾವುದೇ ಸಮಜಾಯಿಷಿಗಳೂ ಬೇಕಿಲ್ಲ.

ii. ಜಂಟಿ ಅರ್ಜಿ ಸಲ್ಲಿಸುವ ಒಂದು ವರ್ಷ ಮೊದಲಿನಿಂದಲೂ ಪತಿ–ಪತ್ನಿ ಸಂಬಂಧವನ್ನುಳಿಸಿಕೊಂಡೇ ಪ್ರತ್ಯೇಕವಾಗಿ ವಾಸಿಸುವುದು

iii. ಆರು ತಿಂಗಳ ಮಧ್ಯಂತರ ಅವಧಿಯ ನಂತರ ನ್ಯಾಯಾಧೀಶರು ಸೂಚನೆ ನೀಡುತ್ತಾರೆ

iv. ಆರು ತಿಂಗಳ ನಂತರವೂ ದಂಪತಿಗಳು ತಮ್ಮ ನಿಲುವನ್ನು ಬದಲಾಯಿಸದಿದ್ದರೆ ಮತ್ತು ವಿಚ್ಛೇದನ ಬಯಸಿದರೆ, ಆಗ ಅವರಿಗೆ ವಿಚ್ಛೇದನ ನೀಡಲಾಗುತ್ತದೆ.

**24) ಕಾನೂನು ಬಾಹಿರ ಎಂದು ಪರಿಗಣಿಸಲಾಗುವ ಕೌಟುಂಬಿಕ ಹಿಂಸೆಗಳು ಯಾವುವು? ಯಾವುದನ್ನು ಮಾನಸಿಕ/ ಭಾವನಾತ್ಮಕ ದುರುಪಯೋಗ, ಮೌಖಿಕ (ವಾಚ್ಯ)/ ಸಾಮಾಜಿಕ ದುರುಪಯೋಗ ಮತ್ತು ಆರ್ಥಿಕ ದುರುಪಯೋಗವೆನ್ನಲಾಗುತ್ತದೆ?**

(ಅ) ಕೌಟುಂಬಿಕ ಹಿಂಸೆ ಮತ್ತು ಕಾನೂನು ಬಾಹಿರ ಕೃತ್ಯಗಳು :

ಪತಿಯ ಈ ಕೆಳಗಿನ ಕೃತ್ಯಗಳನ್ನು ಕೌಟುಂಬಿಕ ಹಿಂಸೆ ಎನ್ನಲಾಗುತ್ತದೆ. ಇವು ಬಹಳಷ್ಟು ದೇಶಗಳಲ್ಲಿ ಕಾನೂನು ಬಾಹಿರ ಕೃತ್ಯಗಳು. ರಕ್ಷಣೆ ಮತ್ತು ಸಹಾಯಕ್ಕಾಗಿ ಆ ಎಲ್ಲ ದೇಶಗಳ ಸ್ಥಳೀಯ ಪೊಲೀಸರನ್ನು ಸಂಪರ್ಕಿಸಬಹುದಾಗಿದೆ:

i. ದೈಹಿಕ ದುರುಪಯೋಗ

ii. ಮಾನಸಿಕ ಮತ್ತು ಭಾವನಾತ್ಮಕ ದುರುಪಯೋಗ

iii. ಮೌಖಿಕ (ವಾಚ್ಯ) ಮತ್ತು ಸಾಮಾಜಿಕ ದುರುಪಯೋಗ

iv. ಲೈಂಗಿಕ ದುರುಪಯೋಗ

v. ಆರ್ಥಿಕ ದುರುಪಯೋಗ

(ಆ) ಮಾನಸಿಕ ಮತ್ತು ಭಾವನಾತ್ಮಕ ದುರುಪಯೋಗದ ಪ್ರಸಂಗಗಳು :

i. ಬೆದರಿಸುವುದು, ಬಲ ಪ್ರಯೋಗ ಮಾಡುವುದು, ಭಯ ಹುಟ್ಟಿಸುವುದು, ಒತ್ತಡ ಹಾಕುವುದು

ii. ಮಹಿಳೆಯರ ಬಗ್ಗೆ ಅಶ್ಲೀಲ ನಡವಳಿಕೆಯ ಆರೋಪ ಹೊರಿಸುವುದು

iii. ಸಾರ್ವಜನಿಕವಾಗಿಯೂ, ಖಾಸಗಿಯಾಗಿಯೂ ಅಪಮಾನ ಮಾಡುವುದು

iv. ಮನೆಯ ಸಾಮಾನು, ಸರಂಜಾಮುಗಳನ್ನು ಒಡೆದುಹಾಕುವುದು, ಮನೆಯ ಮುದ್ದಿನ ಸಾಕುಪ್ರಾಣಿಗಳನ್ನು ಕೊಲ್ಲುವುದು

v. ಮಕ್ಕಳು ಮತ್ತು ಸಂಬಂಧಿಕರಿಗೆ ಹೊಡೆಯುವುದು, ತೊಂದರೆ ಕೊಡುವುದಾಗಿ ಹೆದರಿಸುವುದು

(ಇ) ಮೌಖಿಕ (ವಾಚ್ಯ) ಮತ್ತು ಸಾಮಾಜಿಕ ದುರುಪಯೋಗದ ಪ್ರಸಂಗಗಳು :

i. ಬೈಯುವುದು ಮತ್ತು ಹೀಯಾಳಿಸುವ ಹೆಸರುಗಳಿಂದ ಕರೆಯುವುದು

ii. ಸಮಾನ ವಯಸ್ಕರ ಮುಂದೆ ಹಾಗೂ ಸ್ನೇಹಿತರ ಮುಂದೆ ದೂಷಿಸುವುದು

iii. ಇತರರ ಮುಂದೆ ಅಪಮಾನ ಮಾಡುವುದು

iv. ಪತ್ನಿಯ ಪೋಷಕರನ್ನು, ಸ್ನೇಹಿತರನ್ನು ಮತ್ತು ಕುಟುಂಬದವರನ್ನು ಹೀಯಾಳಿಸುವುದು/ ಬೈಯುವುದು

v. ಬಲಾತ್ಕಾರದಿಂದ ಒಂಟಿಯಾಗಿರಿಸುವುದು, ಕೂಡಿಹಾಕುವುದು, ಕುಟುಂಬದವರೊಂದಿಗೆ ಸಂಪರ್ಕ ನಿರ್ಬಂಧಿಸುವುದು, ಓಡಾಡುವ ಸ್ವಾತಂತ್ರ್ಯ ನಿರ್ಬಂಧಿಸುವುದು, ಯಾವಾಗಲೂ ಕೆಟ್ಟದಾಗಿ ನಡೆಸಿಕೊಳ್ಳುವುದು ಇತ್ಯಾದಿ

(ಈ) ಆರ್ಥಿಕ ದುರುಪಯೋಗ :

i. ಕುಟುಂಬದ ಎಲ್ಲಾ ಆದಾಯಗಳನ್ನು ನಿಯಂತ್ರಿಸುವುದು ಹಾಗೂ ಹಣಕಾಸನ್ನು ಮುಟ್ಟಲು ಬಿಡದಿರುವುದು

ii. ನೌಕರಿ ಪಡೆಯುವುದನ್ನು ಬಲಾತ್ಕಾರವಾಗಿ ನಿರ್ಬಂಧಿಸುವುದು

iii. ಬಲವಂತವಾಗಿ ಆರ್ಥಿಕ ಪರಾವಲಂಬನೆಯನ್ನು ಹೇರುವುದು

iv. ಗೃಹಕೃತ್ಯದ ವೆಚ್ಚಗಳಿಗೆ ಸಾಕಷ್ಟು ಹಣ ನೀಡದಿರುವುದು

v. ಹಣಕಾಸನ್ನು ದುರ್ಬಳಕೆ ಅಥವ ದುರುಪಯೋಗ ಮಾಡಿಕೊಂಡಿರುವುದಾಗಿ ಆಪಾದಿಸುವುದು

**25) ಭಾರತದ ಭೌಗೋಳಿಕ ಗಡಿಯಿಂದಾಚೆ ವಾಸವಿರುವ ವ್ಯಕ್ತಿಗಳಿಗೆ ಸಮನ್ಸ್/ ನೋಟೀಸುಗಳನ್ನು ಜಾರಿ ಮಾಡುವುದೂ ಸೇರಿದಂತೆ ಅವರ ವಿರುದ್ಧ ನ್ಯಾಯಾಂಗ ಕ್ರಮ ಜರುಗಿಸುವುದು ಹೇಗೆ?**

ಸಿವಿಲ್ ಮೊಕದ್ದಮೆಗಳಲ್ಲಿ ಭಾರತದ ಹೊರಗೆ ವಾಸವಿರುವವರಿಗೆ ಸಮನ್ಸ್/ ನೋಟೀಸು ಜಾರಿ ಮಾಡುವುದೂ ಸೇರಿದಂತೆ ನ್ಯಾಯಾಂಗ ಕ್ರಮ ಜರುಗಿಸುವುದನ್ನು ಸಿವಿಲ್ ಪ್ರೊಸೀಜರ್ ಕೋಡಿನ ಶಾಸನಾತ್ಮಕ ಕಟ್ಟುಪಾಡುಗಳಿಂದ ವಿದೇಶಗಳೊಂದಿಗಿನ ಪರಸ್ಪರ ಕೊಡು–ಕೊಳುವ ಆಧಾರದ ಒಪ್ಪಂದದ ಮೇಲೆ ಭಾರತ ಸರ್ಕಾರದ ವ್ಯಾಪಾರ–ವ್ಯವಹಾರ ನಿಯಮಗಳ ಪ್ರಕಾರ ನಿಯಂತ್ರಿಸಲಾಗುತ್ತದೆ.

ಅಂತಹ ಯಾವುದೇ ಪರಸ್ಪರ ಕೊಡು–ಕೊಳುವ ಆಧಾರದ ಒಪ್ಪಂದವಿರದ ದೇಶಗಳಲ್ಲಿ ವಾಸವಿರುವ ವ್ಯಕ್ತಿಗಳ ವಿಚಾರದಲ್ಲಿ ಇಂತಹ ನ್ಯಾಯಾಂಗ ಕ್ರಮ ಜರುಗಿಸುವ ವಿಚಾರವು ಕಾನೂನು ಮತ್ತು ನ್ಯಾಯಾಂಗ ಸಚಿವಾಲಯದಿಂದ (ಜಂಟಿ ಕಾರ್ಯದರ್ಶಿ ಮತ್ತು ಕಾನೂನು ಸಲಹೆಗಾರರು, 'ಎ'

ವಿಭಾಗ, ಶಾಸ್ತ್ರಿ ಭವನ, ನವದೆಹಲಿ) ಭಾರತೀಯ ಪೌರಾಡಳಿತ ಸಂಸ್ಥೆಯ ನಿಯಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಲ್ಪಟ್ಟು ನಿರ್ಧರಿತವಾಗುತ್ತದೆ.

ಅದರಂತೆಯೇ ಕ್ರಿಮಿನಲ್ ಮೊಕದ್ದಮೆಗಳ ವಿಚಾರದಲ್ಲಿ ಭಾರತದ ಹೊರಗೆ ವಾಸವಿರುವವರಿಗೆ ಸಮನ್ಸ್/ ನೋಟೀಸು ಜಾರಿ ಮಾಡುವುದೂ ಸೇರಿದಂತೆ ನ್ಯಾಯಾಂಗ ಕ್ರಮ ಜರುಗಿಸುವಲ್ಲಿ ಗೃಹ ಇಲಾಖೆಯು (ಜಂಟಿ ಕಾರ್ಯದರ್ಶಿ (ಐ.ಎಸ್– II), ಎನ್.ಡಿ.ಸಿ.ಸಿ.– II ಕಟ್ಟಡ, ಜೈಸಿಂಗ್ ರಸ್ತೆ, ನವದೆಹಲಿ110 001) ಸಂಪಾತ ಸಚಿವಾಲಯವಾಗಿರುತ್ತದೆ ಹಾಗೂ ಕ್ರಿಮಿನಲ್ ಕಾನೂನು ವಿಷಯಗಳಲ್ಲಿ ಪರಸ್ಪರ ಕಾನೂನು ನೆರವನ್ನು ಪಡೆಯುವಲ್ಲಿ ಮತ್ತು ಒದಗಿಸುವಲ್ಲಿ ಕೇಂದ್ರೀಯ ಪ್ರಾಧಿಕಾರವಾಗಿರುತ್ತದೆ. ಅಂತಹ ಎಲ್ಲ ಅರ್ಜಿಗಳನ್ನು ಗೃಹ ಸಚಿವಾಲಯವು ಸ್ವೀಕರಿಸಿ, ಪರೀಕ್ಷಿಸಿ ಸೂಕ್ತ ಕ್ರಮ ಕೈಗೊಳ್ಳುತ್ತದೆ.

**26) ಅನಿವಾಸಿ ಭಾರತೀಯರ ವಿವಾಹಗಳಲ್ಲಿ ಉದ್ಭವಿಸುವ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯನ್ನು ಎಂತಹ ಸಂದರ್ಭಗಳಲ್ಲಿ ಗಡಿಪಾರು ಮಾಡಬಹುದು ಅಥವ ವಶಕ್ಕೊಪ್ಪಿಸಬಹುದು? ಭಾರತದ ಹೊರಗಿರುವ ವ್ಯಕ್ತಿಯನ್ನು ಭಾರತದಲ್ಲಿ ನ್ಯಾಯಾಂಗ ವಿಚಾರಣೆ ಎದುರಿಸಲು ಅನುವಾಗುವಂತೆ ಆ ದೇಶದಿಂದ ಗಡಿಪಾರು ಮಾಡಿ ಭಾರತದ ವಶಕ್ಕೊಪ್ಪಿಸುವಂತೆ ಮಾಡುವ ವಿಧಾನಗಳೇನು?**

ಕ್ರಿಮಿನಲ್ ಮೊಕದ್ದಮೆಯಲ್ಲಿ ಯಾವುದಾದರೂ ಕಾನೂನು ಜಾರಿ ಸಂಸ್ಥೆಗೆ ಬೇಕಾಗಿದ್ದರೆ ಮಾತ್ರ ಯಾವುದೇ ವ್ಯಕ್ತಿಯನ್ನು ಬೇರೆ ದೇಶದಿಂದ ಗಡಿಪಾರು ಮಾಡಿಸಬಹುದು/ ವಶಕ್ಕೆ ಪಡೆಯಬಹುದು. ಸಾಮಾನ್ಯವಾಗಿ ಆಪಾದಿತನು ವಾಸವಾಗಿರುವ ದೇಶದ ಕಾನೂನಿನ ಪ್ರಕಾರ ಯಾವುದೇ ಕೃತ್ಯವು ಕ್ರಿಮಿನಲ್ ಅಥವ ಇನ್ನಿತರ ಅಪರಾಧವೋ ಅಲ್ಲವೋ ಎಂಬುದು ತೀರ್ಮಾನವಾಗುತ್ತದೆ ಮತ್ತು ಭಾರತವು ಆ ದೇಶದೊಂದಿಗೆ ಗಡಿಪಾರು ಮಾಡಿಸಬಹುದಾದ/ ವಶಕ್ಕೆ ಪಡೆಯಬಹುದಾದ ಒಪ್ಪಂದ ಮಾಡಿಕೊಂಡಿರಬೇಕಾಗುತ್ತದೆ. ಭಾರತದೊಂದಿಗೆ ಇಂತಹ ಒಪ್ಪಂದ ಮಾಡಿಕೊಂಡಿರುವ ದೇಶಗಳ ಪಟ್ಟಿಯು http://cbi.nic.in/interpol/extradition_treaties.php ಜಾಲತಾಣದಲ್ಲಿದೊರೆಯುತ್ತದೆ.

<u>ಸೂಚನೆ</u> : ಸಂಬಂಧಿತ ತನಿಖಾ ಸಂಸ್ಥೆಗಳಿಂದ ಅಥವ ರಾಜ್ಯದ ಪೊಲೀಸ್ ಪ್ರಾಧಿಕಾರದಿಂದ ಅಧಿಕೃತ ಕೋರಿಕೆಯನ್ನು ಸ್ವೀಕರಿಸಿದ ನಂತರ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಸಿ.ಪಿ.ವಿ. ವಿಭಾಗ) ಸೂಕ್ತ ಕ್ರಮ ಕೈಗೊಳ್ಳುತ್ತದೆ. ರೂಢಿಯಲ್ಲಿರುವ ಅಂತಾರಾಷ್ಟ್ರೀಯ ಕಾನೂನು ಕಟ್ಟಳೆಗಳ ಆಧಾರದ ಮೇಲೆ ವ್ಯಕ್ತಿಯನ್ನು ವಶಕ್ಕೆ ಪಡೆಯುವುದನ್ನು ಕೋರಿ, ಸಂಧಾನ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.

ಭಾರತವು ಈ ಮುಂದಿನ 38 ದೇಶಗಳೊಂದಿಗೆ ಆಪಾದಿತ ವ್ಯಕ್ತಿಗಳ ಗಡಿಪಾರು ಮಾಡುವ/ ವಶಕ್ಕೆ ಪಡೆದುಕೊಳ್ಳುವ ಒಪ್ಪಂದ ಮಾಡಿಕೊಂಡಿದೆ : ಆಸ್ಟ್ರೇಲಿಯ, ಬಹರೇನ್, ಬಾಂಗ್ಲಾದೇಶ, ಬೆಲಾರೂಸ್, ಬೆಲ್ಜಿಯಂ, ಭೂತಾನ್, ಬಲ್ಗೇರಿಯ, ಕೆನಡ, ಚಿಲಿ, ಈಜಿಪ್ಟ್, ಫ್ರಾನ್ಸ್, ಜರ್ಮನಿ, ಹಾಂಗ್‌ಕಾಂಗ್, ಕುವೈತ್, ಮಲೇಷಿಯ, ಮಾರಿಷಸ್, ಮೆಕ್ಸಿಕೋ, ಮಂಗೋಲಿಯ, ನೇಪಾಳ, ನೆದರ್ಲ್ಯಾಂಡ್, ಓಮನ್, ಪೋಲೆಂಡ್, ಪೋರ್ಚುಗಲ್, ಕೊರಿಯ ಗಣತಂತ್ರ, ರಷ್ಯ, ಸೌದಿ ಅರೇಬಿಯ, ದಕ್ಷಿಣ ಆಫ್ರಿಕ, ಸ್ಪೇನ್, ಸ್ವಿಟ್ಜರ್ಲ್ಯಾಂಡ್, ತಾಜಿಕಿಸ್ತಾನ್, ಟರ್ಕಿ, ಟ್ಯುನೀಸಿಯ, ಯುನೈಟೆಡ್ ಅರಬ್ ಎಮಿರೇಟ್ಸ್, ಯುನೈಟೆಡ್ ಕಿಂಗ್‌ಡಂ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಉಜ್ಬೆಕಿಸ್ತಾನ್, ಉಕ್ರೇನ್ ಹಾಗೂ ವಿಯೆಟ್ನಾಂ.

<u>ಸೂಚನೆ</u> : ಸಂಬಂಧಿತ ತನಿಖಾ ಸಂಸ್ಥೆಗಳಿಂದ ಅಥವ ರಾಜ್ಯದ ಪೊಲೀಸ್ ಪ್ರಾಧಿಕಾರದಿಂದ ಅಧಿಕೃತ ಕೋರಿಕೆಯನ್ನು ಸ್ವೀಕರಿಸಿದ ನಂತರ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಸಿ.ಪಿ.ವಿ. ವಿಭಾಗ) ಸೂಕ್ತ ಕ್ರಮ ಕೈಗೊಳ್ಳುತ್ತದೆ. ರೂಢಿಯಲ್ಲಿರುವ ಅಂತಾರಾಷ್ಟ್ರೀಯ ಕಾನೂನು ಕಟ್ಟಳೆಗಳ ಆಧಾರದ ಮೇಲೆ ವ್ಯಕ್ತಿಯನ್ನು ವಶಕ್ಕೆ ಪಡೆಯುವುದನ್ನು ಕೋರಿ, ಸಂಧಾನ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.

** ಕೆಲವು ದೇಶಗಳಲ್ಲಿ ವೈವಾಹಿಕ/ ಖಾಸಗಿ/ ಕೌಟುಂಬಿಕ ವ್ಯಾಜ್ಯಗಳಿಗೆ ಸಂಬಂಧಿಸಿದ ಕಿಮಿನಲ್ ಮೊಕದ್ದಮೆಗಳಲ್ಲಿ ಬೇಕಾಗಿರುವ ವ್ಯಕ್ತಿಗಳನ್ನು ವಶಕ್ಕೆ ಪಡೆಯುವುದು ಗಡಿಪಾರು ಮಾಡುವ/ ವಶಕ್ಕೆ ಪಡೆದುಕೊಳ್ಳುವ ಕಾನೂನಿಗಿಂತ ಬೇರೆಯೇ ಇರುತ್ತದೆ. ಅಂತಹ ದೇಶಗಳಲ್ಲಿರುವ ವ್ಯಕ್ತಿಗಳನ್ನು ವಶಕ್ಕೆ ಪಡೆಯಬೇಕಾದಲ್ಲಿ ಆ ವ್ಯಕ್ತಿಯು ಅಂತಹ ಎರಡೂ ಅಪರಾಧಗಳನ್ನು ಮಾಡಿದ್ದರೆ ಮಾತ್ರ ಅದು ಸಾಧ್ಯವಾಗುತ್ತದೆ.

**27) ತನಿಖಾ ಸಂಸ್ಥೆಯು 'ಲುಕ್ ಔಟ್ ಸರ್ಕ್ಯುಲರ್' ನೋಟೀಸಿನ ಆಶ್ರಯವನ್ನು/ ಉಪಯೋಗವನ್ನು ಯಾವ ವಿಧದ ಮೊಕದ್ದಮೆಗಳಲ್ಲಿ ಮತ್ತು ಎಂತಹ ಪರಿಸ್ಥಿತಿಗಳಲ್ಲಿ ನಿರೀಕ್ಷಿಸಬಹುದು?**

ಅನಿವಾಸಿ ಭಾರತೀಯ ಪತಿಯು ಉದ್ದೇಶಪೂರ್ವಕವಾಗಿ ಬಂಧನವನ್ನು ತಪ್ಪಿಸಿಕೊಳ್ಳುತ್ತಿದ್ದರೆ ಅಥವ ಜಾಮೀನು ರಹಿತ ವಾರಂಟು ಮತ್ತಿತರ ನಿರ್ಬಂಧಗಳನ್ನು ಹೊರಡಿಸಿದ್ದರೂ ನ್ಯಾಯಾಲಯಕ್ಕೆ ಹಾಜರಾಗದಿದ್ದರೆ ಮತ್ತು ವಿಚಾರಣೆ ಮತ್ತು/ ಅಥವ ಬಂಧನವನ್ನು ತಪ್ಪಿಸಿಕೊಳ್ಳಲೋಸುಗ ಆತನು ದೇಶ ಬಿಟ್ಟು ಹೋಗುವ ಸಾಧ್ಯತೆಗಳಿದ್ದರೆ, ಆಗ ಐ.ಪಿ.ಸಿ. ಅಥವ ಇತರೆ ಪೀನಲ್ ಕಾನೂನುಗಳ ಅಡಿಯಲ್ಲಿ, ಮೇಲ್ನೋಟಕ್ಕೆ ತಪ್ಪೆಂದು ಕಾಣಿಸುವಂತಹ ಅಪರಾಧ ಪ್ರಕರಣಗಳಲ್ಲಿ 'ಲುಕ್ ಔಟ್ ಸರ್ಕ್ಯುಲರ್' ನೋಟೀಸು ಹೊರಡಿಸುವಂತೆ ತನಿಖಾ ಸಂಸ್ಥೆಯನ್ನು ಕೇಳಬಹುದು.

**28) 'ಲುಕ್ ಔಟ್ ಸರ್ಕ್ಯುಲರ್' ನೋಟೀಸು ಹೊರಡಿಸುವ ಮೊದಲು ತನಿಖಾ ಸಂಸ್ಥೆಗಳು ಅನುಸರಿಸಬೇಕಾದ ವಿಧಾನಗಳೇನು?**

ತನಿಖಾ ಸಂಸ್ಥೆಗೆ ಅಥವ ನ್ಯಾಯಾಲಯಕ್ಕೆ ಶರಣಾಗುವಂತೆ ವ್ಯಕ್ತಿಯನ್ನು ಒತ್ತಾಯಿಸುವ ಒಂದು ಕ್ರಮವಿಧಿಯೇ 'ಲುಕ್ ಔಟ್ ಸರ್ಕ್ಯುಲರ್' ನೋಟೀಸು. ಅಧೀನ ನ್ಯಾಯಾಲಯಗಳ 'ಲುಕ್ ಔಟ್ ಸರ್ಕ್ಯುಲರ್' ನೋಟೀಸನ್ನು ಅನುಮೋದಿಸುವ ಅಥವ ರದ್ದು ಮಾಡುವ ನ್ಯಾಯಾಧಿಕರಣವು ಜಾಮೀನು ರಹಿತ ವಾರಂಟನ್ನು ರದ್ದುಪಡಿಸುವ ಅಥವ ಎತ್ತಿಹಿಡಿಯುವ ನ್ಯಾಯಾಧಿಕರಣಕ್ಕೆ ಅನುಗುಣವಾಗಿರುತ್ತದೆ.

(ಅ) 'ಲುಕ್ ಔಟ್ ಸರ್ಕ್ಯುಲರ್' ನೋಟೀಸು ಹೊರಡಿಸಲು, ಗೃಹ ಸಚಿವಾಲಯವು ಸೂಚಿಸಿರುವ ಸುತ್ತೋಲೆಯ ಪ್ರಕಾರ ಬೇಕಾದ ವಿವರಗಳನ್ನು ಮತ್ತು ಕಾರಣಗಳನ್ನು ನೀಡಿ 'ಎಚ್ಚರಿಕೆ ಸುತ್ತೋಲೆ' ಹೊರಡಿಸಬೇಕೆಂದು ಕೋರುವ ಅರ್ಜಿಯನ್ನು ತನಿಖಾಧಿಕಾರಿಯು ಸೂಕ್ತ ಅಧಿಕಾರಿಗೆ ನೀಡಬೇಕಾಗುತ್ತದೆ. ಅದರಂತೆ ಸಕ್ಷಮ ಅಧಿಕಾರಿಯು ಮಾತ್ರ 'ಎಚ್ಚರಿಕೆ ಸುತ್ತೋಲೆ' ಹೊರಡಿಸುವಂತೆ ಆದೇಶ ನೀಡಲು ನಿರ್ದೇಶನ ನೀಡುತ್ತಾರೆ.

(ಆ) 'ಎಚ್ಚರಿಕೆ ಸುತ್ತೋಲೆ' ಹೊರಡಿಸಲು ನೀಡುವ ಕೋರಿಕೆಯನ್ನು ಈ ಕೆಳಗಿನ ಶ್ರೇಣಿಗಿಂತ ಕಡಿಮೆ ಇಲ್ಲದ ಶ್ರೇಣಿಯ ಅಧಿಕಾರಿಯ ಅನುಮೋದನೆಯೊಡನೆ ನೀಡಬೇಕು :

i. ಭಾರತ ಸರ್ಕಾರದ ಉಪ ಕಾರ್ಯದರ್ಶಿ ಅಥವ

ii. ರಾಜ್ಯ ಸರ್ಕಾರದ ಜಂಟಿ ಕಾರ್ಯದರ್ಶಿ ಅಥವ

iii. ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ದಂಡಾಧಿಕಾರಿ ಅಥವ

iv. ಸಂಬಂಧಿಸಿದ ಜಿಲ್ಲೆಯ ಪೊಲೀಸು ಸೂಪರಿಂಟೆಂಡೆಂಟ್ ಅಥವ

v. ಸಿ.ಬಿ.ಐ.ನ ಪೊಲೀಸು ಸೂಪರಿಂಟೆಂಡೆಂಟ್ ಅಥವ ಅಲ್ಲಿಯ ತತ್ಸಮಾನ ಮಟ್ಟದ ಅಧಿಕಾರಿ ಅಥವ

vi. ಮಾದಕ ವಸ್ತು ನಿಯಂತ್ರಣಾ ಬ್ಯೂರೋದ ವಲಯ ನಿರ್ದೇಶಕ ಅಥವ ತತ್ಸಮಾನ ಮಟ್ಟದ ಅಧಿಕಾರಿ (ಮಾದಕ ವಸ್ತು ನಿಯಂತ್ರಣಾ ಬ್ಯೂರೋದ ಪ್ರಧಾನ ಕಚೇರಿಯ ಉಪನಿರ್ದೇಶಕ (ಕಾರ್ಯಾಚರಣೆ)ರನ್ನೊಳಗೊಂಡಂತೆ) ಅಥವ

vii. ಕಂದಾಯ ಗುಪ್ತಚರ ನಿರ್ದೇಶನಾಲಯ ಅಥವ ಪ್ರತ್ಯಕ್ಷ ತೆರಿಗೆಗಳ ಕೇಂದ್ರ ಮಂಡಳಿ ಅಥವ ಕೇಂದ್ರ ಅಬಕಾರಿ ಮತ್ತು ಸುಂಕ ಮಂಡಳಿಯ ಉಪಆಯುಕ್ತ ಅಥವ ತತ್ಸಮಾನ ಮಟ್ಟದ ಅಧಿಕಾರಿ ಅಥವ

viii. ತನಿಖಾ ದಳದ ಸಹಾಯಕ ನಿರ್ದೇಶಕ ಅಥವ

ix. ಸಂಶೋಧನೆ ಮತ್ತು ವಿಶ್ಲೇಷಣಾ ದಳ (RAW)ದ ಉಪಕಾರ್ಯದರ್ಶಿ ಅಥವ

x. ರಾಷ್ಟ್ರೀಯ ತನಿಖಾ ದಳದ ಪೊಲೀಸು ಸೂಪರಿಂಟೆಂಡೆಂಟ್ ಶ್ರೇಣಿಗಿಂತ ಕಡಿಮೆ ಇಲ್ಲದ ಶ್ರೇಣಿಯ ಅಧಿಕಾರಿ ಅಥವ

xi. ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಅಥವ

xii. ವಲಸೆಗಾರರ ರಕ್ಷಣಾಲಯದ ವಲಸೆಗಾರರ ರಕ್ಷಣಾಧಿಕಾರಿ ಅಥವ ಭಾರತ ಸರ್ಕಾರದ ಉಪಕಾರ್ಯದರ್ಶಿ ಶ್ರೇಣಿಗಿಂತ ಕಡಿಮೆ ಇಲ್ಲದ ಶ್ರೇಣಿಯ ಅಧಿಕಾರಿ ಅಥವ

xiii. ಇಂಟರ್‌ಪೋಲ್‌ನ ಪತ್ರಾಂಕಿತ ಅಧಿಕಾರಿ

(ಇ) ಭಾರತದ ಯಾವುದೇ ಕ್ರಿಮಿನಲ್ ನ್ಯಾಯಾಲಯದ ನಿರ್ದೇಶನದಂತೆ ಕೂಡ 'ಎಚ್ಚರಿಕೆ ಸುತ್ತೋಲೆ'ಗಳನ್ನು ಹೊರಡಿಸಬಹುದು

**29) ಕೆಂಪು, ಹಳದಿ, ನೀಲಿ, ಕಪ್ಪು, ಹಸಿರು, ಕಿತ್ತಳೆ ನೋಟೀಸುಗಳು, ಇಂಟರ್‌ಪೋಲ್, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಶೇಷ ನೋಟೀಸು, ನೇರಳೆ ನೋಟೀಸುಗಳೆಂದರೇನು?**

i. ಕೆಂಪು ನೋಟೀಸು : ಗಡಿಪಾರು ಅಥವ ಅಂತಹದೇ ಕಾನೂನು ಕ್ರಮ ಕೈಗೊಳ್ಳುವ ಉದ್ದೇಶದಿಂದ ಯಾವುದೇ ವ್ಯಕ್ತಿಯ ಸ್ಥಳವನ್ನು ಶೋಧಿಸಿ, ಬಂಧಿಸಲು

ii. ಹಳದಿ ನೋಟೀಸು : ಕಿರಿಯರು ಅಥವ ತಪ್ಪಿಸಿಕೊಂಡ ವ್ಯಕ್ತಿಗಳನ್ನು ಹುಡುಕಲು ಅಥವ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಗದಂತಹ ವ್ಯಕ್ತಿಗಳಿಗೆ ಸಹಾಯ ಮಾಡಲು

iii. ನೀಲಿ ನೋಟೀಸು : ಅಪರಾಧಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಗುರುತು, ಪತ್ತೆ ಅಥವ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು

iv. ಕಪ್ಪು ನೋಟೀಸು : ಗುರುತು ಸಿಗದ ಶವಗಳ ಬಗ್ಗೆ ಮಾಹಿತಿ ಹುಡುಕಲು

v. ಹಸಿರು ನೋಟೀಸು : ಕ್ರಿಮಿನಲ್ ಅಪರಾಧವೆಸಗಿದ ಹಾಗೂ ಅದನ್ನು ಬೇರೆ ದೇಶಗಳಲ್ಲಿ ಪುನರಾವರ್ತಿಸುವ ಸಾಧ್ಯತೆ ಇರುವ ವ್ಯಕ್ತಿಗಳ ಬಗ್ಗೆ ಗುಪ್ತ ಮಾಹಿತಿ ಮತ್ತು ಎಚ್ಚರಿಕೆ ನೀಡಲು

vi. ಕಿತ್ತಳೆ ನೋಟೀಸು : ಸಾರ್ವಜನಿಕ ಸುರಕ್ಷತೆಗೆ ಗಂಭೀರ ಹಾಗೂ ಸಂಭವನೀಯ ಧಕ್ಕೆ/ ಅಪಾಯ ತಂದೊಡ್ಡಬಹುದಾದ ಘಟನೆ, ವ್ಯಕ್ತಿ, ವಸ್ತು ಅಥವ ಪ್ರಕ್ರಿಯೆಗಳ ಬಗ್ಗೆ ಎಚ್ಚರಿಕೆ ನೀಡಲು

vii. ಇಂಟರ್‌ಪೋಲ್, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಶೇಷ ನೋಟೀಸು : ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ದಂಡನೆಗೆ ಗುರಿಯಾದ ವ್ಯಕ್ತಿಗಳಿಗಾಗಿ ಮತ್ತು ಗುಂಪುಗಳಿಗಾಗಿ

viii. ನೋಟೀಸು : ಕ್ರಿಮಿನಲ್ ಅಪರಾಧಿಗಳು ಬಳಸುವ ಕಾರ್ಯವಿಧಾನ, ವಸ್ತುಗಳು, ಸಾಧನ–ಸಲಕರಣೆಗಳು ಮತ್ತು ಮರೆಮಾಚುವ ವಿಧಾನಗಳ ಬಗೆಗಿನ ಮಾಹಿತಿಯನ್ನು ಪಡೆಯಲು ಅಥವ ನೀಡಲು

**30) ನಾನು ರಾಷ್ಟ್ರೀಯ ಮಹಿಳಾ ಆಯೋಗವನ್ನು ಸಂಪರ್ಕಿಸಬಹುದೆ?**

ಹೌದು ಸಂಪರ್ಕಿಸಬಹುದು. ನವದೆಹಲಿಯ ರಾಷ್ಟ್ರೀಯ ಮಹಿಳಾ ಆಯೋಗವನ್ನು ಸಹಾಯಕ್ಕಾಗಿ ಸಂಪರ್ಕಿಸಬಹುದು. ಅದು ಮಹಿಳೆಯರ ಹಿತಾಸಕ್ತಿಗಳ ರಕ್ಷಣೆ ಹಾಗೂ ಉತ್ತೇಜನದ ಗುರಿ ಹೊಂದಿರುವ ಸಂಪಾತ ಪ್ರಾಧಿಕಾರ ಮತ್ತು ಭಾರತದ ರಾಷ್ಟ್ರಮಟ್ಟದ ಶೃಂಗ ಸಂಸ್ಥೆಯಾಗಿದೆ.

i. 'ಅನಿವಾಸಿ ಭಾರತೀಯ ಪತಿಯಿಂದ ಪರಿತ್ಯಕ್ತರಾದ ಭಾರತೀಯ ಮಹಿಳೆಯರ ದುರವಸ್ಥೆ' ವಿಷಯದಲ್ಲಿ ಮಹಿಳೆಯರ ಸಬಲೀಕರಣದ (14ನೇ ಲೋಕಸಭೆಯ) ಪಾರ್ಲಿಮೆಂಟರಿ ಸಮಿತಿಯ ಶಿಫಾರಸಿನ ಆಧಾರದಲ್ಲಿ ಅನಿವಾಸಿ ಭಾರತೀಯರ ವಿವಾಹ ವ್ಯಾಜ್ಯಗಳ ಬಗ್ಗೆ ವ್ಯವಹರಿಸಲೆಂದು ರಾಷ್ಟ್ರೀಯ ಮಹಿಳಾ ಆಯೋಗದ ನಾಮಕರಣವಾಯಿತು. ಇದರ ಮುಂದುವರಿಕೆಯಾಗಿ ಅಂತಹ ದೂರುಗಳ ಪರಿಹಾರಕ್ಕಾಗಿ 2009ರ ಸೆಪ್ಟೆಂಬರ್ 24ರಂದು ಅನಿವಾಸಿ ಭಾರತೀಯ ಘಟಕವನ್ನು ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ ಅಧಿಕೃತವಾಗಿ ಉದ್ಘಾಟಿಸಲಾಯಿತು.

ii. ಅದರ ಸಂಪರ್ಕ ವಿವರಗಳು :

iii. ಅನಿವಾಸಿ ಭಾರತೀಯ ಘಟಕ – ರಾಷ್ಟ್ರೀಯ ಮಹಿಳಾ ಆಯೋಗ,
4, ದೀನ ದಯಾಳ ಉಪಾಧ್ಯಾಯ ಮಾರ್ಗ,
ನವದೆಹಲಿ–110 002,

ದೂರವಾಣಿ : +91–11–2323 4918,

ಫ್ಯಾಕ್ಸ್ : +91–011–2323 6154/ 6988,

ಮಿಂಚಂಚೆ : nricell-new@nic.in

iv. ಅಂತಹ ಸಂತ್ರಸ್ತ ಮಹಿಳೆಯರು ಪ್ರಪಂಚದ ಯಾವುದೇ ಮೂಲೆಯಿಂದಲಾದರೂ ತಮ್ಮ ದೂರನ್ನು ದಾಖಲಿಸಲು ರಾಷ್ಟ್ರೀಯ ಮಹಿಳಾ ಆಯೋಗವು ಅವರಿಗೆ ಅವಕಾಶ ಕಲ್ಪಿಸಿದೆ. ಸಂತ್ರಸ್ತ ಮಹಿಳೆಯರ ನೋವನ್ನು ಶಮನಗೊಳಿಸಲು ಅನಿವಾಸಿ ಭಾರತೀಯ ಘಟಕವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುತ್ತದೆ :

- ಸಲ್ಲಿಸಿರುವ ದೂರಿಗೆ ಪ್ರತ್ಯುತ್ತರ ನೀಡುವಂತೆ ಆರೋಪಿಗೆ/ ಆರೋಪಿಗಳಿಗೆ/ ಅವರ ಪರ ವಕಾಲತ್ತು ವಹಿಸಿರುವ ಪ್ರಾಧಿಕಾರಗಳಿಗೆ ನೋಟೀಸು ರವಾನಿಸುವುದು
- ತನಿಖೆ ಏನಾದರೂ ಬಾಕಿ ಇದ್ದಲ್ಲಿ ಅಥವ ಸೂಕ್ತ ಕ್ರಮ ಕೈಗೊಳ್ಳಲು ವಿಫಲರಾಗಿದ್ದಲ್ಲಿ, ಕೈಗೊಂಡಿರುವ ಕ್ರಮಗಳ ವರದಿ ನೀಡಲು ದೂರನ್ನು ಸಂಬಂಧಿತ ಪೊಲೀಸರಿಗೆ ರವಾನಿಸುವುದು
- ಉದ್ದೇಶಿತ/ ಅಪೇಕ್ಷಣೀಯ ಕ್ರಮ ಕೈಗೊಳ್ಳಲು ವಿದೇಶದಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ದೂರನ್ನು ರವಾನಿಸುವುದು
- ಸೂಕ್ತ ನ್ಯಾಯಾಲಯಗಳು ನೀಡಿದ ಕರೆಸೆಲವು/ ಸಮನ್ಸ್, ಒಪ್ಪಿಗೆಯೋಲೆ/ ವಾರಂಟ್ ಆದೇಶಗಳನ್ನು ಸರಿಯಾಗಿ ತಲುಪಿಸಲು ವಿದೇಶಾಂಗ ಸಚಿವಾಲಯ, ಗೃಹ ಸಚಿವಾಲಯ ಹಾಗೂ ಕಾನೂನು ಮತ್ತು ನ್ಯಾಯಾಂಗ ಸಚಿವಾಲಯಗಳಿಗೆ ದೂರುಗಳನ್ನು ರವಾನಿಸುವುದು
- ರಹದಾರಿಗಳಿಗೆ ಸಂಬಂಧಿಸಿದ ವಿಷಯಗಳಿಗಾಗಿ ರಹದಾರಿ ಪ್ರಾಧಿಕಾರಕ್ಕೆ ದೂರನ್ನು ರವಾನಿಸುವುದು

**31) ನಾನು ಆಸ್ಟ್ರೇಲಿಯದಲ್ಲಿ ವಾಸವಾಗಿದ್ದೇನೆ. ಸಹಾಯಕ್ಕಾಗಿ ನಾನು ಸಂಪರ್ಕಿಸಬಹುದಾದ ಯಾವುದಾದರೂ ಸಂಸ್ಥೆ ಅಲ್ಲಿದೆಯೆ?**

ಹೌದು ಇದೆ. ನೀವು ಅಲ್ಲಿಯ ಆಸ್ಟ್ರೇಲಿಯ ಸರ್ಕಾರದ ಸಮಾಜ ಸೇವಾ ಇಲಾಖೆಯನ್ನು ಸಹಾಯಕ್ಕಾಗಿ ಸಂಪರ್ಕಿಸಬಹುದು.

i. ಆಸ್ಟ್ರೇಲಿಯದಲ್ಲಿ ಸಾಂಸಾರಿಕ ಮತ್ತು ಕೌಟುಂಬಿಕ ಹಿಂಸೆಗಳು ಕಾನೂನಿಗೆ ವಿರುದ್ಧವಾದ ಅಪರಾಧಗಳು. ಅಂತಹ ಅಪರಾಧಗಳನ್ನು ಎಸಗುವವರು ಪುರುಷರಾದರೂ ಆಗಲಿ, ಮಹಿಳೆಯರಾದರೂ ಆಗಲಿ, ಅವರು ಜೈಲಿಗೆ ಹೋಗಬೇಕಾಗುತ್ತದೆ.

ii. ನೀವಾಗಲೀ ಅಥವ ನಿಮಗೆ ತಿಳಿದವರು ಯಾರಾದರೂ ಆಗಲಿ ತೊಂದರೆಯಲ್ಲಿದ್ದರೆ/ ಅಪಾಯದಲ್ಲಿದ್ದರೆ, 000 ನಂಬರಿನ ಮೂಲಕ ಪೊಲೀಸರಿಗೆ ಕರೆಮಾಡಿರಿ. ಆಸ್ಟ್ರೇಲಿಯದ ಪೊಲೀಸರು ಸಂರಕ್ಷಕರು/ ನಂಬಲರ್ಹರು/ ವಿಶ್ವಾಸಾರ್ಹರು.

iii. ಉಚಿತ ಹಾಗೂ ಗೋಪ್ಯ ಸಲಹೆ ಮತ್ತು ಬೆಂಬಲಕ್ಕಾಗಿ 1800–737–732ರ ಮೂಲಕ 1800 RESPECT ಗೆ ಕರೆ ಮಾಡಿ. 1800 RESPECT ಆಸ್ಟ್ರೇಲಿಯದ ಲೈಂಗಿಕ ದೌರ್ಜನ್ಯ, ಕೌಟುಂಬಿಕ ಹಾಗೂ ಸಾಂಸಾರಿಕ ಹಿಂಸೆಗಳ ರಾಷ್ಟ್ರೀಯ ಸಲಹಾ ಸೇವೆ. ಅದು ಉಚಿತವೂ, ಗೋಪ್ಯವೂ ಆಗಿದ್ದು, ತತ್‌ಕ್ಷಣದ ಸಲಹೆ ಮತ್ತು ಮಾಹಿತಿಗಳನ್ನು ಒದಗಿಸುತ್ತದೆ. ಅಲ್ಲಿನ ಆಪ್ತ ಸಮಾಲೋಚಕರು ನಿಮ್ಮ ದೂರನ್ನು ಆಲಿಸುತ್ತಾರೆ, ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ ಹಾಗೂ ನಿಮ್ಮ ಸ್ಥಳೀಯ ಪ್ರದೇಶದಲ್ಲಿ ಸಿಗುವ ಸೇವೆ ಮತ್ತು ಬೆಂಬಲಗಳಿರುವಲ್ಲಿಗೆ ನಿಮ್ಮನ್ನು ಕಳಿಸಿಕೊಡುತ್ತಾರೆ. ನಿಮಗೆ ಉಚಿತ ದುಭಾಷಿ ಬೇಕಾದರೆ 131 450 ಕ್ಕೆ ಕರೆ ಮಾಡಿ.

iv. ಸಾಂಸಾರಿಕ ಹಾಗೂ ಕೌಟುಂಬಿಕ ಹಿಂಸೆಯು ಭಯ ಹುಟ್ಟಿಸುವ ಅಥವ ಅವರ ಸುರಕ್ಷತೆಗೆ ಭಂಗ ತರುವ ಮೂಲಕ ತಮ್ಮ ಮಹಿಳಾ ಅಥವ ಪುರುಷ ಸಂಗಾತಿಯನ್ನು ನಿಯಂತ್ರಿಸುವ ಉದ್ದೇಶದಿಂದ ಪ್ರದರ್ಶಿಸುವ ವರ್ತನೆ ಅಥವ ಹೆದರಿಸುವುದನ್ನು ಒಳಗೊಂಡಿದೆ. ಅದು ಈ ಕೆಳಗಿನವುಗಳನ್ನು ಹೊಂದಿರುತ್ತದೆ :

- ಹೊಡೆಯುವುದು
- ಉಸಿರುಗಟ್ಟಿಸುವುದು
- ಸಂಗಾತಿಗೆ ಅಥವ ಕುಟುಂಬಕ್ಕೆ ಆವಶ್ಯಕ ಹಣವನ್ನು ನಿರಾಕರಿಸುವುದು
- ಸಂಗಾತಿಯನ್ನು ಸ್ನೇಹಿತರಿಂದ ಮತ್ತು ಕುಟುಂಬದಿಂದ ಪ್ರತ್ಯೇಕಿಸುವುದು
- ಸಂಗಾತಿಯನ್ನು ಸತತವಾಗಿ ಅಪಮಾನಿಸುವುದು ಅಥವ ಟೀಕಿಸುವುದು
- ಮಕ್ಕಳನ್ನು ಅಥವ ಸಾಕುಪ್ರಾಣಿಗಳನ್ನು ಬೆದರಿಸುವುದು

ಹೆಚ್ಚಾಗಿ ಕೇಳಿದ ಪ್ರಶ್ನೆಗಳು (FAQ) ಸಾಗರೋತ್ತರ ಭಾರತೀಯ ಸಂಗಾತಿಗಳಿಂದ ಮೋಸಹೋದ/ ಪರಿತ್ಯಕ್ತರಾದ/ ದೌರ್ಜನ್ಯಕ್ಕೊಳಗಾದ ಭಾರತೀಯ ಮಹಿಳೆಯರಿಗೆ ವಿದೇಶದಲ್ಲಿ ಕಾನೂನು ಹಾಗೂ ಇತರ ಸಹಾಯಗಳನ್ನೊದಗಿಸುವುದು*

*–2016ರ ಫೆಬ್ರವರಿ–ಮಾರ್ಚ್ ಅವಧಿಯಲ್ಲಿ ಭಾರತೀಯ ರಾಯಭಾರ ಕಚೇರಿಗಳಿಂದ ಸ್ವೀಕರಿಸಿದ ಮಾಹಿತಿಯ ಆಧಾರದ ಮೇಲೆ ಈ ದತ್ತಾಂಶವನ್ನು ಕ್ರೋಡೀಕರಿಸಲಾಗಿದೆ.

<u>ಪರಿವಿಡಿ</u>

1. ಯುನೈಟೆಡ್ ಅರಬ್ ಎಮಿರೇಟ್ಸ್
2. ಬಹರೇನ್
3. ಕುವೈತ್
4. ಜರ್ಮನಿ
5. ಯುನೈಟೆಡ್ ಕಿಂಗ್‌ಡಂ
6. ಅಮೆರಿಕದ ಸಂಯುಕ್ತ ಸಂಸ್ಥಾನಗಳು
7. ಆಸ್ಟ್ರೇಲಿಯ
8. ನ್ಯೂಝಿಲ್ಯಾಂಡ್
9. ಕೆನಡ

**1. <u>ಯುನೈಟೆಡ್ ಅರಬ್ ಎಮಿರೇಟ್ಸ್ :</u>**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು | ವಿದೇಶದಲ್ಲಿ ಸಿಗುತ್ತಿರುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಇಂತಹ ಯಾವ ವ್ಯವಸ್ಥೆಯೂ ಇಲ್ಲ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಸಾಂಪ್ರದಾಯಿಕ ವಿವಾಹ) | ವಿವಾಹ ನೋದಣಿ ಪ್ರಮಾಣ ಪತ್ರದ ಬದಲಾಗಿ ಮದುವೆಯ ಶಪಥಪತ್ರವನ್ನು ಸಾಮಾನ್ಯವಾಗಿ ಅಂಗೀಕರಿಸಲಾಗುತ್ತದೆ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಭಾರತದಲ್ಲಿರುವಂತಹ ವರದಕ್ಷಿಣೆ ವಿರೋಧಿ ಕಾನೂನುಗಳೇನೂ ಇಲ್ಲ. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಇಂತಹ ಯಾವುದೇ ಕಾನೂನುಗಳೂ ಇಲ್ಲ. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಇಂತಹ ಯಾವುದೇ ಕಾನೂನುಗಳೂ ಇಲ್ಲ. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಪತಿಯಿಂದ ಭಾರತೀಯ ಮಹಿಳಾ ಪತ್ನಿಯ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ಇಂತಹ ಯಾವುದೇ ಕಾನೂನುಗಳೂ ಇಲ್ಲ. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಇಂತಹ ಯಾವುದೇ ಸೌಲಭ್ಯಗಳು ಸ್ಥಳೀಯ ಸರ್ಕಾರಗಳಿಂದ ಲಭ್ಯವಿಲ್ಲ. ಆದರೆ ಪರಿಮಿತ ಸ್ಥಳಾವಕಾಶದೊಂದಿಗೆ ಭಾರತೀಯ ರಾಯಭಾರ/ ದೂತಾವಾಸ ಆಶ್ರಯ ಕೇಂದ್ರವು ದುಬೈನಲ್ಲಿ ಲಭ್ಯವಿದೆ. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಇದನ್ನು ಸಾಗರೋತ್ತರ ಭಾರತೀಯ ಸಂಗಾತಿಯ ವಿವೇಚನೆಗೆ ಬಿಡಲಾಗಿದೆ. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಆಸ್ತಿಯು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿದ್ದರೆ ಅಲ್ಲಿನ ನ್ಯಾಯಾಲಯಗಳು ಪೌರ ಹಕ್ಕುಗಳನ್ನು ಅಂಗೀಕರಿಸಬಹುದು. ಆದರೆ ಪತ್ನಿಯು ಆಸ್ತಿಗೆ ತನ್ನ ಕೊಡುಗೆಯನ್ನು ಸಾಧಿಸಿ ತೋರಿಸಬೇಕಾಗುತ್ತದೆ. ಇದು ಪತ್ನಿಯ ಜೀವನಾಂಶ/ ದೈನಂದಿನ ವೆಚ್ಚದ ಬೇಡಿಕೆಯನ್ನು ಬಲಗೊಳಿಸುತ್ತದೆ. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಹೌದು ಇದೆ. ಪೊಲೀಸರು ಹಾಗೂ ನ್ಯಾಯಾಲಯಗಳು ಇಂತಹವುಗಳನ್ನು ಅಪರಾಧಗಳೆಂದು ಪರಿಗಣಿಸುತ್ತಾರೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಪರಾಧ ಶಾಸ್ತ್ರದ ಕಾನೂನಿನ 53ನೇ ಅಂಶದ ಅಡಿಯಲ್ಲಿ ಕೌಟುಂಬಿಕ ನ್ಯಾಯಾಲಯವು ಇದನ್ನು ತೀರ್ಮಾನಿಸುತ್ತದೆ. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಇಂತಹವು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಅಪರೂಪ. ಇಂತಹ ಮೊಕದ್ದಮೆಗಳಿಗೆ ಯಾವುದೇ ಕಾನೂನು ನೆರವುಗಳೂ ಲಭ್ಯವಿಲ್ಲ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ | ಮಕ್ಕಳು ಚಿಕ್ಕವಾಗಿದ್ದರೆ ಸಾಮಾನ್ಯವಾಗಿ ನ್ಯಾಯಾಲಯಗಳು ಅಂತಹ |

| | | |
|---|---|---|
| | ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಮಕ್ಕಳನ್ನು ತಾಯಿಯ ವಶಕ್ಕೆ ಕೊಡುತ್ತವೆ. 13 ವರ್ಷಕ್ಕಿಂತ ಚಿಕ್ಕ ಹೆಣ್ಣುಮಕ್ಕಳು ಹಾಗೂ 8 ವರ್ಷಕ್ಕಿಂತ ಚಿಕ್ಕ ಗಂಡು ಮಕ್ಕಳು ತಾಯಿಯೊಂದಿಗಿರುತ್ತಾರೆ. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಬಲವಾದ ಸಾಕ್ಷಿಗಳ ಮೂಲಕ ಸಾಧಿಸಬಹುದಾದರೆ, ಪತ್ನಿಯ ಅನುಪಸ್ಥಿತಿಯಲ್ಲಿಯೂ ಅಂತಹ ತೀರ್ಪು/ ವಿಚ್ಛೇದನಗಳನ್ನು ಪ್ರಶ್ನಿಸಬಹುದು. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಕಾನೂನು ವೆಚ್ಚಗಳು ಬಹಳ ದುಬಾರಿಯಾಗಿರುವುದರಿಂದ ಅಂತಹ ವಿಷಯಕ್ಕೆ ಕಾನೂನು ಸಹಾಯ ಹಾಗೂ ಮೊಕದ್ದಮೆ ಹೂಡುವುದಕ್ಕೆ ಸುಮಾರು ರೂ.4,000/– ದಷ್ಟು ಬೇಕಾಗಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಕರೆಸೆಲವು/ ಸಮನ್ಸ್‌ಗಳನ್ನು ಆಯಾ ದೇಶಗಳಲ್ಲಿರುವ ಭಾರತೀಯ ದೂತಾವಾಸಗಳ ಮೂಲಕ ತಲುಪಿಸಬಹುದು. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಯುನೈಟೆಡ್ ಅರಬ್ ಎಮಿರೇಟ್ಸ್‌ನ ನ್ಯಾಯಾಲಯಗಳ ಷರಿಯಾ ಕೌಟುಂಬಿಕ ವಿಭಾಗದಿಂದ ಉಚಿತ ಸಲಹೆಗಳು ಲಭ್ಯವಿವೆ. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಭಾರತೀಯ ನ್ಯಾಯಾಲಯಗಳ ತೀರ್ಪುಗಳನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ನ ನ್ಯಾಯಾಲಯಗಳು ಪರಿಗಣಿಸುತ್ತವೆ. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಭಾರತೀಯ ದೂತಾವಾಸಗಳ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನ ನ್ಯಾಯಾಲಯಗಳ ಮೂಲಕ ತಲುಪಿಸಲಾಗುತ್ತದೆ (1999ರ ಯುನೈಟೆಡ್ ಅರಬ್ ಎಮಿರೇಟ್ಸ್ – ಭಾರತ ಒಪ್ಪಂದದನ್ವಯ). |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಸಂಗಾತಿಯು ಹೊಣೆಗಾರನಾಗಿದ್ದಲ್ಲಿ ಅದನ್ನು ಆತನ ವಿವೇಚನೆಗೆ ಬಿಡಲಾಗಿರುತ್ತದೆ. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಭಾರತೀಯ ಕಾನೂನಿನ ಅಂಶಗಳನ್ನು ಚಲಾಯಿಸುವ ಮೂಲಕ ನ್ಯಾಯಾಲಯಗಳು ಜೀವನಾಂಶವನ್ನು ನೀಡುತ್ತಿವೆ. |

**2. <u>ಬಹರೇನ್</u> :**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ– ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ– ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಬಹರೇನಿನಲ್ಲಿ ಇಂತಹ ಯಾವ ವ್ಯವಸ್ಥೆಯೂ ಇಲ್ಲ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ಇಲ್ಲಿನ ರಾಯಭಾರ ಕಚೇರಿಗೆ ಇಂತಹ ಯಾವುದೇ ದೂರು ದಾಖಲಾಗಿಲ್ಲ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಬಹರೇನಿನ ಕಾನೂನು ವ್ಯವಸ್ಥೆಯಲ್ಲಿ ವರದಕ್ಷಿಣೆ ಒತ್ತಾಯಕ್ಕೆ ಯಾವುದೇ ಅವಕಾಶವಿಲ್ಲ. ಷರಿಯತ್ ಕಾನೂನಿನನ್ವಯ ಚಲಾಯಿಸುವ 'ಮೆಹರ್' ವ್ಯವಸ್ಥೆ ಮಾತ್ರ ಇದೆ. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಇಲ್ಲಿನ ರಾಯಭಾರ ಕಚೇರಿಯಲ್ಲಿ ಇದುವರೆಗೂ ಈ ರೀತಿಯ ಯಾವುದೇ ದೂರು ದಾಖಲಾಗಿಲ್ಲ. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಭಾರತದಿಂದ ಪತ್ನಿ/ ಆಕೆಯ ಕುಟುಂಬದ ಸದಸ್ಯರಿಂದ ಕೋರಿಕೆ ಬಂದಾಗ ಬಹರೇನಿನ ವಿದೇಶಾಂಗ ಸಚಿವಾಲಯ ಮತ್ತು ವಲಸೆ ಪ್ರಾಧಿಕಾರದಿಂದ ಸಹಾಯವನ್ನು ದೊರಕಿಸಲಾಗುವುದು. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ಇಲ್ಲಿನ ರಾಯಭಾರ ಕಚೇರಿಯಲ್ಲಿ ಇದುವರೆಗೂ ಈ ರೀತಿಯ ಯಾವುದೇ ದೂರು ದಾಖಲಾಗಿಲ್ಲ. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಇಂತಹ ದೂರುಗಳ ಪರಿಹಾರಕ್ಕಾಗಿ ಬಹರೇನ್ ಸರ್ಕಾರವು ರಚಿಸಿರುವ ಆಶ್ರಯ ಕೇಂದ್ರಕ್ಕೆ ಅವುಗಳನ್ನು ಕಳುಹಿಸಲಾಗುವುದು. ಅಂತಹ ಆಶ್ರಯ ಕೇಂದ್ರವು ಎಲ್ಲ ರೀತಿಯ ಸೌಲಭ್ಯಗಳನ್ನೂ ಒಳಗೊಂಡಿರುತ್ತದೆ. ಸಂಕಷ್ಟ ಸ್ಥಿತಿಯಲ್ಲಿರುವ ಇಂತಹ ಮಹಿಳೆಯರಿಗಾಗಿ 'ವಲಸೆ ಕಾರ್ಮಿಕರ ರಕ್ಷಣಾ ಸಂಘ' ಎಂಬ ಸರ್ಕಾರೇತರ ಸಂಸ್ಥೆಯೂ ಕೂಡ ಅಂತಹ ಒಂದು ಆಶ್ರಯ ಕೇಂದ್ರವನ್ನು ನಡೆಸುತ್ತಿದೆ. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ತಮ್ಮ ಸಂಗಾತಿಗಳಿಂದ ಪರಿತ್ಯಕ್ತರಾಗಿರುವ ವಿದೇಶೀ ಮಹಿಳೆ/ ಮಕ್ಕಳಿಗೆ ಶಾಶ್ವತ ಪೌರತ್ವ ನೀಡಲು ಬಹರೇನಿನ ಕಾನೂನಿನಲ್ಲಿ ಯಾವುದೇ ಅವಕಾಶವಿಲ್ಲ. ಪತಿ/ ತಂದೆಯ ಉದ್ಯೋಗ ಕರಾರನ್ನು ಆಧರಿಸಿರುವ ಅವಲಂಬಿತ ವೀಸಾದೊಂದಿಗೆ ಪತ್ನಿ/ ಮಕ್ಕಳು |

| | | |
|---|---|---|
| | | ಸಾಮಾನ್ಯವಾಗಿ ಬಹರೇನಿಗೆ ಬರುತ್ತಾರೆ. ಅವರ ಅವಲಂಬಿತ ವೀಸಾ ನವೀಕರಣ/ ಅಥವ ಹಳೆ/ ಹೊಸ ಉದ್ಯೋಗದಾತರಿಂದ ಪ್ರಾಯೋಜಿತವಾಗದ ಹೊರತು ಅವರು ತಮ್ಮ ಪತಿ/ ತಂದೆಯ ಉದ್ಯೋಗ ಕರಾರಿನ ಅವಧಿಯವರೆಗೆ ಮಾತ್ರ ಬಹರೇನಿನಲ್ಲಿರಲು ಸಾಧ್ಯ. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಬಹರೇನಿನ ಸ್ಥಳೀಯ ಕಾನೂನಿನ ಪ್ರಕಾರ ಆಸ್ತಿ ಹಕ್ಕುಗಳು ತಂದೆಯಿಂದ ಮಕ್ಕಳಿಗೆ ನೇರವಾಗಿ ವರ್ಗಾವಣೆ ಆಗುತ್ತವೆಯೆ ಹೊರತು, ಮೃತ ಪತಿಯ ಆಸ್ತಿಯ ಉತ್ತರಾಧಿಕಾರವು ಆತನ ಪತ್ನಿಗೆ ಸಿಗುವ ಯಾವ ಅವಕಾಶಗಳೂ ಇಲ್ಲ. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಇಂಹ ಕೆಲವು ದೂರುಗಳು ದಾಖಲಾಗಿವೆ ಮತ್ತು ಅಂತಹ ಸಂತ್ರಸ್ತೆಯರಿಗೆ ಇಲ್ಲಿನ ರಾಯಭಾರ ಕಚೇರಿಯು ನಿಗದಿ ಮಾಡಿರುವ ಸ್ಥಳೀಯ ವಕೀಲರ ಮೂಲಕ ಕಾನೂನು ನೆರವನ್ನು ನೀಡಲಾಗಿದೆ. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಇಲ್ಲಿನ ರಾಯಭಾರ ಕಚೇರಿಯಲ್ಲಿ ಇದುವರೆಗೂ ಈ ರೀತಿಯ ಯಾವುದೇ ದೂರು ದಾಖಲಾಗಿಲ್ಲ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಇಲ್ಲಿನ ರಾಯಭಾರ ಕಚೇರಿಯಲ್ಲಿ ಇದುವರೆಗೂ ಈ ರೀತಿಯ ಯಾವುದೇ ದೂರು ದಾಖಲಾಗಿಲ್ಲ. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಸಾಮಾನ್ಯವಾಗಿ ಬಹರೇನಿನ ಸ್ಥಳೀಯ ನ್ಯಾಯಾಲಯಗಳು ಆಪಾದಿತರಿಗೆ ತನ್ನ ನಡೆಯನ್ನು ಸಮರ್ಥಿಸಿಕೊಳ್ಳಲು ಮೂರು ಅವಕಾಶಗಳನ್ನು ನೀಡುತ್ತದೆ. ವಿಚಾರಣೆಗೆ ಯಾವುದೇ ಪಕ್ಷದವರು ಸತತವಾಗಿ ಮೂರು ಬಾರಿ ಗೈರುಹಾಜರಾದರೆ, ವಿಚಾರಣೆಯ ವಿಷಯವನ್ನಾಧರಿಸಿ ಅವರ ಅನುಪಸ್ಥಿತಿಯಲ್ಲಿ ಏಕಪಕ್ಷೀಯ ತೀರ್ಪು/ ವಿಚ್ಛೇದನವನ್ನು ನ್ಯಾಯಾಲಯವು ನೀಡಬಹುದು. ಆದರೆ ಇಲ್ಲಿಯವರೆವಿಗೂ ಇಂತಹ ಯಾವುದೇ ದೂರು ಸಹ ಇಲ್ಲಿನ ದೂತಾವಾಸದ ಗಮನಕ್ಕೆ ಬಂದಿಲ್ಲ. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ವ್ಯಾಜ್ಯದ ಗಂಭೀರತೆ ಮತ್ತು ಗೊತ್ತುಮಾಡಿಕೊಂಡಿರುವ ವಕೀಲರ ಅಂತಸ್ತನ್ನು ಆಧರಿಸಿ, ವಕೀಲರ ಶುಲ್ಕವು 1,000 ದಿಂದ 2,000 ಬಹರೇನ್ ದೀನಾರುಗಳು, ಅಂದರೆ 2,700 ರಿಂದ 5,400 ಅಮೆರಿಕನ್ ಡಾಲರುಗಳಷ್ಟಾಗಬಹುದು. ನ್ಯಾಯಾಲಯದಲ್ಲಿ ಸಂತ್ರಸ್ತೆಯ ಪರವಾಗಿ ವಾದ ಮಂಡಿಸಲು ಒಬ್ಬ ಸಾಧಾರಣ ಸೂಕ್ತ ವಕೀಲರ ಶುಲ್ಕವು ಕನಿಷ್ಠ 3,000 ಅಮೆರಿಕನ್ ಡಾಲರುಗಳಷ್ಟಾಗಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಸ್ಥಳೀಯ ವಿದೇಶೀ ಕಚೇರಿ/ ಕಾನೂನು ಮತ್ತು ಇಸ್ಲಾಮಿಕ್ ಸಚಿವಾಲಯದ ಮೂಲಕ, ಸಂಬಂಧಿಸಿದ ವ್ಯಕ್ತಿಗೆ ನೋಟೀಸುಗಳನ್ನು ತಲುಪಿಸಲು ಪ್ರಯತ್ನಿಸಲಾಗುವುದು. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಭಾರತೀಯ ಮಹಿಳೆಯರಿಗೆ ಬಹರೇನಿನಲ್ಲಿ ಇಂತಹ ಯಾವ ಅವಕಾಶಗಳೂ ಇಲ್ಲ. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ನ್ಯಾಯಾಂಗ ಸಹಕಾರ ಕ್ಷೇತ್ರದಲ್ಲಿ ಭಾರತ ಹಾಗೂ ಬಹರೇನ್ ದೇಶಗಳ ನಡುವೆ ಮೂರು ಒಪ್ಪಂದಗಳಿಗೆ ಸಹಿ ಬಿದ್ದಿದೆ:<br>(1) ಕ್ರಿಮಿನಲ್ ವ್ಯಾಜ್ಯಗಳಲ್ಲಿ ಪರಸ್ಪರ ಕಾನೂನು ಸಹಾಯ ಒದಗಿಸುವುದು,<br>(2) ನ್ಯಾಯಾಂಗ ಮತ್ತು ಕಾನೂನು ಸಹಕಾರ ಹಾಗೂ<br>(3) ಅಪರಾಧಿಯನ್ನು ಗಡಿಪಾರು ಮಾಡಿ, ಪರಸ್ಪರರ ದೇಶಗಳಿಗೆ ಒಪ್ಪಿಸುವುದು |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಭಾರತೀಯ ನ್ಯಾಯಾಲಯಗಳಿಂದ ಸ್ವೀಕರಿಸಿದ ಸಮನ್ಸ್/ ಬಂಧನ ವಾರಂಟುಗಳನ್ನು ಬಹರೇನಿನ ವಿದೇಶಾಂಗ/ ಕಾನೂನು ಸಚಿವಾಲಯಗಳ ಮೂಲಕ ಆರೋಪಿಗಳಿಗೆ ತಲುಪಿಸಲಾಗುತ್ತದೆ. ಭಾರತ ಹಾಗೂ ಬಹರೇನ್ ದೇಶಗಳು "ಕ್ರಿಮಿನಲ್ ವ್ಯಾಜ್ಯಗಳಲ್ಲಿ ಪರಸ್ಪರ ಕಾನೂನು ಸಹಾಯ ಒದಗಿಸುವುದು", "ನಾಗರಿಕ ಮತ್ತು ವಾಣಿಜ್ಯ ವಿಷಯಗಳಲ್ಲಿ ನ್ಯಾಯಾಂಗ ಮತ್ತು ಕಾನೂನು ಸಹಕಾರ" ಹಾಗೂ "ಅಪರಾಧಿಯನ್ನು ಗಡಿಪಾರು ಮಾಡಿ, ಪರಸ್ಪರರ ದೇಶಗಳಿಗೆ ಒಪ್ಪಿಸುವ" ವಿಷಯಗಳ ಬಗ್ಗೆ 2004ರಲ್ಲಿ ಒಪ್ಪಂದಗಳಿಗೆ ಸಹಿ ಹಾಕಿವೆ. ಈ ಒಪ್ಪಂದದ ಅಂಶಗಳಿಗನುಗುಣವಾಗಿ ಸ್ಥಳೀಯ ಸರ್ಕಾರದ ಸಹಕಾರವನ್ನು ಅಪೇಕ್ಷಿಸಿ, ಒದಗಿಸಲಾಗುವುದು. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ತಮ್ಮ ಸಂಗಾತಿಗಳಿಂದ ಪರಿತ್ಯಕ್ತರಾಗಿರುವ ವಿದೇಶೀ ಮಹಿಳೆ/ ಮಕ್ಕಳಿಗೆ ಶಾಶ್ವತ ಪೌರತ್ವ ನೀಡಲು ಬಹರೇನಿನ ಕಾನೂನಿನಲ್ಲಿ ಯಾವುದೇ ಅವಕಾಶವಿಲ್ಲ. ಪತಿ/ ತಂದೆಯ ಉದ್ಯೋಗ ಕರಾರನ್ನು ಆಧರಿಸಿರುವ ಅವಲಂಬಿತ ವೀಸಾದೊಂದಿಗೆ ಪತ್ನಿ/ ಮಕ್ಕಳು ಸಾಮಾನ್ಯವಾಗಿ ಬಹರೇನಿಗೆ ಬರುತ್ತಾರೆ. ಅವರ ಅವಲಂಬಿತ ವೀಸಾ ನವೀಕರಣ/ ಅಥವ ಹಳೆ/ ಹೊಸ ಉದ್ಯೋಗದಾತರಿಂದ ಪ್ರಾಯೋಜಿತವಾಗದ ಹೊರತು ಅವರು ತಮ್ಮ ಪತಿ/ ತಂದೆಯ ಉದ್ಯೋಗ ಕರಾರಿನ ಅವಧಿಯವರೆಗೆ ಮಾತ್ರ ಬಹರೇನಿನಲ್ಲಿರಲು ಸಾಧ್ಯ. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಮಕ್ಕಳಿಗೆ 18 ವರ್ಷ ವಯಸ್ಸಾಗುವವರೆಗೆ ಮಾತ್ರ ಜೀವನಾಂಶ ಒದಗಿಸುವ ಅವಕಾಶಗಳು ಬಹರೇನಿನ ಕಾನೂನು ವ್ಯವಸ್ಥೆಯಲ್ಲಿದೆ. ಪತಿಯಿಂದ ಪರಿತ್ಯಕ್ತಳಾದ/ ವಿಚ್ಛೇದಿತಳಾದ ಪತ್ನಿಗೆ ಜೀವನಾಂಶ ನೀಡುವ ಯಾವುದೇ ಅವಕಾಶಗಳೂ ಅದರಲ್ಲಿಲ್ಲ. |

**3. <u>ಕುವೈತ್</u> :**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಆಯಾ ವ್ಯಕ್ತಿಯು ಸಲ್ಲಿಸಿರುವ ದಾಖಲೆಗಳ ಲಭ್ಯತೆಯ ಆಧಾರದಲ್ಲಿ ನಿರ್ದಿಷ್ಟ ಕೋರಿಕೆಗಳನ್ನು ಪರೀಕ್ಷಿಸಬಹುದು. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ವಿವಾಹ ಪ್ರಮಾಣ ಪತ್ರ/ ಬಾಂಧವ್ಯ ಪ್ರಮಾಣ ಪತ್ರಗಳಂತಹ ದಾಖಲೆಗಳು ರಾಯಭಾರ ಕಚೇರಿಯಿಂದ ಪ್ರಮಾಣೀಕರಿಸಲ್ಪಡದಿದ್ದಲ್ಲಿ ಅಂತಹವರಿಗೆ ವೀಸಾ ನೀಡಲು ಸ್ಥಳೀಯ ಅಧಿಕಾರಿಗಳು ಒಪ್ಪುವುದಿಲ್ಲ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಭಾರತೀಯ ನ್ಯಾಯಾಲಯಗಳಲ್ಲಿ ಇಂತಹ ವ್ಯಾಜ್ಯಗಳನ್ನು ಪರಿಹರಿಸಲಾಗುವುದು. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಭಾರತೀಯ ನ್ಯಾಯಾಲಯಗಳಲ್ಲಿ ಇಂತಹ ವ್ಯಾಜ್ಯಗಳನ್ನು ಪರೀಕ್ಷಿಸಿ, ನ್ಯಾಯಾಂಗ ವಿಚಾರಣೆಗಳ ಮೂಲಕ ಪರಿಹರಿಸಲಾಗುವುದು. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಅರ್ಜಿದಾರರು ಒದಗಿಸಿರುವ ಪಾಸ್‌ಪೋರ್ಟ್ ಸಂಖ್ಯೆ, ನಾಗರಿಕ ಗುರುತು–ಪತ್ತೆಗಳು, ಪ್ರಾಯೋಜಕರ ವಿವರಗಳು ಇತ್ಯಾದಿ ವಿವರಗಳ ಆಧಾರದ ಮೇಲೆ, ವ್ಯಕ್ತಿಯ ಗುರುತು–ಪತ್ತೆಗ, ವಿಳಾಸಗಳನ್ನು ಒದಗಿಸುವಂತೆ, ಭಾರತೀಯ ರಾಯಭಾರ ಕಚೇರಿಯು ಕುವೈತಿನ ಸ್ಥಳೀಯ ಅಧಿಕಾರಿಗಳನ್ನು ಕೇಳುತ್ತದೆ. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ಅರ್ಜಿದಾರರು ಒದಗಿಸಿರುವ ಪಾಸ್‌ಪೋರ್ಟ್ ಸಂಖ್ಯೆ, ನಾಗರಿಕ ಗುರುತು–ಪತ್ತೆಗಳು, ಪ್ರಾಯೋಜಕರ ವಿವರಗಳು ಇತ್ಯಾದಿ ವಿವರಗಳ ಆಧಾರದ ಮೇಲೆ, ವ್ಯಕ್ತಿಯ ಗುರುತು–ಪತ್ತೆ ಹಾಗೂ ವಿಳಾಸಗಳನ್ನು ಒದಗಿಸುವಂತೆ, ಭಾರತೀಯ ರಾಯಭಾರ ಕಚೇರಿಯು ಕುವೈತಿನ ಸ್ಥಳೀಯ ಅಧಿಕಾರಿಗಳನ್ನು ಕೇಳುತ್ತದೆ. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಮಹಿಳಾ ಮನೆಗೆಲಸದವರಿಗಾಗಿ ಭಾರತೀಯ ರಾಯಭಾರ ಕಚೇರಿಯ ಆಶ್ರಯ ಕೇಂದ್ರವಿದೆ. ಮನೆಗೆಲಸದ ವೀಸಾ (ಕ್ರಮ ಸಂಖ್ಯೆ 20) ಹೊಂದಿರುವ ಕಣ್ಮರೆಯಾಗಿರುವ ಮನೆಗೆಲಸದವರಿಗಾಗಿ ಸ್ಥಳೀಯ ಅಧಿಕಾರಿಗಳು ಅಂತಹ ಆಶ್ರಯ ಕೇಂದ್ರವನ್ನು ನಡೆಸುತ್ತಿದ್ದಾರೆ. 'ಕೌಟುಂಬಿಕ ವೀಸಾ'ದಡಿಯಲ್ಲಿ ಬಂದಿರುವವರಿಗಾಗಿ ಕುವೈತಿನಲ್ಲಿ ಇಂತಹ ಯಾವುದೇ ಆಶ್ರಯಗಳಿಲ್ಲ. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಪತ್ನಿಯು ಪತಿಯೊಂದಿಗೆ ಬಂದು ವಾಸವಿರದಿದ್ದರೆ, ಅಂತಹವರಿಗೆ ಕುವೈತಿನ ನಿವಾಸಿ ನಿಯಮಗಳು ಶಾಶ್ವತ ನಿವಾಸಿ ರಹದಾರಿಯನ್ನು ನೀಡುವುದಿಲ್ಲ. ಆದರೆ, ಕಾನೂನಾತ್ಮಕವಾಗಿ ದಂಪತಿಗಳು ಬೇರೆಯಾಗಿರದಿದ್ದರೆ ಪತ್ನಿಯ ನಿವಾಸಿತನವು ಆಕೆಯ ಪತಿಯ ವಿವರಗಳಲ್ಲಿ ದಾಖಲಾಗುವುದನ್ನು ಸ್ಥಳೀಯ ಅಧಿಕಾರಿಗಳು ಖಾತ್ರಿಪಡಿಸಿಕೊಳ್ಳುತ್ತಾರೆ. ಇದರಲ್ಲೇನಾದರೂ ತಪ್ಪಿದ್ದಲ್ಲಿ, ಪತಿಯ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತದೆ. ಕುವೈತಿನ ನಿವಾಸಿ ನಿಯಮಗಳನ್ನು ಪಾಲಿಸಿರುವ ಷರತ್ತಿಗೊಳಪಟ್ಟು, 22ನೇ ಕಲಮಿನಡಿಯಲ್ಲಿನ (ಕುಟುಂಬ) ವೀಸಾವನ್ನು 18ನೇ ಕಲಮಿನಡಿಯಲ್ಲಿನ ಕಾರ್ಮಿಕ ವೀಸಾಕ್ಕೆ ಬದಲಾಯಿಸುವ ಅವಕಾಶವಿದೆ. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಸಾಧ್ಯವಿಲ್ಲ. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಸ್ಥಳೀಯ ಕಾನೂನುಗಳಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಸಂತ್ರಸ್ತೆಯು ಸ್ಥಳೀಯ ಪೊಲೀಸರನ್ನು ಕಾಣಬಹುದು. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಕೈಗೊಳ್ಳಬೇಕಾದ ಕ್ರಮವು ಈ ವಿಷಯದಲ್ಲಿ ಸೂಕ್ತ ನ್ಯಾಯಾಲಯದ ಆದೇಶವನ್ನವಲಂಬಿಸಿದೆ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಭಾರತೀಯ ನ್ಯಾಯಾಲಯದ ತೀರ್ಪನ್ನವಲಂಬಿಸಿ ಸ್ಥಳೀಯ ಅಧಿಕಾರಿಗಳನ್ನು ಕಾಣಬಹುದು. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಸ್ಥಳೀಯ ನ್ಯಾಯಾಲಯದಲ್ಲಿ ಕೈಗೆತ್ತಿಕೊಳ್ಳಬಹುದು. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | 800 – 2,000 ಕುವೈತಿ ದಿನಾರ್‌ಗಳವರೆಗೂ (2,400 – 6,000 ಅಮೆರಿಕನ್ ಡಾಲರ್) ಆಗಬಹುದು ಅಥವ ಇನ್ನೂ ಹೆಚ್ಚಾಗಲೂಬಹುದು. ಕುವೈತಿನ ಕಾನೂನು ಶುಲ್ಕಗಳು ಅತ್ಯಂತ ದುಬಾರಿ. ಅರ್ಹವಾದ ಕೆಲವು ದಾವೆಗಳನ್ನು ಕಡಿಮೆ ಶುಲ್ಕದಲ್ಲಿ ಕೈಗೆತ್ತಿಕೊಳ್ಳುವಂತೆ ಭಾರತೀಯ ರಾಯಭಾರ ಕಚೇರಿಯು ನಿಗದಿಪಡಿಸಿರುವ ವಕೀಲರನ್ನು ಕೇಳಿಕೊಳ್ಳಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ತಿಳಿಸಿ, ಸಂಬಂಧಿತ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಕುವೈತಿನಲ್ಲಿ ಇಂತಹ ಯಾವುದೇ ಅವಕಾಶಗಳಿಲ್ಲವೆಂದು ತಿಳಿದುಬರುತ್ತದೆ. |

| | | |
|---|---|---|
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಹೌದು, ಪರಿಗಣಿಸಲಾಗುತ್ತದೆ. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಜಾರಿ ಮಾಡಲಾಗಿರುವ ಸಮನ್ಸ್/ ನೋಟೀಸು ಇತ್ಯಾದಿಗಳನ್ನು ಸ್ವೀಕರಿಸಲು ರಾಯಭಾರ ಕಚೇರಿಗೆ ಭೇಟಿ ನೀಡುವಂತೆ ಆಪಾದಿತರಿಗೆ ಸೂಚಿಸಲಾಗುವುದು. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಸ್ಥಳೀಯ ನ್ಯಾಯಾಲಯಗಳಲ್ಲಿ ಬಾಕಿ ಇರುವ ಖಟ್ಲೆಗಳಿಗಾಗಿ ವೀಸಾವನ್ನು ಮುಂದುವರಿಸಲಾಗುವುದು. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಇದು ಸ್ಥಳೀಯ ನ್ಯಾಯಾಲಯಗಳ ಆದೇಶವನ್ನವಲಂಬಿಸಿರುತ್ತದೆ. |

4. ಜರ್ಮನಿ :

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಭಾರತೀಯ ರಾಯಭಾರ/ ದೂತಾವಾಸ ಕಚೇರಿಗಳಲ್ಲಿ ಅನಿವಾಸಿ ಭಾರತೀಯರು ನೋಂದಾಯಿಸಿಕೊಳ್ಳುವುದು ಐಚ್ಛಿಕವಾಗಿದೆ. ಹೀಗಾಗಿ ಎಲ್ಲಾ ಅನಿವಾಸಿ ಭಾರತೀಯರು ನೋಂದಾಯಿಸಿಕೊಳ್ಳದಿರುವುದರಿಂದಾಗಿ ಆ ಕಚೇರಿಗಳು ಅವರ ಸಂಪೂರ್ಣ ಪಟ್ಟಿಯನ್ನು ಹೊಂದಿರುವುದಿಲ್ಲ.<br>ನೋಂದಾಯಿಸಿಕೊಳ್ಳುವ ಅನಿವಾಸಿ ಭಾರತೀಯರು ಕೂಡ ಸಂಬಳ ಮುಂತಾದ ಅವರ ಸಂಪೂರ್ಣ ವೈಯಕ್ತಿಕ ವಿವರಗಳನ್ನು ನೀಡಿರುವುದಿಲ್ಲ. ಜರ್ಮನಿಯಲ್ಲಿ ಅತ್ಯಂತ ಕಟ್ಟುನಿಟ್ಟಿನ ಮಾಹಿತಿ ರಕ್ಷಣಾ ಕಾಯಿದೆಗಳಿರುವುದರಿಂದಾಗಿ, ಜರ್ಮನಿಯ ಅಧಿಕಾರಿಗಳು ಅಂತಹ ವಿವರಗಳನ್ನು ರಾಯಭಾರ ಕಚೇರಿಗೂ ಕೂಡ ತಿಳಿಸಲು ನಿರಾಕರಿಸುತ್ತಾರೆ. ಹೀಗಾಗಿ, ವ್ಯಕ್ತಿಗಳ ಹಿನ್ನೆಲೆ ಮಾಹಿತಿ ಕಲೆಹಾಕುವುದು/ ಪರಿಶೀಲಿಸುವುದು ಕಷ್ಟ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ಜರ್ಮನಿ ಅಥವ ಭಾರತದಲ್ಲಿ ನೋಂದಾವಣೆಯಾಗದ ಹೊರತು, ಜರ್ಮನಿಯ ಅಧಿಕಾರಿಗಳು ಯಾವುದೇ ವಿವಾಹವನ್ನು ಕಾನೂನುಬದ್ಧ ಎಂದು ಪರಿಗಣಿಸುವುದಿಲ್ಲ. ತಮ್ಮ ವಿವಾಹವನ್ನು ನೋಂದಾಯಿಸದಿದ್ದಲ್ಲಿ ಅನಿವಾಸಿ ಭಾರತೀಯರು ತಮ್ಮ ಸಂಗಾತಿಯನ್ನು ಜರ್ಮನಿಗೆ ಕರೆತರಲಾಗದು. ಒಂದು ಪಕ್ಷ ಭಾರತದಲ್ಲಿ ಸಾಮಾನ್ಯ ಸಾಮಾಜಿಕ ವಿವಾಹ ಮಾಡಿಕೊಂಡಿದ್ದು, ನಂತರ ಜರ್ಮನಿಗೆ ಹೋಗಿ ಪತ್ನಿಯು ಭಾರತದಲ್ಲಿಯೇ ಉಳಿದಿದ್ದರೆ, ಅದನ್ನು ಅವರ/ ಅವರ ಕುಟುಂಬಗಳ ನಡುವಣ ವೈಯಕ್ತಿಕ ವಿಷಯವೆಂದು ತಿಳಿಯುತ್ತಾರೆ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಪೀಡಿತ ವ್ಯಕ್ತಿ/ ಕುಟುಂಬವು ಇಂತಹ ಒತ್ತಾಯಗಳ ಬಗ್ಗೆ ದೂರು ನೀಡದ ಹೊರತು ಇದು ಭಾರತೀಯ ಕಚೇರಿಗಳ ಗಮನಕ್ಕೆ ಬರುವುದಿಲ್ಲ. ಸೂಕ್ತ ಕಾನೂನಿನ ಅಂಶಗಳ ಪ್ರಕಾರ ಈ ಸಮಸ್ಯೆಯನ್ನು ಭಾರತದಲ್ಲಿರುವ ಸಂಬಂಧಿತ ವ್ಯಕ್ತಿಯು ನಿಭಾಯಿಸಬಹುದು. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ದ್ವಿಪತ್ನಿತ್ವವು ರುಜುವಾತಾದರೆ, ಜರ್ಮನಿಯ ಕಾನೂನು ವ್ಯವಸ್ಥೆಯು ಕಠೋರ ನಿಲುವು ತಾಳುತ್ತದೆ. ಅಲ್ಲದೆ, ವಿವಾಹಕ್ಕೆ ಮೊದಲೇ ಭಾರತದಲ್ಲಿರುವ ಭಾವೀ ಸಂಗಾತಿ/ ಕುಟುಂಬವು ಅನಿವಾಸಿ ಭಾರತೀಯನು ನೆಲೆಸಿರುವ/ ನೋಂದಾಯಿಸಿಕೊಂಡಿರುವ ದೇಶದ ಸ್ಥಳೀಯ ಅಧಿಕಾರಿಗಳು ನೀಡಿರುವ ನೋಂದಾವಣೆ ಮತ್ತು ವಿವಾಹ ಅರ್ಹತಾ ಪ್ರಮಾಣಪತ್ರವನ್ನು ತೋರಿಸುವಂತೆ/ ಅದರ ಪ್ರತಿಯನ್ನು ನೀಡುವಂತೆ ಕೇಳಬಹುದು. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಇದೊಂದು ಕಾನೂನಿನ ವಿಷಯ. ಭಾರತದಲ್ಲಿರುವ ನ್ಯಾಯಾಲಯದ ಮೂಲಕ ಜರ್ಮನಿಯ ಸರ್ಕಾರಕ್ಕೆ ಅಧಿಕೃತ ಪ್ರಾರ್ಥನೆಯನ್ನು ಸಲ್ಲಿಸಬೇಕು. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ಕಣ್ಮರೆಯಾಗುವುದು/ ಪತ್ನಿಯರ ಪರಿತ್ಯಾಗದ ವಿಷಯದಲ್ಲಿ ಜರ್ಮನಿಯಲ್ಲಿ ಕಟ್ಟುನಿಟ್ಟಿನ ಕಾನೂನು ವ್ಯವಸ್ಥೆ ಇದೆ. ಭಾರತದಲ್ಲಿರುವ ನ್ಯಾಯಾಲಯದ ಮೂಲಕ ಜರ್ಮನಿಯ ಸರ್ಕಾರಕ್ಕೆ ಅಧಿಕೃತ ಕೋರಿಕೆಯನ್ನು ಸಲ್ಲಿಸಬೇಕು. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಸಲಹೆ ನೀಡುವ ಅನೇಕ ಸರ್ಕಾರೇತರ ಸಂಸ್ಥೆಗಳು ಜರ್ಮನಿಯಲ್ಲಿವೆ ಮತ್ತು ವಿಶೇಷ ಪ್ರಕರಣಗಳಲ್ಲಿ ಆಶ್ರಯ/ ದವಸ, ಧಾನ್ಯಗಳ ಸಹಾಯವನ್ನು ಕೂಡ ಒದಗಿಸುತ್ತವೆ. ಕೆಲವು ಸ್ಥಳೀಯ ಜರ್ಮನ್ ಪ್ರಾಧಿಕಾರಗಳು ಕೂಡ ಇಂತಹ ಕಚೇರಿಗಳನ್ನು ಹೊಂದಿದ್ದು, ಯಾರು ಬೇಕಾದರೂ ಅವುಗಳನ್ನು ಸಂಪರ್ಕಿಸಬಹುದು. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ | ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಮತ್ತು ಆಡಳಿತಾತ್ಮಕ ಆದೇಶಗಳಿಗೆ |

| | | |
|---|---|---|
| | ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಅನುಸಾರವಾಗಿ ಸ್ಥಳೀಯ ಜರ್ಮನ್ ಪ್ರಾಧಿಕಾರಗಳು ಜರ್ಮನಿಯಲ್ಲಿ ವಾಸಿಸುವ ಹಕ್ಕನ್ನು ನೀಡುತ್ತವೆ. ಪ್ರತಿಯೊಂದು ವೈಯಕ್ತಿಕ ಅರ್ಜಿಯನ್ನೂ ಬೇರೆಯಾಗಿ ನೋಡಲಾಗುತ್ತದೆ ಮತ್ತು ಅವುಗಳ ಅರ್ಹತೆಯ ಮೇಲೆ ಸ್ಥಳೀಯ ಪ್ರಾಧಿಕಾರಗಳು ನಿರ್ಧಾರ ಕೈಗೊಳ್ಳುತ್ತವೆ. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಇದು ಒಂದು ಕಾನೂನಿನ ವಿಷಯವಾಗಿದ್ದು, ಇದನ್ನು ಕಾನೂನು ಕ್ರಮವಿಧಿಗಳ ಮೂಲಕವೇ ಪರಿಹರಿಸಿಕೊಳ್ಳಬೇಕು. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಕ್ರಮ ಸಂಖ್ಯೆ 8ನ್ನು ನೋಡಿ. ದೈಹಿಕ ಹಿಂಸೆಯ ವಿಚಾರದಲ್ಲಿ, ದೂರಿನ ಆಧಾರದ ಮೇಲೆ ಪೊಲೀಸರು ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬಹುದು. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಇದನ್ನು ಕಾನೂನು ಕ್ರಮವಿಧಿಗಳ ಮೂಲಕವೇ ಪರಿಹರಿಸಿಕೊಳ್ಳಬೇಕು. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಇದನ್ನು ಕಾನೂನು ಕ್ರಮವಿಧಿಗಳ ಮೂಲಕವೇ ಪರಿಹರಿಸಿಕೊಳ್ಳಬೇಕು. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ನ್ಯಾಯಾಲಯದ ಸಮನ್ಸ್‌ಗೆ ಭಾರತದಲ್ಲಿರುವ ಸಂಗಾತಿಯು ಪ್ರತಿಕ್ರಿಯಿಸದಿದ್ದಾಗ ಪ್ರತಿವಾದಿಯ ಅನುಪಸ್ಥಿತಿಯಲ್ಲಿ ಅವರ ವಿರುದ್ಧ ಡಿಕ್ರಿ ಅಥವ ವಿಚ್ಛೇದನದ ತೀರ್ಪು ನೀಡಲಾಗುತ್ತದೆ. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ಕಾನೂನು ಕ್ರಮಗಳ ವೆಚ್ಚವನ್ನು ಅಂದಾಜಿಸುವುದು ಕಷ್ಟದ ಕೆಲಸ. ವಕೀಲರು ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗುವ ಸಂಖ್ಯೆ ಮತ್ತು ವ್ಯಾಜ್ಯವನ್ನು ಪರಿಹರಿಸಲು ತೆಗೆದುಕೊಳ್ಳುವ ಸಮಯವನ್ನಾಧರಿಸಿ, ವಕೀಲರ ಶುಲ್ಕವು ಹೆಚ್ಚು ಕಡಿಮೆ ಆಗುವುದನ್ನವಲಂಬಿಸಿ ಕಾನೂನು ಕ್ರಮಗಳ ವೆಚ್ಚವೂ ಏರುಪೇರಾಗುತ್ತದೆ. ಕಾನೂನು ಸಹಾಯ ಮತ್ತು ದಾವೆ ಹೂಡುವುದಕ್ಕೆ ಸುಮಾರು 3,000 ದಿಂದ 5,000 ಯೂರೋಗಳಾಗಬಹುದೆಂದು ಪರಿಗಣಿಸಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳಿಗೆ ಅದನ್ನು ರವಾನಿಸಲಾಗುವುದು. ತಪ್ಪಿಸಿಕೊಂಡ ವ್ಯಕ್ತಿಗಳನ್ನು ಹುಡುಕಲು ಪೊಲೀಸರನ್ನು ಸಂಪರ್ಕಿಸಬಹುದು. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಇಂತಹ ಯಾವುದೇ ಸೌಲಭ್ಯಗಳಿಲ್ಲವೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಇಂತಹ ವ್ಯಾಜ್ಯಗಳನ್ನು ಕುಟುಂಬದ ಖಾಸಗಿ ವಕೀಲರುಗಳಿಂದ ಅಥವ ಸರ್ಕಾರೇತರ ಸಂಸ್ಥೆಗಳಿಂದ ಪರಿಹರಿಸಿಕೊಳ್ಳಲಾಗುತ್ತದೆ. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಇದು ಕಾನೂನು ವ್ಯವಹಾರಗಳ ದ್ವಿಪಕ್ಷೀಯ ಒಪ್ಪಂದದ ವಿಷಯ. ಜರ್ಮನಿಯಲ್ಲಿ ಲೀಗಲ್ ರಿಮೆಂಬರೆನ್ಸರ್ಸ್‌ಗಳನ್ನು ಒಪ್ಪಿಕೊಳ್ಳಲಾಗುತ್ತದೆ. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಇದು ಕಾನೂನು ವ್ಯವಹಾರಗಳ ದ್ವಿಪಕ್ಷೀಯ ಒಪ್ಪಂದದ ವಿಷಯ. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಕ್ರಮ ಸಂಖ್ಯೆ 9ನ್ನು ನೋಡಿ. ಆಯಾ ವ್ಯಾಜ್ಯದ ಅರ್ಹತೆಯನ್ನಾಧರಿಸಿ ಸ್ಥಳೀಯ ಸರ್ಕಾರವು ಇಂತಹ ವ್ಯಾಜ್ಯಗಳನ್ನು ನಿಭಾಯಿಸುತ್ತದೆ. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಇದನ್ನು ಕಾನೂನು ಕ್ರಮವಿಧಿಗಳ ಮೂಲಕವೇ ಪರಿಹರಿಸಿಕೊಳ್ಳಬೇಕು. ಇಂತಹ ವಿಷಯಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸಶಕ್ತ ಪೊಲೀಸ್ ಬಲ ಹಾಗೂ ಕಾನೂನು ಸೌಲಭ್ಯಗಳಿವೆ. |

**5. <u>ಯುನೈಟೆಡ್ ಕಿಂಗ್‌ಡಂ</u> :**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಲಭ್ಯವಿಲ್ಲ. ಕುಟುಂಬಗಳು ತಾವೇ ವಿಚಾರಣೆ ಮಾಡಿಸಿಕೊಳ್ಳಬೇಕು–ಖಾಸಗಿ ಪತ್ತೇದಾರರ ಸೇವೆಯನ್ನು ಎರವಲು ಪಡೆಯಬಹುದು. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ಭಾರತದಲ್ಲಿ ವಿವಾಹವು ಭಾರತೀಯ ಕಾನೂನಿನ ಪ್ರಕಾರ ನಡೆದಿದ್ದರೆ, ಆಗ ಆ ವಿವಾಹವನ್ನು ಇಲ್ಲಿ ಸಿಂಧುವಾದದ್ದು ಎಂದು ಪರಿಗಣಿಸುತ್ತಾರೆ. ಆದರೆ ವಿವಾಹವು ಇಂಗ್ಲೆಂಡಿನಲ್ಲಿ ಇಲ್ಲಿನ ನಾಗರಿಕ ರೀತಿಯಲ್ಲಿ ನಡೆಯದೆ, ಭಾರತೀಯ ಧಾರ್ಮಿಕ ರೀತಿಯಲ್ಲಿ ನಡೆದಿದ್ದರೆ ಆಗ ಅಂತಹ ವಿವಾಹವು ಖಂಡಿತವಾಗಿಯೂ ಅಸಿಂಧುವಾಗುತ್ತದೆ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಭಾರತದ ಕಾನೂನಿನನ್ವಯ ಇದನ್ನು ನಿಭಾಯಿಸಲಾಗುತ್ತದೆ. ಆದರೆ, ದೈಹಿಕ ಬಲಪ್ರಯೋಗವಾಗಿದ್ದರೆ ಅಥವ ಬ್ಲ್ಯಾಕ್‌ಮೇಲ್ ಅಥವ ಕೌಟುಂಬಿಕ |

| | | |
|---|---|---|
| | | ದೌರ್ಜನ್ಯವೆಸಗಿದ್ದರೆ ಆಗ ಇದು ಕ್ರಿಮಿನಲ್ ಅಪರಾಧವಾಗಬಹುದು. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಆಗ ಈ ವಿವಾಹವು ಅಸಿಂಧುವಾಗುತ್ತದೆ ಮತ್ತು ಇದು ದ್ವಿಪತ್ನಿತ್ವದ ಕ್ರಿಮಿನಲ್ ಅಪರಾಧವಾಗಬಹುದು. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಪತಿ ಮತ್ತು ಆತನ ಕುಟುಂಬವು ಸಹಕರಿಸದಿದ್ದರೆ ಖಾಸಗಿ ಪತ್ತೇದಾರರ ಸೇವೆಯನ್ನು ಎರವಲು ಪಡೆಯಬಹುದು. ಇಂಗ್ಲೆಂಡಿನಲ್ಲಿ ಮಾಹಿತಿ ರಕ್ಷಣಾ ಕಾಯಿದೆಯು ಜಾರಿಯಲ್ಲಿರುವುದರಿಂದ ಭಾರತೀಯ ಕಚೇರಿಗಳು ಯಾವ ಸಹಾಯವನ್ನೂ ಮಾಡಲಾರವು. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ಇಲ್ಲಿ ನೆಲೆಸಿರುವ ಅವಧಿ ಮತ್ತು ಅದು ಯಾವ ತರಹದ ವೀಸಾ ಎಂಬುದನ್ನವಲಂಬಿಸಿದೆ. ಕೌಟುಂಬಿಕ ದೌರ್ಜನ್ಯ/ ಹಿಂಸೆ ಕಾಯಿದೆಯ ಅಡಿಯಲ್ಲಿ ಕಾನೂನಿನ ಸಹಾಯವನ್ನು ಪಡೆಯಬಹುದು. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಇಲ್ಲಿ ನೆಲೆಸಿರುವ ಅವಧಿಯನ್ನು ಅವಲಂಬಿಸಿದೆ. ಕೌಟುಂಬಿಕ ದೌರ್ಜನ್ಯ/ ಹಿಂಸೆಯಾಗಿದ್ದರೆ ನಿರಾಶ್ರಿತರ ವಸತಿ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಆದರೆ ನಿರಾಶ್ರಿತರ ವಸತಿಯು ಬಾಡಿಗೆಯ ಆದಾಯವನ್ನು ಅವಲಂಬಿಸಿರುವುದರಿಂದ ಮಹಿಳೆಯು ಹಣ ಹೊಂದಿರದಿದ್ದಲ್ಲಿ ಅಥವ ಸರ್ಕಾರಿ ಧನಸಹಾಯಕ್ಕೆ ಅರ್ಹಳಾಗಿಲ್ಲದಿದ್ದಲ್ಲಿ ಇದು ಸಮಸ್ಯೆಯಾಗಬಹುದು. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಪ್ರತಿಯೊಂದು ದೂರು ಮತ್ತು ಅದರ ಪರಿಸ್ಥಿತಿಯನ್ನು ಪ್ರತ್ಯೇಕವಾಗಿ ನಿರ್ಧರಿಸಲಾಗುವುದು. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಇದು ದಾಂಪತ್ಯದ ಅವಧಿಯನ್ನು ಮತ್ತು ಸಂಗಾತಿಯು ಹೊಂದಿರುವ ಆಸ್ತಿಯನ್ನು ಅವಲಂಬಿಸಿದೆ. ಇದನ್ನು ನಿರ್ಧರಿಸಲು ನ್ಯಾಯಾಲಯವು ಹಲವಾರು ಮಾನದಂಡಗಳನ್ನು ಉಪಯೋಗಿಸುತ್ತದೆ. ಇದರ ತೀರ್ಮಾನವು ದೀರ್ಘ ಮತ್ತು ಸಂಕೀರ್ಣವಾಗಬಹುದು. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಪೊಲೀಸರಿಗೆ ದೂರು ನೀಡಬಹುದು. ಸಂಯೋಗ ಮತ್ತು ಉದ್ಯೋಗ ಆದೇಶಗಳಂತಹ ಪರಿಹಾರಗಳು ಲಭ್ಯವಿವೆ. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಅಂತಾರಾಷ್ಟ್ರೀಯ ಮಕ್ಕಳ ಅಪಹರಣದ ಸಿವಿಲ್ ವ್ಯಾಜ್ಯಗಳ ಬಗ್ಗೆ ಹೇಗ್ ಸಮಾವೇಶದ ಒಪ್ಪಂದಕ್ಕೆ ಭಾರತವು ಒಪ್ಪಿಲ್ಲದಿರುವುದರಿಂದ ಈ ವಿಷಯವು ಕಗ್ಗಂಟಾಗಿದೆ. ಆದರೆ, ಅನಿವಾಸಿ ಪೋಷಕರು ಇಂಗ್ಲೆಂಡಿನ ನ್ಯಾಯಾಲಯದ ತೀರ್ಪನ್ನು ಜಾರಿ ಮಾಡಲು ಪ್ರಯತ್ನಿಸಿದರೆ ಅಂತಹ ಮಕ್ಕಳ ಜವಾಬ್ದಾರಿಯ ವ್ಯಾಜ್ಯಗಳ ಬಗ್ಗೆ ವ್ಯವಹರಿಸಲು ಭಾರತದ ನ್ಯಾಯಾಲಯಗಳಿಗೆ ನ್ಯಾಯಬದ್ಧ ಅಧಿಕಾರವಿದೆ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಭಾರತದಲ್ಲಿ ವಿಚಾರಣೆಯನ್ನು ಪ್ರಾರಂಭಿಸಿ ಅದರ ತೀರ್ಪನ್ನು ಇಲ್ಲಿ ಜಾರಿಗೊಳಿಸಬಹುದು. ಆದರೆ, ಅದಕ್ಕೆ ವಿಶೇಷ ಪರಿಣತರ ಸಲಹೆಯ ಅಗತ್ಯವಿರುವುದರಿಂದ ಮತ್ತು ಅದು ದಾವೆಯಿಂದ ದಾವೆಗೆ ವ್ಯತ್ಯಾಸವಾಗುವುದರಿಂದ ಇದೂ ಕೂಡ ಕಗ್ಗಂಟಾಗಿದೆ. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಸಂದರ್ಭಾನುಸಾರ ಗಮನಿಸಿಕೊಳ್ಳಬೇಕಾಗುತ್ತದೆ ಮತ್ತು ವಿಚಾರಣೆಯ ಬಗ್ಗೆ ಎರಡು ಪಕ್ಷದವರಿಗೂ ಅರಿವಿದ್ದರೆ ಆಗ ವಿಚ್ಛೇದನವು ಸಿಂಧುವಾಗುತ್ತದೆ. ಆದರೆ ಇಲ್ಲೂ ಕೂಡ, ದಾಖಲೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕವಾಗಿ ವ್ಯವಹರಿಸಬೇಕಾಗುತ್ತದೆ. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ಇದು ವ್ಯಾಜ್ಯಗಳ ಸಂಕೀರ್ಣತೆಯನ್ನವಲಂಬಿಸಿದೆ. ನ್ಯಾಯಾಲಯದ ವಿಚಾರಣೆಗಳು ಆರಂಭವಾದರೆ, ನ್ಯಾಯಾಲಯದ ಶುಲ್ಕ, ಬ್ಯಾರಿಸ್ಟರ್‌ಗಳು, ಪರಿಣತರು ಬೇಕಾದರೆ ಅವರ ಪ್ರತ್ಯೇಕ ಶುಲ್ಕ ಇತ್ಯಾದಿ ಬೇಕಾಗಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಜಾರಿ ಮಾಡುವ ಅಧಿಕಾರವುಳ್ಳ ಗೃಹ/ ಕಾನೂನು ಸಚಿವಾಲಯಗಳಿಂದ ಯಾವಾಗೆಲ್ಲಾ ಎಚ್ಚರಿಕೆ ನೋಟೀಸುಗಳನ್ನು ಸ್ವೀಕರಿಸಲಾಗುತ್ತದೋ ಆಗ ಭಾರತದ ಕಚೇರಿಗಳು ಇಲ್ಲಿನ ಯು.ಕೆ.ಯ ಗೃಹ ಕಚೇರಿಯನ್ನು ಸಂಪರ್ಕಿಸುತ್ತವೆ. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಆರಂಭಿಕ ವೆಚ್ಚಗಳಿಗೆ ಸಿಗುತ್ತದೆ. ಆದರೆ, ದಾವೆಯು ಸಂಕೀರ್ಣವಾಗಿದ್ದರೆ, ಅದರಲ್ಲೂ ವಿಶೇಷವಾಗಿ ನ್ಯಾಯಾಲಯದ ವಿಚಾರಣೆ ಬೇಕಾಗುವಂತಹ ಮಕ್ಕಳ ಮತ್ತು ಆರ್ಥಿಕ ಸಮಸ್ಯೆಗಳಾಗಿದ್ದರೆ, ವೆಚ್ಚಗಳು ಹೆಚ್ಚಾಗಬಹುದು. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | 1933ರ ವಿದೇಶೀ ನ್ಯಾಯಾಲಯಗಳ ತೀರ್ಪುಗಳ ಕಾಯಿದೆ (ಪರಸ್ಪರ ಜಾರಿ ಕ್ರಮ–Reciprocal Enforcement)ಯ ಅಡಿಯಲ್ಲಿ ಭಾರತೀಯ ನ್ಯಾಯಾಲಯಗಳ ತೀರ್ಪುಗಳನ್ನು ನೋಂದಾಯಿಸಬಹುದು ಮತ್ತು ಜಾರಿ ಮಾಡಬಹುದು. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಜಾರಿ ಮಾಡುವ ಅಧಿಕಾರವುಳ್ಳ ಗೃಹ/ ಕಾನೂನು ಸಚಿವಾಲಯಗಳಿಂದ ಯಾವಾಗೆಲ್ಲಾ ಎಚ್ಚರಿಕೆ ನೋಟೀಸುಗಳನ್ನು ಸ್ವೀಕರಿಸಲಾಗುತ್ತದೋ ಆಗ ಭಾರತದ ಕಚೇರಿಗಳು ಇಲ್ಲಿನ ಯು.ಕೆ.ಯ ಗೃಹ ಕಚೇರಿ/ ಅರಸೊತ್ತಿಗೆಯ ಕಾನೂನು |

| | | |
|---|---|---|
| | | ನ್ಯಾಯಾಲಯವನ್ನು ಸಂಪರ್ಕಿಸುತ್ತದೆ. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಆಯಾ ದಾವೆಗಳು, ಎಷ್ಟು ವರ್ಷಗಳಿಂದ ಆಕೆ ಯು.ಕೆ.ಯಲ್ಲಿ ನೆಲೆಸಿದ್ದಾಳೆ ಮತ್ತು ಆಕೆಯ ಪತಿಯು ಬ್ರಿಟಿಷ್ ಪ್ರಜೆಯೋ ಹೇಗೆಂಬುದರ ಮೇಲೆ ಅವಲಂಬಿಸಿದೆ. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಒಂದು ಪಕ್ಷ ಪತಿಯು ಕೊಡಲು ಒಪ್ಪದಿದ್ದರೆ, ಆಗ ಆರ್ಥಿಕ ವಿಚಾರಣೆಯನ್ನು ಆದೇಶಿಸಬಹುದು. |

**6. <u>ಅಮೆರಿಕದ ಸಂಯುಕ್ತ ಸಂಸ್ಥಾನಗಳು</u> :**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಅಂತರ್ಜಾಲದಲ್ಲಿ ಮುಕ್ತವಾಗಿ ಲಭ್ಯವಿರುವ ವ್ಯಕ್ತಿಗಳ ಮಾಹಿತಿಯನ್ನು ಪಡೆಯಬಹುದು. ಆದರೆ, ಅಮೆರಿಕದಲ್ಲಿರುವ ಖಾಸಗಿತನದ ಕಾನೂನುಗಳಿಂದಾಗಿ ಆ ವಿವರಗಳನ್ನು ಪರಿಶೀಲಿಸುವ/ ತಾಳೆ ನೋಡುವ ಯಾವುದೇ ವ್ಯವಸ್ಥೆಯಿಲ್ಲ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಸಾಂಪ್ರದಾಯಿಕ ವಿವಾಹ) | ಅಮೆರಿಕದಲ್ಲಿ ವಿವಾಹಗಳು ಯಾವಾಗಲೂ ನೋಂದಾಯಿಸಲ್ಪಡುತ್ತವೆ. ಆದ್ದರಿಂದ ಇಲ್ಲಿನ ಭಾರತೀಯ ದೂತಾವಾಸ ಕಚೇರಿಗೆ ಈವರೆಗೂ ಅಂತಹ ಯಾವುದೇ ಸಾಮಾಜಿಕ/ ಸಾಂಪ್ರದಾಯಿಕ ವಿವಾಹದ ಬಗ್ಗೆ ತಿಳಿದಿಲ್ಲ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ವರದಕ್ಷಿಣೆಗಾಗಿ ಒತ್ತಾಯಿಸುವುದನ್ನು ಅಮೆರಿಕದಲ್ಲಿ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಮಾಹಿತಿಯನ್ನು ಮುಚ್ಚಿಡುವುದು ಒಂದು ಗಂಭೀರ ಅಪರಾಧ. ಯಾರು ಬೇಕಾದರೂ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಅಮೆರಿಕದಲ್ಲಿರುವ ಖಾಸಗಿತನದ ಕಾನೂನುಗಳಿಂದಾಗಿ ಅವರಿಗೆ ಆ ವಿವರಗಳನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ; ಆದರೆ, ನ್ಯಾಯಾಲಯದ ಮೂಲಕ ವಿವರಗಳನ್ನು ಪಡೆದುಕೊಳ್ಳಲು ಕಾನೂನಾತ್ಮಕ ಪ್ರಯತ್ನಗಳನ್ನು ಕೈಗೊಳ್ಳಬಹುದು. ಆತನ/ ಆಕೆಯ ಉದ್ಯೋಗದಾತರಿಂದ ಅಥವ ವಿದೇಶೀ ಸರ್ಕಾರದ ವಲಸೆ ಇಲಾಖೆಯಿಂದ ಕೂಡ ಮಾಹಿತಿಯನ್ನು ದೃಢಪಡಿಸಿಕೊಳ್ಳಬಹುದು. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ತಪ್ಪಿಸಿಕೊಂಡಿರುವ/ ಪರಿತ್ಯಜಿಸಲ್ಪಟ್ಟಿರುವ ಸಂಗಾತಿಯ ಬಗ್ಗೆ ದೂರು ಸ್ವೀಕರಿಸಿದ ನಂತರ ಭಾರತೀಯ ಕಚೇರಿಗಳು ನಿಗದಿ ಮಾಡಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಭಾರತೀಯ ಸಮುದಾಯ ಸಂಘಗಳ ಬೆಂಬಲದಿಂದ ಅವರಿಗೆ ಸಹಾಯ ಒದಗಿಸಲು ಪ್ರಯತ್ನಿಸಲಾಗುವುದು. 'ಆಶಾ' (ASHA) ಎಂಬ ಸರ್ಕಾರೇತರ ಸಂಸ್ಥೆಯನ್ನು ಕಾನೂನು ಮತ್ತು ಆರ್ಥಿಕ ಸಹಾಯಗಳಿಗಾಗಿ ಸಂಪರ್ಕಿಸಬಹುದು. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಸಂಖ್ಯೆ 6ರಂತೆ. ಇದರ ಜೊತೆಗೆ ಜನಾಂಗ, ವಲಸೆ ವೀಸಾದ ರೀತಿ ಮತ್ತು ಪೌರತ್ವಗಳನ್ನು ನೋಡದೆ, ಮಹಿಳೆಯರಿಗೆ ಆಶ್ರಯ ನೀಡುವ ಇನ್ನೂ ಕೆಲವು ಸಂಸ್ಥೆಗಳು ಅಮೆರಿಕೆಯಲ್ಲಿವೆ. ಕ್ಯಾಲಿಫೋರ್ನಿಯಾದಲ್ಲಿರುವ ಅಂತಹ ಸಂಸ್ಥೆಗಳ ಪಟ್ಟಿಯು ಜಾಲತಾಣ www.cpedv.org ದಲ್ಲಿ ಸಿಗುತ್ತದೆ. ಅಮೆರಿಕೆಯಲ್ಲಿರುವ ಅಂತಹ ಸಂಸ್ಥೆಗಳ ಪಟ್ಟಿಯು ಜಾಲತಾಣ http://www.thehotline.org ದಲ್ಲಿ ಸಿಗುತ್ತದೆ. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಸಂಗಾತಿಯು ಅಮೆರಿಕದ ನಾಗರಿಕನಾಗಿದ್ದರೆ ಅಥವ ಅಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕು ಹೊಂದಿದ್ದರೆ, ಅಂತಹವರ ಪತ್ನಿ ಮತ್ತು ಮಕ್ಕಳಿಗೆ ಅಮೆರಿಕದಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕು ಸಿಗುತ್ತದೆ. ಕೌಟುಂಬಿಕ ಹಿಂಸೆಯ ಸಂತ್ರಸ್ತರಿಗೆ ಅಮೆರಿಕದ ಸರ್ಕಾರವು ಹೆಚ್ಚಿನ ಬೆಂಬಲ ನೀಡುತ್ತದೆ. ಇದಲ್ಲದೆ, ('ಮೈತ್ರಿ' ಎಂಬ ಸರ್ಕಾರೇತರ ಸಂಸ್ಥೆಯ ಪ್ರಕಾರ) ಕೌಟುಂಬಿಕ ಹಿಂಸೆಗೆ ಒಳಗಾಗುವವರು ಅರ್ಹರಾಗುವ ಕೆಲವು ವರ್ಗಗಳ ವೀಸಾಗಳಿವೆ :<br>▪ ಶಾಶ್ವತವಾಗಿ ನೆಲೆಸುವ ಹಕ್ಕಿಗಿರುವ ಷರತ್ತುಗಳನ್ನು ತೆಗೆದುಹಾಕುವುದು<br>▪ ಅಮೆರಿಕದ ನಾಗರಿಕರ ಅಥವ ಅಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕು ಹೊಂದಿರುವವರ ಜರ್ಝರಿತ ಸಂಗಾತಿಗಳಿಗೆ ಶಾಶ್ವತವಾಗಿ ನೆಲೆಸುವ ಹಕ್ಕು ನೀಡುವುದು (Violance Against Women Act - VAWA - ಸ್ವಯಂ ದೂರಿನ ಆಧಾರದಲ್ಲಿ)<br>▪ ಹಿಂಸಾಪರಾಧಗಳಿಗೆ ಬಲಿಯಾದವರಿಗೆ 'ಯು' (U) ವೀಸಾ (ಅಮೆರಿಕದಲ್ಲಿ ನಡೆದ ಹಿಂಸೆಗಳಿಗೆ ಮಾತ್ರ ಅನ್ವಯವಾಗುತ್ತದೆ)<br>▪ ಪರಿಮಿತ ಕೇಸುಗಳಿಗೆ ಸಂಬಂಧಿಸಿದಂತೆ (ಟ್ರಾಫಿಕಿಂಗ್) ವೀಸಾ |

| | | |
|---|---|---|
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | 3 ವರ್ಷಕ್ಕಿಂತ ಹೆಚ್ಚಿನ ಕಾಲ ದಾಂಪತ್ಯ ನಡೆಸಿದ್ದು, ಅದೇ ವಿವಾಹದಿಂದ ಮಗುವಾಗಿದ್ದು, ದೈಹಿಕ ನ್ಯೂನತೆ/ ವಿದ್ಯಾರ್ಹತೆ ಕೊರತೆಯಿಂದಾಗಿ ಪತ್ನಿಯು ಜೀವನ ನಿರ್ವಹಿಸಲು ಸಂಪಾದನೆ ಮಾಡಲಾಗದಿದ್ದಲ್ಲಿ ಆಗ ಅಂತಹ ಭಾರತೀಯ ಸಂತ್ರಸ್ತ ಮಹಿಳೆ ಅಮೆರಿಕದಲ್ಲಿರುವ ಪತಿಯ ಆಸ್ತಿಯ ಮೇಲೆ ಹಕ್ಕನ್ನು ಪ್ರತಿಪಾದಿಸಬಹುದು. ಅಲ್ಲದೆ 'ಮೈತ್ರಿ'ಯ ಪ್ರಕಾರ, ಯಾವುದೇ ಕೌಟುಂಬಿಕ ದಾವೆಗೆ (ರಕ್ಷಣಾ ಆದೇಶ, ವಿಚ್ಛೇದನ, ಬೇರ್ಪಡುವಿಕೆ ಇತ್ಯಾದಿ) ಸಂದರ್ಭಾನುಸಾರ ಮತ್ತು ಕೆಲವು ಪ್ರಸಂಗಗಳಲ್ಲಿ ಆಸ್ತಿ ಹಕ್ಕುಗಳ ಆಧಾರದಲ್ಲಿ ಜೀವನಾಂಶ ಕೇಳಲು ಆಯ್ಕೆಗಳಿರುತ್ತವೆ. ತನ್ನ ಪರವಾಗಿ ವಾದ ಮಾಡಲು ಅಟಾರ್ನಿಯ ಸೇವೆಯನ್ನು ಎರವಲು ಪಡೆದಿದ್ದರೆ, ಆಗ ಪತ್ನಿಯು ವಿಚಾರಣೆಗೆ ಹಾಜರಾಗಬೇಕಾಗಿಲ್ಲ. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಪತಿಯು ಅಮೆರಿಕದ ನಾಗರಿಕನಾಗಿದ್ದರೆ ಅಥವ ಅಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕು ಹೊಂದಿದ್ದರೆ, ಅಂತಹವರ ಸಂತ್ರಸ್ತ ಪತ್ನಿಗೆ ಅಮೆರಿಕ ಸರ್ಕಾರವು ಕಾನೂನು/ ಆರ್ಥಿಕ, ನಿರುದ್ಯೋಗ ಸಹಾಯಗಳಂತಹ ಸೌಲಭ್ಯಗಳನ್ನು ಒದಗಿಸುತ್ತದೆ. ಅಲ್ಲದೆ, 'ಆಶಾ' (ASHA) ಎಂಬ ಮಹಿಳೆರಿಗಾಗಿರುವ ಸರ್ಕಾರೇತರ ಸಂಸ್ಥೆಯನ್ನು ಕಾನೂನು ಮತ್ತು ಆರ್ಥಿಕ ಸಹಾಯಗಳಿಗಾಗಿ ಸಂಪರ್ಕಿಸಬಹುದು. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಅಮೆರಿಕದಲ್ಲಿ ಹುಟ್ಟಿರುವ ಮಗುವು ಅಮೆರಿಕದ ನಾಗರಿಕನಾ(ಳಾ)ಗುವುದರಿಂದ, ಒಂದು ಪಕ್ಷ ಒಬ್ಬ ಪೋಷಕರು ಇನ್ನೊಬ್ಬ ಪೋಷಕರಿಗೆ ತಿಳಿಸದೆ ಕಾನೂನುಬಾಹಿರವಾಗಿ ಅವರ ಮಗು/ ಮಕ್ಕಳನ್ನು ಭಾರತಕ್ಕೆ ಕರೆದೊಯ್ದರೆ, ಇಲ್ಲಿನ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯು ಅದನ್ನು ಗಂಭೀರವಾಗಿ ಪರಿಗಣಿಸುತ್ತದೆ. ಅದರ ಪ್ರಕಾರವೇ ತೀರ್ಪನ್ನು ನೀಡಲಾಗುತ್ತದೆ. ದಕ್ಷಿಣ ಏಷ್ಯಾದ ಮಕ್ಕಳ ಅಪಹರಣದ ವ್ಯಾಜ್ಯಗಳಿಗಾಗಿಯೇ ಅಮೆರಿಕದ ಸರ್ಕಾರವು ಇಬ್ಬರು ಉದ್ಯೋಗಿಗಳನ್ನು ನೇಮಿಸಿದೆ. ಅವರಲ್ಲಿ ಒಬ್ಬರು ಪೂರ್ಣಕಾಲಿಕ ಹಾಗೂ ಇನ್ನೊಬ್ಬರು ಅರೆಕಾಲಿಕ ಉದ್ಯೋಗಿಯಾಗಿದ್ದು ಇವರು ಭಾರತೀಯ ಮಕ್ಕಳ ಅಪಹರಣದ ವ್ಯಾಜ್ಯಗಳನ್ನು ನೋಡಿಕೊಳ್ಳುತ್ತಾರೆ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಇದು ಸಂಖ್ಯೆ 12ರಂತೆಯೇ ಇದೆ. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ನ್ಯಾಯಾಂಗದ ಮೂಲಕ ಅಥವ ಸರ್ಕಾರೇತರ ಸಂಸ್ಥೆಗಳ ಸಹಾಯದಿಂದ ಪರಸ್ಪರ ಒಪ್ಪಿಗೆ ಅಥವ ದೇಶದಲ್ಲಿ ಭಾರತೀಯ ಸಂಗಾತಿಯ ಗೈರುಹಾಜರಿಯಲ್ಲಿ ವಿಚ್ಛೇದನವು ಸಾಧ್ಯ. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ಕಾನೂನು ಕ್ರಮದ ವೆಚ್ಚಗಳು ದಾವೆಯಿಂದ ದಾವೆಗೆ ವ್ಯತ್ಯಾಸವಾಗುತ್ತವೆ ಮತ್ತು ಅದು 10 ರಿಂದ 50,000 ಅಮೆರಿಕನ್ ಡಾಲರುಗಳಾಗಬಹುದು. ಅಮೆರಿಕದಲ್ಲಿ ಕಾನೂನು ಶುಲ್ಕಗಳು ಅತ್ಯಂತ ಹೆಚ್ಚಾಗಿದ್ದು, ಬಹುತೇಕ ಗಂಟೆಗಿಷ್ಟು ಎಂಬ ಆಧಾರದಲ್ಲಿರುತ್ತದೆ. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಪರಸ್ಪರ ಕಾನೂನು ಸಹಕಾರ ಒಪ್ಪಂದ (MLAT)ದ ಮೂಲಕ ಎಚ್ಚರಿಕೆ ಸುತ್ತೋಲೆ ಜಾರಿಯನ್ನು ಜರುಗಿಸಲಾಗುತ್ತದೆ. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಸಂಗಾತಿಯು ಅಮೆರಿಕದ ನಾಗರಿಕನಾಗಿದ್ದರೆ/ ಅಲ್ಲಿ ಶಾಶ್ವತವಾಗಿ ನೆಲೆಸಿದ್ದರೆ ಆಗ ವಿದೇಶೀ ಸರ್ಕಾರದಿಂದ ಕಾನೂನು ಸಹಾಯವನ್ನು ಅಪೇಕ್ಷಿಸಬಹುದು. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಎಲ್ಲಾ ರೀತಿಯ ಕಾನೂನು ಸಮಸ್ಯೆಗಳನ್ನೂ ಪರಸ್ಪರ ಕಾನೂನು ಸಹಕಾರ ಒಪ್ಪಂದ (MLAT)ದ ವ್ಯವಸ್ಥೆಯ ಅಡಿಯಲ್ಲಿ ನಿಭಾಯಿಸಲಾಗುವುದು. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಸಮನ್ಸ್/ ಬಂಧನ ವಾರಂಟುಗಳನ್ನು ಇಲ್ಲಿನ ಭಾರತೀಯ ದೂತಾವಾಸದಿಂದ ಸಾಮಾನ್ಯ ಅಂಚೆಯ ಮೂಲಕ ಆಪಾದಿತರಿಗೆ ಕಳುಹಿಸಲಾಗುತ್ತದೆ. ಇವುಗಳನ್ನು ತನ್ನ ಮೂಲಕ ಕಳಿಸುವುದನ್ನು ಅಮೆರಿಕದ ಸರ್ಕಾರವು ಪ್ರೋತ್ಸಾಹಿಸುವುದಿಲ್ಲ. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಹೌದು. ಆದರೆ ಇದನ್ನು ಆಯಾ ಪ್ರಕರಣವನ್ನಾಧರಿಸಿ ಮಾಡಲಾಗುವುದು. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಸಂಗಾತಿಗೆ ಜೀವನಾಂಶ ಕೊಡಲು ಅಮೆರಿಕದ ನ್ಯಾಯಾಲಯಗಳು ಆದೇಶಗಳನ್ನು ನೀಡುತ್ತವೆ ಮತ್ತು ಜೀವನಾಂಶದ ಮೊತ್ತವು ಹಲವಾರು ವಿಷಯಗಳನ್ನಾಧರಿಸಿರುತ್ತದೆ. |

7. **<u>ಆಸ್ಟ್ರೇಲಿಯ</u> :**

| **ಸಂಖ್ಯೆ** | **ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು** | **ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು** |
|---|---|---|

| | ಎದುರಿಸುವ ಸಮಸ್ಯೆಗಳು | |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಕಟ್ಟುನಿಟ್ಟಾದ ಖಾಸಗಿತನ ರಕ್ಷಣೆಯ ಕಾಯಿದೆಗಳಿಂದಾಗಿ ಅಧಿಕಾರಿಗಳು/ ಉದ್ಯೋಗದಾತರು ಭಾರತೀಯ ಮೂಲದ ವ್ಯಕ್ತಿಗಳ/ ಅನಿವಾಸಿ ಭಾರತೀಯರ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳದಿರುವುದರಿಂದ ಇದು ಆಸ್ಟ್ರೇಲಿಯದಲ್ಲಿ ಸಾಧ್ಯವಿಲ್ಲ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ಆಸ್ಟ್ರೇಲಿಯದಲ್ಲಿ ಎಲ್ಲ ವಿವಾಹಗಳೂ ನೋಂದಣಿಯಾಗುತ್ತವೆ. ಎಲ್ಲೋ ಕೆಲವು ಅಪರೂಪದ ಸಾಮಾಜಿಕ/ ಸಾಂಪ್ರದಾಯಿಕ ವಿವಾಹಗಳ ಪ್ರಕರಣಗಳಲ್ಲಿ ನೋಂದಣಿಯಾಗಿರುವುದಿಲ್ಲ. ಆದರೆ ಅಂತಹ ಯಾವ ಅಪರೂಪದ ಪ್ರಕರಣಗಳೂ ಕೂಡ ಇಲ್ಲಿನ ಭಾರತೀಯ ದೂತಾವಾಸ ಕಚೇರಿಯ ಗಮನಕ್ಕೆ ಬಂದಿಲ್ಲ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಭಾರತದಲ್ಲಿರುವ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಾರೆ. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಕಟ್ಟುನಿಟ್ಟಾದ ಖಾಸಗಿತನ ರಕ್ಷಣೆಯ ಕಾಯಿದೆಗಳಿಂದಾಗಿ ಅಧಿಕಾರಿಗಳು/ ಉದ್ಯೋಗದಾತರು ಭಾರತೀಯ ಮೂಲದ ವ್ಯಕ್ತಿಗಳ/ ಅನಿವಾಸಿ ಭಾರತೀಯರ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳದಿರುವುದರಿಂದ ಇದನ್ನು ಪರಿಶೀಲಿಸುವುದು ಆಸ್ಟ್ರೇಲಿಯದಲ್ಲಿ ಸಾಧ್ಯವಿಲ್ಲ. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಕಟ್ಟುನಿಟ್ಟಾದ ಖಾಸಗಿತನ ರಕ್ಷಣೆಯ ಕಾಯಿದೆಗಳಿಂದಾಗಿ ವ್ಯಕ್ತಿಗಳ ವೈಯಕ್ತಿಕ ಮಾಹಿತಿಯನ್ನು ಪತ್ತೆ ಮಾಡುವ ಕೋರಿಕೆಗಳನ್ನು ಇಲ್ಲಿನ ಪೊಲೀಸರು ಪುರಸ್ಕರಿಸುವುದಿಲ್ಲ. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ಇಂತಹ ಪ್ರಕರಣಗಳು ಇಲ್ಲಿ ನಡೆಯುತ್ತಿರುತ್ತವೆ. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ವೈವಾಹಿಕ ವ್ಯಾಜ್ಯಗಳಿಂದಾಗುವ ಕೌಟುಂಬಿಕ ಹಿಂಸೆಗೆ ಗುರಿಯಾಗುವ ಮಹಿಳೆಯರಿಗೆ ಆಶ್ರಯ ಮತ್ತು ಒತ್ತಾಸೆ ನೀಡುವ ವ್ಯವಸ್ಥೆಯನ್ನು ಸ್ಥಳೀಯ ಅಧಿಕಾರಿಗಳು ಹೊಂದಿದ್ದಾರೆ. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಸಂಗಾತಿಯ ವೀಸಾದ ಆಧಾರದ ಮೇಲೆ (ಆ ವೀಸಾದ ಮೇಲೆ ಮಾತ್ರ) ಆಸ್ಟ್ರೇಲಿಯದಲ್ಲಿರುವ ಸಾಗರೋತ್ತರ ಭಾರತೀಯ ಪತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳೆಯರು ಅಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕನ್ನು ಕೇಳಬಹುದು. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಸಂಗಾತಿಯ ವೀಸಾದ ಆಧಾರದ ಮೇಲೆ (ಆ ವೀಸಾದ ಮೇಲೆ ಮಾತ್ರ) ಆಸ್ಟ್ರೇಲಿಯದಲ್ಲಿರುವ ಸಾಗರೋತ್ತರ ಭಾರತೀಯ ಪತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳೆಯರು ಅಲ್ಲಿ ಆಸ್ತಿ ಹಕ್ಕನ್ನು ಕೇಳಬಹುದು. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ಇಂತಹ ಪ್ರಕರಣಗಳು ಇಲ್ಲಿ ನಡೆಯುತ್ತಿರುತ್ತವೆ. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಇಂತಹ ಪ್ರಕರಣಗಳು ಇಲ್ಲಿ ನಮ್ಮ ಗಮನಕ್ಕೆ ಬಂದಿಲ್ಲ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಇಂತಹ ಪ್ರಕರಣಗಳು ಇಲ್ಲಿ ನಮ್ಮ ಗಮನಕ್ಕೆ ಬಂದಿಲ್ಲ. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಇಲ್ಲಿನ ನ್ಯಾಯಾಲಯಗಳು/ ಅಧಿಕಾರಿಗಳು ಅಂತಹ ಮಾಹಿತಿಯನ್ನು ಹಂಚಿಕೊಳ್ಳದಿರುವುದರಿಂದ ಇಂತಹ ಪ್ರಕರಣಗಳು ಇಲ್ಲಿ ನಮ್ಮ ಗಮನಕ್ಕೆ ಬಂದಿಲ್ಲ. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ವಿಚ್ಛೇದನ ದಾವೆ ಹೂಡಲು ನ್ಯಾಯಾಲಯ ಶುಲ್ಕವಾಗಿ 925 ಆಸ್ಟ್ರೇಲಿಯನ್ ಡಾಲರ್ ಕಟ್ಟಬೇಕು. ಆದರೆ ಗಣನೀಯ ಮೊತ್ತವಾದ ವಕೀಲರ ಶುಲ್ಕವು ವಕೀಲರಿಂದ ವಕೀಲರಿಗೆ ವ್ಯತ್ಯಾಸವಾಗುತ್ತದೆ (ಅಂದಾಜು 5,000 ದಿಂದ 10,000 ಆಸ್ಟ್ರೇಲಿಯನ್ ಡಾಲರ್). ಆಸ್ಟ್ರೇಲಿಯದ ಆರ್ಥಿಕತೆಯು ಬಹಳ ದುಬಾರಿಯಾಗಿರುವುದರಿಂದ ಇಲ್ಲಿನ ಕಾನೂನು ವೆಚ್ಚಗಳು ಅಗಾಧವಾಗಿವೆ. ಆದ್ದರಿಂದ ಇಂತಹ ದಾವೆಗಳ ವೆಚ್ಚವು ಸುಮಾರು 10,000 ಆಸ್ಟ್ರೇಲಿಯನ್ ಡಾಲರ್‌ಗಿಂತಲೂ ಹೆಚ್ಚಾಗಬಹುದೆಂದು ಪರಿಗಣಿಸಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ | ಇಲ್ಲಿನ ಭಾರತೀಯ ಕಚೇರಿಯು ಇದುವರೆಗೂ ಇಂತಹ |

| | | |
|---|---|---|
| | ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಯಾವುದೇ ಸುತ್ತೋಲೆಯನ್ನೂ ಸ್ವೀಕರಿಸಿಲ್ಲ. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಸಂಗಾತಿಯ ವೀಸಾ ಆಧಾರದ ಮೇಲೆ ಬಂದಿದ್ದರೆ ಅಥವ ಶಾಶ್ವತವಾಗಿ ನೆಲೆಸುವ ಹಕ್ಕು ಹೊಂದಿದ್ದರೆ ಅಥವ ಆಸ್ಟ್ರೇಲಿಯದ ಪ್ರಜೆಯಾಗಿದ್ದರೆ ಮಾತ್ರ, ವೈವಾಹಿಕ ವ್ಯಾಜ್ಯಗಳಿಂದಾಗುವ ಕೌಟುಂಬಿಕ ಹಿಂಸೆಗೆ ಗುರಿಯಾಗುವ ಅಂತಹ ಮಹಿಳೆಯರಿಗೆ ಆಶ್ರಯ ಮತ್ತು ಒತ್ತಾಸೆ ನೀಡುವ ವ್ಯವಸ್ಥೆಯನ್ನು ಸ್ಥಳೀಯ ಅಧಿಕಾರಿಗಳು ಹೊಂದಿದ್ದಾರೆ. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಆಯಾ ಪ್ರಕರಣದ ಆಧಾರದ ಮೇಲೆ ವಿದೇಶೀ ನ್ಯಾಯಾಲಯದ ಡಿಕ್ರಿಯನ್ನು ಮಾನ್ಯ ಮಾಡಲಾಗುತ್ತದೆ. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಪರಸ್ಪರ ಕಾನೂನು ಸಹಕಾರ ಒಪ್ಪಂದ (MLAT)ದ ಅಡಿಯಲ್ಲಿ ಆಸ್ಟ್ರೇಲಿಯದ ನ್ಯಾಯಾಂಗ ಇಲಾಖೆಯು ಅನಿವಾಸಿ ಭಾರತೀಯರಿಗೆ ಸಮನ್ಸುಗಳನ್ನು ಜಾರಿ ಮಾಡುತ್ತದೆ. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ವಿದೇಶೀ ಮಹಿಳೆಯರು ಸಂಗಾತಿ ವೀಸಾ ಆಧಾರದ ವೀಸಾ ಹೊಂದಿದ್ದರೆ, ಅಂತಹವರ ವೀಸಾವನ್ನು ವಿಸ್ತರಿಸಬಹುದು. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಪತಿಯ ಆದಾಯ ಮತ್ತು ಮಕ್ಕಳೊಂದಿಗಿರುವ ಪತ್ನಿಯ ಆರ್ಥಿಕ ಅವಶ್ಯಕತೆಯನ್ನು ಪರಿಶೀಲಿಸಿ, ಅದರ ಆಧಾರದ ಮೇಲೆ ನ್ಯಾಯಾಲಯವು ಪತ್ನಿಯ ಜೀವನಾಂಶವನ್ನು ನಿರ್ಣಯಿಸುತ್ತದೆ. |

**8. ನ್ಯೂಝಿಲ್ಯಾಂಡ್ :**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ವ್ಯಕ್ತಿಯ ರಾಷ್ಟ್ರೀಯತೆಯನ್ನು ತಿಳಿಸುವ ಪಾಸ್‌ಪೋರ್ಟ್ ಪ್ರತಿಯನ್ನು ಉಲ್ಲೇಖಿಸುವ ಮೂಲಕ ಯಾವುದೇ ವ್ಯಕ್ತಿಯ ಹಿನ್ನೆಲೆಯನ್ನು ಪರಿಶೀಲಿಸುವುದು ಒಂದು ನಿರ್ದಿಷ್ಟ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ನ್ಯೂಝಿಲೆಂಡಿನ ಪ್ರಜೆಗಳಲ್ಲದ, ಕೇವಲ ಅಲ್ಲಿ ನೆಲೆಸಿರುವವರಿಗೆ ಮಾತ್ರ ಅನ್ವಯಿಸುತ್ತದೆ. ಭಾರತೀಯ ಮೂಲದ ವ್ಯಕ್ತಿಯ/ ಅನಿವಾಸಿ ಭಾರತೀಯರ ಹಿನ್ನೆಲೆಯನ್ನು ತೋರಿಸುವಂತಹ, ಸಾರ್ವಜನಿಕರಿಗೆ ಲಭ್ಯವಿರುವ ಯಾವುದೇ ಶಾಸನಾತ್ಮಕ ದಾಖಲೆಯೂ ಇಲ್ಲಿ ಇಲ್ಲ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ಸಹಬಾಳ್ವೆ ನಡೆಸುವವರ (ಲಿವಿಂಗ್ ಟುಗೆದರ್) ಸಂಬಂಧವನ್ನು ನ್ಯೂಝಿಲೆಂಡಿನಲ್ಲಿ ಸಿಂಧು ಎಂದು ಮಾನ್ಯ ಮಾಡಲಾಗಿದೆ. ಆದ್ದರಿಂದ ಸಾಮಾಜಿಕ/ ಸಾಂಪ್ರದಾಯಿಕ ವಿವಾಹ ಅಥವ (ಪ್ರಾಮಾಣಿಕವಾದ, ಸ್ಥಿರವಾದ ಮತ್ತು ಚಾಲ್ತಿಯಲ್ಲಿರುವ) ಸಹಬಾಳ್ವೆ ನಡೆಸುತ್ತಿರುವವರ ಸಂಬಂಧವನ್ನು ಅಧಿಕೃತ ವಿವಾಹವೆಂದು ಇಲ್ಲಿ ಪರಿಗಣಿಸಲಾಗಿದೆ. ವಿದೇಶಗಳಲ್ಲಿ ಸಿಂಧು ಎಂದು ಪರಿಗಣಿಸಲಾಗಿರುವ ಅಥವ ನೋಂದಾಯಿಸಲ್ಪಟ್ಟಿರುವ ವಿವಾಹಗಳನ್ನು ಸಹ ಇಲ್ಲಿ ಸಿಂಧು ಎಂದು ಮಾನ್ಯ ಮಾಡಲಾಗುತ್ತದೆ. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ವರದಕ್ಷಿಣೆ ನಿಯಮಗಳ ಬಗ್ಗೆ ನ್ಯೂಝಿಲೆಂಡಿನಲ್ಲಿ ಯಾವುದೇ ಕಾನೂನುಗಳೂ ಇಲ್ಲ. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ನ್ಯೂಝಿಲೆಂಡಿನ 1961ರ ಅಪರಾಧಗಳ ಕಾಯಿದೆ ಪ್ರಕಾರ ಈಗಾಗಲೇ ವಿವಾಹವಾಗಿರುವ ಯಾವುದೇ ವ್ಯಕ್ತಿಯು ಮತ್ತೊಮ್ಮೆ ವಿವಾಹವಾಗುವಂತಿಲ್ಲ. ನ್ಯೂಝಿಲೆಂಡಿನಲ್ಲಿ ಬಹು–ವಿವಾಹವು ಒಂದು ಅಪರಾಧ. ಆದರೆ, ಈಗಾಗಲೇ ವಿವಾಹವಾಗಿರುವ ವ್ಯಕ್ತಿಯು ಬೇರೊಂದು ದೇಶದಲ್ಲಿ ಇನ್ನೊಂದು ಮದುವೆಯಾದರೆ, ಆ ದೇಶದ (ಈ ಸಂದರ್ಭದಲ್ಲಿ ಭಾರತದ) ಕಾನೂನುಗಳು ಅನ್ವಯವಾಗುತ್ತವೆ. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಖಾಸಗಿತನ ರಕ್ಷಣೆಯ ಕಾಯಿದೆಗಳ ಸಮಸ್ಯೆಗಳಿಂದಾಗಿ ಯಾವುದೇ ವ್ಯಕ್ತಿಯ ಒಪ್ಪಿಗೆ ಇಲ್ಲದೆ ಆತನ ಗುರುತು– |

| | | |
|---|---|---|
| | | ಪತ್ತೆಗಳನ್ನು ಅಧಿಕಾರಿಗಳು ಒದಗಿಸುವುದಿಲ್ಲ. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ನ್ಯೂಝಿಲೆಂಡಿನಲ್ಲಿ ಯಾವುದೇ ವಯಸ್ಕ ವ್ಯಕ್ತಿಯನ್ನು ಬಲವಂತವಾಗಿ ಇನ್ನೊಬ್ಬ ವ್ಯಕ್ತಿಯೊಂದಿಗೆ ಬದುಕುವಂತೆ/ ವಾಸಿಸುವಂತೆ ಮಾಡಲಾಗುವುದಿಲ್ಲ. ಹತ್ತಿರದ ಸಂಬಂಧಿಗಳು ಅಥವ ಸ್ನೇಹಿತರು ಈ ವಿಷಯದಲ್ಲಿ ಸಹಾಯ ಮಾಡಬಹುದು. ಮೋಸ ಅಥವ ವಂಚನೆಯಾಗಿದ್ದರೆ ಪೋಲೀಸರಿಗೆ ದೂರು ನೀಡಬಹುದು. ಆದರೆ ಬಲವಂತವಾಗಿ ಒತ್ತಾಯ ಮಾಡುವುದು ಕಷ್ಟ. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ದೌರ್ಜನ್ಯಕ್ಕೊಳಗಾದ/ ಪರಿತ್ಯಕ್ತ ಮಹಿಳೆಯರಿಗೆ ಆಶ್ರಯ ಒದಗಿಸುವ ಧಾರ್ಮಿಕ ಸಂಸ್ಥೆಗಳು ನ್ಯೂಝಿಲೆಂಡಿನಲ್ಲಿವೆ. 'ಶಕ್ತಿ ನ್ಯೂಝಿಲೆಂಡ್' ಎಂಬುದು ಅಂತಹ ಸಂಸ್ಥೆಗಳಲ್ಲಿ ಒಂದು. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಪರಿತ್ಯಕ್ತ ಮಹಿಳೆಯರಿಗೆ ಮತ್ತು ಮಕ್ಕಳಿಗೆ ನಿರಾಶ್ರಿತರ ಸ್ಥಾನಮಾನವನ್ನು ನೀಡಲಾಗಿದ್ದರೆ ಮಾತ್ರ ಇದು ಸಾಧ್ಯ. ವೀಸಾ ಅಥವ ನೆಲೆಸುವ ಹಕ್ಕಿನ ಅನುಮತಿಯೊಂದಿಗೆ ಪೋಲೀಸರು ಬೆಂಬಲ ಪತ್ರವನ್ನು ನೀಡಬಹುದು. ಆದರೆ, ಇಂತಹ ವ್ಯವಸ್ಥೆಯು ಹಲವಾರು ಸಲ ದುರುಪಯೋಗವಾಗಿರುವುದರಿಂದ, ಇದು ಪ್ರತ್ಯೇಕವಾಗಿ ಆಯಾ ಪ್ರಕರಣವನ್ನವಲಂಬಿಸಿರುತ್ತದೆ. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಅರ್ಹ ಸಂಗಾತಿಯು ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ಇಬ್ಬರ ಸಂಬಂಧದ ಅವಧಿಯನ್ನೂ ಒಳಗೊಂಡಂತೆ, ನ್ಯಾಯಾಲಯವು ಪರಾಂಬರಿಸುವ ಅನೇಕ ಅಂಶಗಳಿವೆ. ನೀವು ಸಾಮಾಜಿಕ ಸಮಾರಂಭದಲ್ಲಿ ಸಾಂಪ್ರದಾಯಿಕವಾಗಿ ವಿವಾಹವಾಗಿದ್ದರೆ ಅಥವ 3 ವರ್ಷ ಅಥವ ಅದಕ್ಕಿಂತ ಹೆಚ್ಚಿನ ಕಾಲ ಒಟ್ಟಿಗೇ ವಾಸಿಸುತ್ತಿದ್ದರೆ, ನ್ಯೂಝಿಲೆಂಡಿನ ಆಸ್ತಿ ಕಾನೂನಿನ ಪ್ರಕಾರ, ಯಾವ ಆಸ್ತಿಗಳು ಇಬ್ಬರ ಹೆಸರಿನಲ್ಲೂ ಇವೆಯೋ, ಅಂತಹ ಆಸ್ತಿಗಳನ್ನು ಸಮವಾಗಿ ಭಾಗ ಮಾಡಿಕೊಡಲಾಗುತ್ತದೆ. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ನ್ಯೂಝಿಲೆಂಡಿನಲ್ಲಿ ಕೌಟುಂಬಿಕ ಹಿಂಸೆಯ ವಿರುದ್ಧ ಕಟ್ಟುನಿಟ್ಟಾದ ಕಾನೂನುಗಳಿವೆ. ದೈಹಿಕ, ಲೈಂಗಿಕ, ಮಾನಸಿಕ ಅಥವ ಆರ್ಥಿಕ ದೌರ್ಜನ್ಯಗಳನ್ನು ಕೌಟುಂಬಿಕ ಹಿಂಸೆಯ ಭಾಗವೆಂದು ಇಲ್ಲಿ ಪರಿಗಣಿಸಲಾಗುತ್ತದೆ. ಸಂತ್ರಸ್ತರು ಪೊಲೀಸು ಸುರಕ್ಷತೆ ಆದೇಶ ಅಥವ ರಕ್ಷಣಾ ಆದೇಶವನ್ನು ಪಡೆದುಕೊಳ್ಳಬಹುದು. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಮಕ್ಕಳ ಪಾಲನೆಗಾಗಿ ಅಥವ ಮಗುವನ್ನು ವಶಕ್ಕೆ ಪಡೆದುಕೊಳ್ಳಲು ಸಂತ್ರಸ್ತೆಯು ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅಥವ ಇನ್ನೊಬ್ಬ ಪೋಷಕರ ಒಪ್ಪಿಗೆ ಇಲ್ಲದೆ ಮಗುವನ್ನು ದೇಶದ ಹೊರಗೆ ಕರೆದುಕೊಂಡು ಹೋದಲ್ಲಿಅದನ್ನು 'ಮಗುವಿನ ಅಪಹರಣ'ಎಂದು ಪರಿಗಣಿಸಲಾಗುತ್ತದೆ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಮಕ್ಕಳ ಪಾಲನೆಗಾಗಿ ಅಥವ ಮಗುವನ್ನು ವಶಕ್ಕೆ ಪಡೆದುಕೊಳ್ಳಲು ಸಂತ್ರಸ್ತೆಯು ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅಥವ ಇನ್ನೊಬ್ಬ ಪೋಷಕರ ಒಪ್ಪಿಗೆ ಇಲ್ಲದೆ ಮಗುವನ್ನು ದೇಶದ ಹೊರಗೆ ಕರೆದುಕೊಂಡು ಹೋದಲ್ಲಿಅದನ್ನು 'ಮಗುವಿನ ಅಪಹರಣ'ಎಂದು ಪರಿಗಣಿಸಲಾಗುತ್ತದೆ. ಇದನ್ನು ನಿರ್ಧರಿಸುವಾಗ ನ್ಯಾಯಾಲಯವು ಮಗುವಿನ ಹಿತದೃಷ್ಟಿಯಿಂದ ಪರಿಗಣಿಸಲೇಬೇಕಾದ ಅಂಶಗಳಾದ ಪೋಷಕರ ದೌರ್ಜನ್ಯ, ಅನಾರೋಗ್ಯಕರ ವಾತಾವರಣ, ಜವಾಬ್ದಾರಿಗಳು, ದಾಕ್ಷಿಣ್ಯಗಳು, ಆರ್ಥಿಕ ಪರಿಸ್ಥಿತಿ, ಆರೋಗ್ಯದ ಪರಿಸ್ಥಿತಿ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಳ್ಳುತ್ತದೆ. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಪ್ರತಿವಾದಿಗೆ ವಿಚಾರಣೆಯ ವಿಷಯವನ್ನು ತಿಳಿಸಲು ನ್ಯಾಯಾಲಯವು ವಿಧಿಸಿರುವ ಎಲ್ಲಾ ಕ್ರಮಗಳನ್ನೂ ಪೂರೈಸಿ, ಬೇರೇನೂ ದಾರಿಯಿಲ್ಲದಿದ್ದಾಗ, ನ್ಯಾಯಾಲಯವು ಪ್ರತಿವಾದಿಯ |

| | | |
|---|---|---|
| | | ಅನುಪಸ್ಥಿತಿಯಲ್ಲಿ ವಿಚಾರಣೆ ನಡೆಸಲು ಅನುಮತಿ ಇತ್ತಾಗ, ಏಕಪಕ್ಷೀಯ ಆದೇಶಗಳನ್ನು ಪಡೆಯಬಹುದು. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ಕಾನೂನು ವೆಚ್ಚಗಳು (ಪ್ರಕರಣದಿಂದ ಪ್ರಕರಣಕ್ಕೆ ವ್ಯತ್ಯಾಸವಾಗುತ್ತವೆ) ಆಯಾ ಪ್ರಕರಣವನ್ನು ಅವಲಂಬಿಸಿರುತ್ತವೆ. ನ್ಯೂಝಿಲೆಂಡಿನಲ್ಲಿ ಕಾನೂನು ವೆಚ್ಚಗಳು ಬಹಳ ಹೆಚ್ಚಾಗಿದ್ದು, ಮೊತ್ತವನ್ನು ಖಚಿತವಾಗಿ ಇಷ್ಟೇ ಎಂದು ಹೇಳಲಾಗುವುದಿಲ್ಲ. ಪ್ರಾರಂಭಿಕ ಹಂತದ ಸಹಾಯಕ್ಕಾಗಿ 2,000 ದಿಂದ 3,000 ನ್ಯೂಝಿಲೆಂಡ್ ಡಾಲರಿನಷ್ಟು ಬೇಕಾಗಬಹುದು. ಆದರೆ, ಬೇಕಾಗುವ ಒಟ್ಟಾರೆ ಮೊತ್ತವು ಆಯಾ ಪ್ರಕರಣ ಮತ್ತು ಕೌಟುಂಬಿಕ ದೌರ್ಜನ್ಯ, ಬೇರೆಯಾಗಿ ವಾಸಿಸುವುದು, ವಿಚ್ಛೇದನ, ಮಕ್ಕಳ ಹತೋಟಿ, ಆಸ್ತಿಗಳು, ಸಂಬಂಧಗಳು ಇತ್ಯಾದಿಗಳಿಂದಾಗುವ ಸಂಕೀರ್ಣತೆಗಳನ್ನು ಅವಲಂಬಿಸಿರುತ್ತದೆ. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ಭಾರತೀಯ ಕಚೇರಿಗಳು ಸ್ಥಳೀಯ ಅಧಿಕಾರಿಗಳ ಸಹಾಯವನ್ನು ಕೇಳಬೇಕಾಗಿ ಬರಬಹುದು. ಆದರೆ, ಇಲ್ಲಿನ ಕಟ್ಟುನಿಟ್ಟಾದ ಖಾಸಗಿತನ ರಕ್ಷಣೆಯ ಕಾಯಿದೆಗಳಿಂದಾಗಿ ಯಾವುದೇ ವ್ಯಕ್ತಿಯ ಗುರುತು-ಪತ್ತೆಗಳನ್ನು ನ್ಯೂಝಿಲೆಂಡಿನ ಅಧಿಕಾರಿಗಳು ಬಹಿರಂಗಗೊಳಿಸುವುದಿಲ್ಲ. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಅರ್ಹರಾದ ವ್ಯಕ್ತಿಗಳಿಗೆ ನ್ಯೂಝಿಲೆಂಡಿನಲ್ಲಿ ಕಾನೂನು ನೆರವಿನ ವ್ಯವಸ್ಥೆಯಿದೆ. ಕೌಟುಂಬಿಕ ಹಿಂಸೆಯ ವ್ಯಾಜ್ಯಗಳನ್ನು ಪೊಲೀಸು ಅಭಿಯೋಜಕರು ನಿಭಾಯಿಸುತ್ತಾರೆ ಮತ್ತು ಸಂತ್ರಸ್ತೆಗೆ ಸಹಾಯ ಒದಗಿಸಲಾಗುತ್ತದೆ. ಆದರೆ, ಆಸ್ತಿ ಮತ್ತು ಇತರ ಸಿವಿಲ್ ಪ್ರಕರಣಗಳಲ್ಲಿ ಅನಿವಾಸಿಗಳಿಗೆ ಕಾನೂನು ನೆರವು ಸಿಗದಿರಬಹುದು. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಭಾರತೀಯ ನ್ಯಾಯಾಲಯಗಳ ತೀರ್ಪುಗಳನ್ನು ನ್ಯೂಝಿಲೆಂಡಿನ ನ್ಯಾಯಾಲಯಗಳು ಮಾನ್ಯ ಮಾಡುತ್ತವಾದರೂ, ಭಾರತೀಯ ನ್ಯಾಯಾಲಯಗಳ ತೀರ್ಪುಗಳು ನ್ಯೂಝಿಲೆಂಡಿನ ನ್ಯಾಯಾಲಯಗಳಿಗೆ ಪ್ರಚೋದನಾತ್ಮಕ/ ಸಲಹಾತ್ಮಕವಾಗಿರುತ್ತವೆಯೇ ಹೊರತು ನಿರ್ಬಂಧನಾತ್ಮಕವಾಗಿರುವುದಿಲ್ಲ.<br>ಎರಡೂ ಪಕ್ಷದವರು ಯಾವ ದೇಶದ ಪ್ರಜೆಗಳಾಗಿರುತ್ತಾರೋ, ವಿಚ್ಛೇದನ ಅಥವ ಬೇರೆಯಾಗುವ ಪ್ರಕರಣಗಳಲ್ಲಿ ಆಯಾ ದೇಶದ ಡಿಕ್ರಿ ಅಥವ ಇನ್ನಿತರ ಯಾವುದೇ ಶಾಸನಾತ್ಮಕ ವಿಧೇಯಕಗಳ ನ್ಯಾಯಬದ್ಧತೆಯನ್ನು ನ್ಯೂಝಿಲೆಂಡಿನ ನ್ಯಾಯಾಲಯಗಳು ಮಾನ್ಯ ಮಾಡುತ್ತವೆ. ಇತರ ವಿಷಯಗಳ ನ್ಯಾಯಾಧಿಕಾರದ ವ್ಯಾಪ್ತಿಯು ಆಯಾ ಪ್ರಕರಣಗಳನ್ನು ಅವಲಂಬಿಸಿದೆ.<br>ಆದರೆ, ಇಲ್ಲಿನ ಖಾಸಗಿತನದ ರಕ್ಷಣಾ ಕಾಯಿದೆಗಳಿಂದಾಗಿ ಭಾರತೀಯ ನ್ಯಾಯಾಲಯಗಳ ಆದೇಶಗಳನ್ನು ಅಂಗೀಕರಿಸುವಲ್ಲಿ ಕೆಲವು ಮಿತಿಗಳಿವೆ. ಸ್ಥಳೀಯ ಅಧಿಕಾರಿಗಳ ನಿರ್ಣಯಗಳೇ ಅಂತಿಮವಾಗಿ ಅಂಗೀಕಾರವಾಗುತ್ತಿರುವುದು ಈ ಭಾರತೀಯ ಕಚೇರಿಯ ಇಲ್ಲಿಯವರೆಗಿನ ಅನುಭವವಾಗಿದೆ. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಈ ವಿಷಯದಲ್ಲಿ ಆವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲು ನ್ಯೂಝಿಲೆಂಡಿನ ನ್ಯಾಯಾಲಯಗಳಾಗಲೀ, ಪೊಲೀಸರಾಗಲೀ ಅಥವ ಸರ್ಕಾರದ ಪ್ರತಿನಿಧಿಗಳಾಗಲೀ ಬಾಧ್ಯರಲ್ಲ. ನ್ಯಾಯಾಂಗದ ವಿಧಿವತ್ತಾದ ಕ್ರಮವನ್ನನುಸರಿಸುವುದರೊಂದಿಗೆ ಸಮನ್ಸುಗಳನ್ನು/ ಬಂಧನ ವಾರಂಟುಗಳನ್ನು ಖಾಸಗಿ ಪ್ರಯತ್ನಗಳ ಮೂಲಕ ಜಾರಿ ಮಾಡುವುದೇ ಕಾನೂನುಬದ್ಧ ಪ್ರಕ್ರಿಯೆಯಾಗಿದೆ.<br>ಸಾಮಾನ್ಯವಾಗಿ ಹೀಗೆ ಭಾರತೀಯ ಕಚೇರಿಗಳಿಂದ ಕಳುಹಿಸಲ್ಪಟ್ಟ ಸಮನ್ಸುಗಳು/ ಬಂಧನ ವಾರಂಟುಗಳು ಅಸ್ವೀಕೃತವಾಗಿ ಭಾರತೀಯ ಕಚೇರಿಗೇ ಹಿಂತಿರುಗಿಸಲ್ಪಡುತ್ತವೆ. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಸಾಮಾನ್ಯವಾಗಿ ವಿವಾಹ ಅಥವ ಸಹಬಾಳ್ವೆಯು ಪ್ರಾಮಾಣಿಕವಾದ, ಸ್ಥಿರವಾದ ಮತ್ತು ಚಾಲ್ತಿಯಲ್ಲಿದ್ದರೆ ಮಾತ್ರ ನ್ಯೂಝಿಲೆಂಡಿನ ವಲಸೆ ಇಲಾಖೆಯು ಸಂಗಾತಿ ವೀಸಾವನ್ನು |

| | | |
|---|---|---|
| | | ನೀಡುತ್ತದೆ ಅಥವ ವಿಸ್ತರಿಸುತ್ತದೆ. ಪ್ರತಿಯೊಬ್ಬರ ಅರ್ಹತೆ ಮತ್ತು ಸಂದರ್ಭಾನುಸಾರವಾಗಿ ಯಾವುದೇ ವ್ಯಕ್ತಿಯು ಭೇಟಿಯ ವೀಸಾ ಅಥವ ಇನ್ನಿತರ ವೀಸಾಕ್ಕೆ ಅರ್ಹನಾಗುತ್ತಾನೆ. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಯಾರೇ 'ಅರ್ಹ ಸಂಗಾತಿ'ಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೆ, ಆತ/ ಆಕೆಯು ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಲು ಜೀವನಾಂಶವನ್ನು ಮಂಜೂರು ಮಾಡಬಹುದು. ಇದು ಕೇವಲ ಅಲ್ಪ ಕಾಲಾವಧಿಗೆ ಮಾತ್ರ ಇರುತ್ತದೆ. ಇತರ ಆರ್ಥಿಕ ಮೂಲಗಳು, ಸ್ವಾವಲಂಬನೆ, ದುಡಿದು ಸಂಪಾದಿಸಬಲ್ಲ ಸಾಮರ್ಥ್ಯ, ಮಕ್ಕಳ ಪಾಲನೆ, ಅಲ್ಲಿಯೇ ಉಳಿಸಿಕೊಳ್ಳುವ ಅವಧಿಯ ಅವಶ್ಯಕತೆ ಮುಂತಾದುವುಗಳನ್ನೊಳಗೊಂಡಂತೆ ಹಲವಾರು ವಿಷಯಗಳನ್ನು ನ್ಯಾಯಾಲಯವು ಗಮನಿಸುತ್ತದೆ. |

**9. <u>ಕೆನಡ</u> :**

| ಸಂಖ್ಯೆ | ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು | ವಿದೇಶದಲ್ಲಿ ಸಿಗುವ ಕಾನೂನು ಮತ್ತು ಇತರ ಸೌಲಭ್ಯಗಳು |
|---|---|---|
| 1. | ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಹಿನ್ನೆಲೆ–ವಿದ್ಯಾಭ್ಯಾಸ, ನೌಕರಿ, ಸಂಬಳ, ಮದುವೆ ಇತ್ಯಾದಿಗಳ–ವಿವಾಹಪೂರ್ವ ಪರಿಶೀಲನಾ ವ್ಯವಸ್ಥೆ | ಕಟ್ಟುನಿಟ್ಟಿನ ಖಾಸಗಿತನದ ಕಾಯಿದೆಯಿಂದಾಗಿ ಕೆನಡದಲ್ಲಿ ವಾಸಿಸುತ್ತಿರುವ ಕೆನಡಿಯನ್ ಪೌರ ಅಥವ ಬೇರೆಯವರ ವಿವಾಹ ಸಂಬಂಧದ ವಿವರಗಳನ್ನೊಳಗೊಂಡಂತೆ ಪ್ರಶ್ನಿತ ವ್ಯಕ್ತಿಯ ಯಾವುದೇ ವಿಷಯದ ಬಗೆಗಿನ ಯಾವುದೇ ಮಾಹಿತಿಯನ್ನು ಕೆನಡದ ಅಧಿಕಾರಿಗಳು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ ಎಂದು ತಿಳಿಸಬಯಸುತ್ತೇವೆ. ಆದ್ದರಿಂದ, ಕೆನಡದಲ್ಲಿ ಭಾರತ ಮೂಲದ ವ್ಯಕ್ತಿ/ ಅನಿವಾಸಿ ಭಾರತೀಯ ವ್ಯಕ್ತಿಯ ವಿದ್ಯಾಭ್ಯಾಸ, ನೌಕರಿ, ವೇತನ, ವಿವಾಹ ಸ್ಥಿತಿ (ವಿವಾಹಿತನೋ ಅಥವ ಅವಿವಾಹಿತನೋ) ಗಳಿಗೆ ಸಂಬಂಧಪಟ್ಟಂತೆ ಆತನ ಹಿನ್ನೆಲೆಯನ್ನು ವಿವಾಹಪೂರ್ವದಲ್ಲಿ ಪರಿಶೀಲಿಸಲು ಈ ಭಾರತೀಯ ಕಚೇರಿಗೆ ಸಾಧ್ಯವಿಲ್ಲ. |
| 2. | ಸಾಗರೋತ್ತರ ಭಾರತೀಯ ಸಂಗಾತಿಗಳೊಂದಿಗೆ ನೋದಣಿರಹಿತ ವಿವಾಹ (ಕೇವಲ ಪಾರಂಪರಿಕ ವಿವಾಹ) | ಕಟ್ಟುನಿಟ್ಟಿನ ಖಾಸಗಿತನದ ಕಾಯಿದೆಯಿಂದಾಗಿ ಕೆನಡದಲ್ಲಿ ವಾಸಿಸುತ್ತಿರುವ ಕೆನಡಿಯನ್ ಪೌರರಾಗಲೀ ಅಥವ ಬೇರೆಯವರಾಗಲೀ, ಯಾವುದೇ ವ್ಯಕ್ತಿಯ ವೈಯಕ್ತಿಕ ಮಾಹಿತಿಯನ್ನು ಕೆನಡದ ಅಧಿಕಾರಿಗಳು ಭಾರತೀಯ ದೂತಾವಾಸದೊಂದಿಗೂ ಸಹ ಹಂಚಿಕೊಳ್ಳುವುದಿಲ್ಲ. ಆದ್ದರಿಂದ, ಸಾಗರೋತ್ತರ ಭಾರತೀಯ ಸಂಗಾತಿಗಳೊಡನೆ ನೋಂದಾವಣೆಯಾಗದ ವಿವಾಹ ಮಾಡಿಕೊಂಡಿರುವ ಭಾರತೀಯ ಮಹಿಳೆಯರ ಸಂಖ್ಯೆ ಎಷ್ಟೆಂಬುದನ್ನು ತಿಳಿದುಕೊಳ್ಳಲು ಈ ಭಾರತೀಯ ಕಚೇರಿಗೆ ಸಾಧ್ಯವಾಗಲಾರದು. |
| 3. | ವಿದೇಶದಲ್ಲಿ ನೆಲೆಸಿರುವ ಸಂಗಾತಿ/ ಅತ್ತೆ–ಮಾವಂದಿರು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವುದು. | ಕೆನಡದಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯ/ ಭಾರತ ಮೂಲದ ವ್ಯಕ್ತಿ ಸಂಗಾತಿ ಅಥವ ಆತನ/ ಆಕೆಯ ಕುಟುಂಬವು ವರದಕ್ಷಿಣೆಗಾಗಿ ಒತ್ತಾಯಿಸುತ್ತಿರುವ ಬಗ್ಗೆ ವಿಚಾರಿಸಲು ಕೆನಡದ ಯಾವುದೇ ಅಧಿಕಾರಿಯನ್ನಾಗಲೀ ಅಥವ ಕೆನಡದಲ್ಲಿರುವ ಯಾವುದೇ ವ್ಯಕ್ತಿಯನ್ನಾಗಲೀ ಸಂಪರ್ಕಿಸಲು ಈ ಭಾರತೀಯ ಕಚೇರಿಗೆ ಯಾವ ಅಂಗೀಕೃತ ಅಧಿಕಾರವೂ/ ಮಾನ್ಯತೆಯೂ ಇಲ್ಲ. ಸಮಸ್ಯೆಯ ಪರಿಹಾರಕ್ಕಾಗಿ ಎರಡೂ ದೇಶಗಳ ನಡುವಣ ಪರಸ್ಪರ ಕಾನೂನು ಸಹಕಾರ ಒಪ್ಪಂದ (MLAT)ದ ನಿಬಂಧನೆಗಳಿಗೆ ಎಲ್ಲರೂ ಮೊರೆಹೋಗಬೇಕಾಗಿದೆ. |
| 4. | ಅನಿವಾಸಿ ಭಾರತೀಯನು ವಿದೇಶದಲ್ಲಿ ಈಗಾಗಲೇ ವಿವಾಹವಾಗಿರುವುದನ್ನು ಮುಚ್ಚಿಟ್ಟಿದ್ದಾನೆ. | ಈಗಾಗಲೇ ತಿಳಿಸಿರುವಂತೆ, ಕಟ್ಟುನಿಟ್ಟಿನ ಖಾಸಗಿತನದ ಕಾಯಿದೆಯಿಂದಾಗಿ ಭಾರತ ಮೂಲದ ವ್ಯಕ್ತಿ/ ಅನಿವಾಸಿ ಭಾರತೀಯ ವ್ಯಕ್ತಿಯ ವಿವಾಹ ಸ್ಥಿತಿಯ (ವಿವಾಹಿತನೋ ಅಥವ ಅವಿವಾಹಿತನೋ) ಬಗ್ಗೆ ಯಾವುದೇ ಮಾಹಿತಿಯನ್ನು ಕೆನಡದ ಅಧಿಕಾರಿಗಳು ಭಾರತೀಯ ದೂತಾವಾಸದೊಂದಿಗಾಗಲೀ ಅಥವ ಯಾವುದೇ ಮೂರನೇ ವ್ಯಕ್ತಿಯೊಂದಿಗಾಗಲೀ ಹಂಚಿಕೊಳ್ಳುವುದಿಲ್ಲ. ಭಾರತೀಯ ಪ್ರಜೆಯೊಬ್ಬನ ವಿವಾಹ ಸ್ಥಿತಿಯನ್ನು ತಿಳಿಯಲು, ಆತನು 'ಎಲ್ಲರ ವೈಯಕ್ತಿಕ ಜವಾಬ್ದಾರಿ ಮತ್ತು ವೈಯಕ್ತಿಕ ಅಭಿವೃದ್ಧಿ' (PRIDE-Personal Responsibility and Individual Development for Everyone) ಯೋಜನೆಯ |

| | | |
|---|---|---|
| | | ಅಡಿಯಲ್ಲಿ ನೀಡಿರುವ ಮಾಹಿತಿಯನ್ನು ಪರಿಶೀಲಿಸುವುದೊಂದೇ ದಾರಿ; ಆದರೆ ಅದನ್ನೂ ಸಹ ನೈಜ ಸಾಕ್ಷ್ಯವೆಂದು ಹೇಳಲು ಸಾಧ್ಯವಿಲ್ಲ. |
| 5. | ವಿದೇಶದಲ್ಲಿ ಪತಿಯ ಸ್ಥಳ ಅಥವ ವಾಸಸ್ಥಳದ ವಿವರಗಳನ್ನು ಪತ್ತೆ ಹಚ್ಚುವುದು. | ಕಟ್ಟುನಿಟ್ಟಿನ ಖಾಸಗಿತನದ ಕಾಯಿದೆಯಿಂದಾಗಿ ಕೆನಡದಲ್ಲಿರುವ ಅನಿವಾಸಿ ಭಾರತೀಯ/ ಭಾರತ ಮೂಲದ ವ್ಯಕ್ತಿ ಸಂಗಾತಿಯ ಗುರುತು–ಪತ್ತೆಗಳ ಬಗ್ಗೆ ವಿಚಾರಿಸಲು ಕೆನಡದ ಯಾವುದೇ ಅಧಿಕಾರಿಯನ್ನಾಗಲೀ ಅಥವ ಯಾವುದೇ ಖಾಸಗಿ ವ್ಯಕ್ತಿಯನ್ನಾಗಲೀ ಸಂಪರ್ಕಿಸಲು ಈ ಭಾರತೀಯ ಕಚೇರಿಗೆ ಸಾಧ್ಯವಿಲ್ಲ. |
| 6. | ಸಂಗಾತಿ ಕಣ್ಮರೆಯಾಗುವುದು/ ಸಾಗರೋತ್ತರ ಗಂಡಂದಿರಿಂದ ಭಾರತೀಯ ಮಹಿಳಾ ಪತ್ನಿಯರ ಪರಿತ್ಯಾಗ (ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ/ ವಿದೇಶೀ ಸಂಗಾತಿ) | ತನ್ನ ಭಾರತೀಯ ಸಂಗಾತಿಯನ್ನು ಪರಿತ್ಯಜಿಸಿ, ತಲೆಮರೆಸಿಕೊಂಡಿರುವ ಸಂಗಾತಿಯನ್ನು ಕೆನಡದಲ್ಲಿ ಹುಡುಕಲು ಈ ಭಾರತೀಯ ಕಚೇರಿಗೆ ಸಾಧ್ಯವೇ ಇಲ್ಲ. |
| 7. | ಸಾಗರೋತ್ತರ ಭಾರತೀಯರು ಪರಿತ್ಯಜಿಸಿದ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಆಶ್ರಯ ನೀಡುವುದು. | ಪರಿತ್ಯಜಿಸಲ್ಪಟ್ಟ ಮಹಿಳೆಯರು/ ಮಕ್ಕಳ ಮಾಹಿತಿಯನ್ನು ಈ ಭಾರತೀಯ ಕಚೇರಿಯೊಂದಿಗೆ ಹಂಚಿಕೊಳ್ಳದಿದ್ದರೂ, ಕೆನಡದ ಸ್ಥಳೀಯ ಸಮಾಜ ಸೇವಾ ಅಧಿಕಾರಿಗಳು ಅವರಿಗೆ ಆಶ್ರಯ ಮತ್ತು ಆಹಾರವನ್ನು ಒದಗಿಸುತ್ತಾರೆ. |
| 8. | ಸಾಗರೋತ್ತರ ಭಾರತೀಯ ಸಂಗಾತಿಯಿಂದ ಪರಿತ್ಯಜಿಸಲ್ಪಟ್ಟ ಭಾರತೀಯ ಮಹಿಳಾ ಪತ್ನಿಯರಿಗೆ/ ಮಕ್ಕಳಿಗೆ ಶಾಶ್ವತ ವಸತಿ ಸೌಲಭ್ಯ ಕಲ್ಪಿಸುವುದು. | ಅನಿವಾಸಿ ಭಾರತೀಯ/ ಭಾರತ ಮೂಲದ ವ್ಯಕ್ತಿ ಸಂಗಾತಿಯು ಪ್ರಾಯೋಜಿಸಿರುವ ಮಹಿಳೆಯರು ಮತ್ತು ಮಕ್ಕಳಿಗೆ ಮಾತ್ರ ಕೆನಡದ ಅಧಿಕಾರಿಗಳು ಅಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕನ್ನು ಮಂಜೂರು ಮಾಡುತ್ತಾರೆ. |
| 9. | ಸಾಗರೋತ್ತರ ಭಾರತೀಯ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯಲ್ಲಿ ಭಾರತೀಯ ಮಹಿಳಾ ಸಂತ್ರಸ್ತೆ ಪತ್ನಿಗೆ ಆಸ್ತಿ ಹಕ್ಕು. | ಸಂತ್ರಸ್ತ ಭಾರತೀಯ ಪತ್ನಿಯು ತನ್ನ ಸಂಗಾತಿಯು ವಿದೇಶದಲ್ಲಿ ಹೊಂದಿರುವ ಆಸ್ತಿಯ ಶೇ.50 ರಷ್ಟು ಭಾಗಕ್ಕಾಗಿ ಭಾರತದ ನ್ಯಾಯಾಲಯದಲ್ಲಿ ದಾವೆ ಹೂಡಬಹುದು. ಆದರೆ, ಅಂತಹ ಪ್ರಕರಣಗಳಲ್ಲಿ ಭಾರತದ ನ್ಯಾಯಾಲಯಗಳ ಆದೇಶಗಳನ್ನು ಕೆನಡದ ಅಧಿಕಾರಿಗಳು ಮಾನ್ಯ ಮಾಡುವುದಿಲ್ಲ. ಯಾವುದೇ ವ್ಯಕ್ತಿ (ಆಕೆಯ ಪತಿಯೇ ಆಗಬೇಕೆಂದಿಲ್ಲ) ಪ್ರಾಯೋಜಿಸಿದ್ದರೂ, ಪ್ರವಾಸಿ ವೀಸಾದಲ್ಲಿ ಬಂದಿದ್ದರೂ ಸಹ, ಕೆನಡ ತಲುಪಿದ ನಂತರ ಆಕೆ ಕೆನಡದ ವಕೀಲರನ್ನು ಸಂಪರ್ಕಿಸಬಹುದು. |
| 10. | ಅನಿವಾಸಿ ಭಾರತೀಯ ಪತಿಯಿಂದ ಪತ್ನಿಯ ಮೇಲೆ ದೌರ್ಜನ್ಯ/ ಸಾಂಸಾರಿಕ ಹಿಂಸೆ/ ಪೀಡನೆ. | ತಮ್ಮ ಅನಿವಾಸಿ ಭಾರತೀಯ/ ಭಾರತ ಮೂಲದ ವ್ಯಕ್ತಿ ಪತಿಯಿಂದ ದೌರ್ಜನ್ಯ/ ಕೌಟುಂಬಿಕ ಹಿಂಸೆ/ ದುರ್ವರ್ತನೆ ಅನುಭವಿಸಿರುವುದಾಗಿ ಭಾರತೀಯ ಪತ್ನಿಯರಿಂದ ದೂರುಗಳನ್ನು ಈ ಭಾರತೀಯ ಕಚೇರಿಯು ಸಹ ಸ್ವೀಕರಿಸಿದೆ. ಆದರೆ, ಕಟ್ಟುನಿಟ್ಟಿನ ಖಾಸಗಿತನದ ಕಾಯಿದೆಯಿಂದಾಗಿ ಈ ವಿಷಯದ ಬಗ್ಗೆ ಈ ಭಾರತೀಯ ಕಚೇರಿಗೆ ಯಾವ ಅಂಗೀಕೃತ ಅಧಿಕಾರವೂ/ ಮಾನ್ಯತೆಯೂ ಇಲ್ಲದಿರುವುದರಿಂದ, ಇದರ ಬಗ್ಗೆ ಸಂಬಂಧಿಸಿದ ಸ್ಥಳೀಯ ಪೊಲೀಸು ಅಧಿಕಾರಿಗಳೊಂದಿಗೆ ವ್ಯವಹರಿಸಲಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ, ಸಂತ್ರಸ್ತ ಭಾರತೀಯ ಮಹಿಳೆಯರು ತಾವೇ ನೇರವಾಗಿ ಸ್ಥಳೀಯ ಪೊಲೀಸರು/ ಇತರ ಅಧಿಕಾರಿಗಳಿಂದ ಸಹಾಯವನ್ನು ಅಪೇಕ್ಷಿಸಬಹುದು/ ಕೇಳಬಹುದು. |
| 11. | ಸಾಗರೋತ್ತರ ಭಾರತೀಯ ಪತಿಯಿಂದ ಪತ್ನಿಯ ವಿರುದ್ಧ ಮಗುವಿನ ಅಪಹರಣದ ಆಪಾದನೆ. | ಸಾಮಾನ್ಯವಾಗಿ ಮಗುವು ಏಕಾಂಗಿಯಾಗಿ ಅಥವ ಒಬ್ಬ ಪೋಷಕರೊಡನೆ ಪ್ರಯಾಣ ಮಾಡುವಾಗ ಕೆನಡದ ವಲಸೆ ಅಧಿಕಾರಿಗಳು ಇನ್ನೊಬ್ಬ ಪೋಷಕರ ಒಪ್ಪಿಗೆ ಪತ್ರವನ್ನು ಕೇಳುತ್ತಾರೆ. ಅಪ್ರಾಪ್ತ ವಯಸ್ಸಿನ ಮಗುವಿಗೆ ಭಾರತೀಯ ವೀಸಾ ನೀಡುವಾಗ 'ಅಂತಾರಾಷ್ಟ್ರೀಯ ಮಾನವ ಕಾಳಜಿ' (HCI-Human Concern International) ಸಂಸ್ಥೆಗೂ ಸಹ ಇಬ್ಬರೂ ಪೋಷಕರ ಒಪ್ಪಿಗೆ ಪತ್ರಗಳು ಬೇಕಾಗುತ್ತವೆ. ತಾಯಿಯು ತನ್ನ ಅಪ್ರಾಪ್ತ ವಯಸ್ಸಿನ ಮಗುವನ್ನು ಭಾರತಕ್ಕೆ ಕದ್ದೊಯ್ಯಲು ಪ್ರಯತ್ನಿಸಿದರೆ ಆಕೆಯು ಕೆನಡಿಯನ್ ಪೌರತ್ವ ಹೊಂದಿದ್ದರೂ, ಕೆನಡದ ಅಧಿಕಾರಿಗಳು ನ್ಯಾಯಾಲಯದಲ್ಲಿ ದಾವೆ ಹೂಡುತ್ತಾರೆ ಮತ್ತು ಸಂಬಂಧಪಟ್ಟ ವಿದೇಶೀ ಅಧಿಕಾರಿಗಳೊಂದಿಗೆ ಹುರುಪಿನಿಂದ ಅದರ ಬಗ್ಗೆ ಅನುಸರಣೆ ಮಾಡುತ್ತಾರೆ. ಅಂತಹ ವಿಷಯಗಳ ಬಗ್ಗೆ ಅವರು ಭಾರತೀಯ ದೂತಾವಾಸವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. |
| 12. | ಪತಿಯು ವಿದೇಶದಲ್ಲಿ ಮಕ್ಕಳೊಂದಿಗೆ ವಾಸವಿರುವಾಗ ಭಾರತೀಯ ಮಹಿಳಾ ಪತ್ನಿಯು ಮಕ್ಕಳ ಜವಾಬ್ದಾರಿ ಅಪೇಕ್ಷಿಸಿದರೆ? | ಸಂತ್ರಸ್ತ ಭಾರತೀಯ ಪತ್ನಿಯು ಸ್ಥಳೀಯ ಕೆನಡದ ನ್ಯಾಯಾಲಯದ ಸಹಾಯವನ್ನು ಕೋರಬೇಕಾಗಿ ಬರಬಹುದು. ಭಾರತೀಯ ಪೌರತ್ವ ಹೊಂದಿರುವಂತಹ ತಾಯಿಗೂ ಸಹ (ಕೆನಡದ ಪೌರತ್ವ ಹೊಂದಿರುವ) ಮಗುವನ್ನು ವಶಕ್ಕೆ ಕೊಡಬಹುದು. |
| 13. | ವಿದೇಶದಲ್ಲಿ ಪತ್ನಿಯ ಅನುಪಸ್ಥಿತಿಯಲ್ಲಿ ಆಕೆಯ ವಿರುದ್ಧ ತೀರ್ಪು/ ವಿಚ್ಛೇದನ. | ಕೆನಡದ ಪ್ರಜೆಗಳಿಗೆ ಅನುಕೂಲವಾಗುವಂತಹ ಏಕ ಪಕ್ಷೀಯ ನಿರ್ಧಾರಗಳನ್ನು ಕೆನಡದ ನ್ಯಾಯಾಲಯಗಳು ತೆಗೆದುಕೊಂಡಿರುವ |

| | | |
|---|---|---|
| | | ಹಲವಾರು ಸಂದರ್ಭಗಳಿವೆ. ಆದರೆ, ನ್ಯಾಯಾಲಯದ ವಿಚಾರಣೆಯಲ್ಲಿ ಭಾರತೀಯ ಮಹಿಳೆಯನ್ನು ಯಾರೂ ಪ್ರತಿನಿಧಿಸದಿದ್ದಾಗ ಮಾತ್ರ ಹೀಗಾಗುತ್ತದೆ. |
| 14. | ಅಂತಹ ವಿಷಯಗಳಲ್ಲಿ ಮೊಕದ್ದಮೆ ಹೂಡಲು ಎಷ್ಟು ಹಣ ಬೇಕಾಗುತ್ತದೆ? | ಕೆನಡದಲ್ಲಿ ನ್ಯಾಯಾಲಯದ ವೆಚ್ಚವು ಅಗಾಧವಾಗಿದ್ದು, ಒಟ್ಟು ವೆಚ್ಚವು ದಾವೆಯಿಂದ ದಾವೆಗೆ ವ್ಯತ್ಯಾಸವಾಗುತ್ತದೆ. ವಿಚ್ಛೇದನ ದಾವೆಯು ಪರಸ್ಪರ ಒಪ್ಪಂದದ ಮೇರೆಗೆ ಇದ್ದರೆ ಅದು 6 ತಿಂಗಳಿಂದ 1 ವರ್ಷದೊಳಗೆ 2,000 ಕೆನಡದ ಡಾಲರುಗಳಷ್ಟು ವೆಚ್ಚದಲ್ಲಿ ತೀರ್ಮಾನವಾಗಬಹುದು. ಆದರೆ, ಅದು ಪ್ರತಿವಾದಿಯಿಂದ ಪ್ರಶ್ನಿತವಾಗಿ, ವಿಚಾರಣೆಗೆ ಹೋದರೆ ನ್ಯಾಯಾಲಯದ ವೆಚ್ಚವು 50,000 ಕೆನಡದ ಡಾಲರು ಅಥವ ಇನ್ನೂ ಹೆಚ್ಚಾಗಬಹುದು. |
| 15. | ವಿದೇಶೀ ಸರ್ಕಾರಗಳಿಗೆ ಭಾರತ ಸರ್ಕಾರವು ಸಾಗರೋತ್ತರ ಭಾರತೀಯ ಪತಿಯ ಬಗ್ಗೆ ಕಳಿಸುವ 'ಎಚ್ಚರಿಕೆ ಸುತ್ತೋಲೆ'. | ನ್ಯಾಯಾಲಯದ ಆದೇಶಗಳು/ ಸಮನ್ಸುಗಳು/ ಕಾರಣ ಕೇಳಿ ಕೊಡುವ ನೋಟೀಸುಗಳನ್ನೂ ಒಳಗೊಂಡಂತಹ ನ್ಯಾಯಾಲಯದ ದಾಖಲೆಗಳನ್ನು ಕೆನಡದಲ್ಲಿ ಜಾರಿ ಮಾಡುವ ಬಗ್ಗೆ ಹೇಳುವುದಾದರೆ, ಅದು ಕ್ರಿಮಿನಲ್ ಪ್ರೊಸೀಜರ್ ಕೋಡಿನ (105ನೇ ಸೆಕ್ಷನ್) ಶಾಸನಾತ್ಮಕ ನಿಬಂಧನೆಗಳ ಪ್ರಕಾರ, ನವದೆಹಲಿಯಲ್ಲಿರುವ ಗೃಹ ಸಚಿವಾಲಯವು ಅಂತಿಮಗೊಳಿಸಿರುವ ಮತ್ತು ಸೂಚನೆ ಮಾಡಿರುವ ಕೆನಡದೊಂದಿಗಿನ 'ಪರಸ್ಪರ ಕೊಡು–ಕೊಳುವಿಕೆ'ಯ ಆಧಾರದ ವ್ಯವಸ್ಥೆಗಳಿಂದ ನಿಯಂತ್ರಿಸಲ್ಪಡುತ್ತದೆ. ಕ್ರಿಮಿನಲ್ ವ್ಯಾಜ್ಯಗಳಿಗೆ ಪರಸ್ಪರ ಕಾನೂನು ನೆರವು ಕೇಳುವ ಮತ್ತು ಒದಗಿಸುವ ಸಂಪಾತ ಮತ್ತು ಕೇಂದ್ರೀಯ ಅಧಿಕಾರವಾದ ಗೃಹ ಸಚಿವಾಲಯವು ಎಲ್ಲಾ ರೀತಿಯ ಅಂತಹ ಕೋರಿಕೆಗಳನ್ನು ಸ್ವೀಕರಿಸುತ್ತದೆ, ಪರಿಶೀಲಿಸುತ್ತದೆ ಮತ್ತು ಒಟ್ಟಾವದಲ್ಲಿರುವ ಕೆನಡದ ನ್ಯಾಯಾಲಯ ಇಲಾಖೆಯೊಂದಿಗೆ ವಿಷಯವನ್ನು ಕುರಿತು ವ್ಯವಹರಿಸುವುದನ್ನೂ ಒಳಗೊಂಡಂತೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತದೆ. ಈ ನಿಟ್ಟಿನಲ್ಲಿನ ಸಮಗ್ರ ಮಾರ್ಗದರ್ಶಿ ಸೂತ್ರಗಳನ್ನು ಗೃಹ ಸಚಿವಾಲಯದ ಅಂತರ್ಜಾಲ ತಾಣ http://www.mha.nic.in ದಲ್ಲಿ ಕಾಣಬಹುದು. |
| 16. | ಸಾಗರೋತ್ತರ ಭಾರತೀಯ ಪತಿಯ ವಿರುದ್ಧ ಮೊಕದ್ದಮೆ ಹೂಡಲು ಭಾರತೀಯ ಮಹಿಳಾ ಪತ್ನಿಗೆ ವಿದೇಶೀ ಸರ್ಕಾರದಿಂದ ಕಾನೂನು ನೆರವು. | ಕೆನಡದಲ್ಲಿ ವಾಸಿಸುತ್ತಿದ್ದರೆ, ಸಂತ್ರಸ್ತ ಭಾರತೀಯ ಮಹಿಳೆಯರಿಗೆ ಸ್ಥಳೀಯ ಸರ್ಕಾರವು ಉಚಿತ ಕಾನೂನು ನೆರವನ್ನು ಒದಗಿಸುತ್ತದೆ. |
| 17. | ವಿದೇಶೀ ಸರ್ಕಾರ/ ನ್ಯಾಯಾಲಯಗಳಿಂದ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯ ಪರಿಗಣನೆ. | ಭಾರತದ ನ್ಯಾಯಾಲಯಗಳ ತೀರ್ಪುಗಳನ್ನು ಪರಸ್ಪರ ಕಾನೂನು ಸಹಕಾರ ಒಪ್ಪಂದದ ಅಡಿಯಲ್ಲಿ ಗೃಹ ಸಚಿವಾಲಯವು ಒಟ್ಟಾವದಲ್ಲಿರುವ ಕೆನಡದ ನ್ಯಾಯಾಲಯ ಇಲಾಖೆಗೆ ಮುಂದಿನ ಕ್ರಮಕೈಗೊಳ್ಳಲು ಕಳಿಸಿಕೊಟ್ಟಾಗ ಮಾತ್ರ ಅವುಗಳನ್ನು ಕೆನಡದ ನ್ಯಾಯಾಲಯಗಳು ಗಣನೆಗೆ ತೆಗೆದುಕೊಳ್ಳುತ್ತವೆ. |
| 18. | ವಿದೇಶದಲ್ಲಿ ನೆಲೆಸಿರುವ ಸಾಗರೋತ್ತರ ಭಾರತೀಯ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯ ಹೊರಡಿಸಿರುವ ಕರೆಸೆಲವು/ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ತಲುಪಿಸುವುದು. | ಕೆನಡದಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯ/ ಭಾರತ ಮೂಲದ ವ್ಯಕ್ತಿ ಸಂಗಾತಿಯ ವಿರುದ್ಧ ಭಾರತೀಯ ನ್ಯಾಯಾಲಯವು ಹೊರಡಿಸಿರುವ ಸಮನ್ಸ್/ ಬಂಧನ ವಾರಂಟುಗಳನ್ನು ಆತನಿಗೆ ಜಾರಿ ಮಾಡಲಾಗುವುದಿಲ್ಲ. ಅವುಗಳನ್ನು ಪರಸ್ಪರ ಕಾನೂನು ಸಹಕಾರ ಒಪ್ಪಂದದ ಅಡಿಯಲ್ಲಿ ಗೃಹ ಸಚಿವಾಲಯವು ಒಟ್ಟಾವದಲ್ಲಿರುವ ಕೆನಡದ ನ್ಯಾಯಾಲಯ ಇಲಾಖೆಗೆ ಕಳಿಸಿಕೊಡದಿದ್ದರೆ, ಕೆನಡದ ನ್ಯಾಯಾಲಯಗಳು ಮತ್ತು ಇತರ ಅಧಿಕಾರಿಗಳು ಅಂತಹ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. |
| 19. | ಸಾಗರೋತ್ತರ ಭಾರತೀಯ ಪತಿಯು ತನ್ನ ಪತ್ನಿಯನ್ನು ಭಾರತದಲ್ಲೇ ತ್ಯಜಿಸಿದ್ದರೂ/ ಅಪಮಾನಿಸಿದ್ದರೂ ಸಂತ್ರಸ್ತೆ ಭಾರತೀಯ ಮಹಿಳಾ ಪತ್ನಿಯ ವೀಸಾವನ್ನು ಮುಂದುವರಿಸುವುದು (ಅವಲಂಬಿತಳೆಂದು). | ಭಾರತ ಮೂಲದ ವ್ಯಕ್ತಿ/ ಅನಿವಾಸಿ ಭಾರತೀಯ ಪತಿಯು ಹಾಗೆ ಕೋರಿಕೆಯನ್ನು ಮಂಡಿಸದಿದ್ದರೆ, ಆಕೆಯ ವೀಸಾವನ್ನು ವಿಸ್ತರಿಸಲಾಗುವುದಿಲ್ಲ. |
| 20. | ಸಾಗರೋತ್ತರ ಭಾರತೀಯ ಪತಿಯಿಂದ ಆತನ ಭಾರತೀಯ ಮಹಿಳಾ ಪತ್ನಿಗೆ ಜೀವನಾಂಶ ಕೊಡಿಸುವುದು. | ಇಂತಹ ಬಹುತೇಕ ಪ್ರಕರಣಗಳಲ್ಲಿ ಭಾರತದಲ್ಲಿರುವ ಸಂತ್ರಸ್ತೆ ಪತ್ನಿಗೆ ಭಾರತ ಮೂಲದ ವ್ಯಕ್ತಿ/ ಅನಿವಾಸಿ ಭಾರತೀಯ ಪತಿಯಿಂದ ಯಾವ ಜೀವನಾಂಶವೂ ಸಿಗುವುದಿಲ್ಲ. ಒಂದು ಪಕ್ಷ ಆಕೆ ಏನಾದರೂ ಕೆನಡದಲ್ಲಿ ವಾಸವಿದ್ದರೆ, ಆಕೆಯು ಜೀವನಾಂಶ ವಿಚಾರಣಾ ವ್ಯಾಜ್ಯವನ್ನು ಕೆನಡದ ಸರ್ವೋಚ್ಚ ನ್ಯಾಯಾಲಯ (ಕುಟುಂಬ ವಿಭಾಗ)ಕ್ಕೆ ಒಯ್ಯಬಹುದು. |

ಅನಿವಾಸಿ ಭಾರತೀಯರೊಡನೆ ವಿವಾಹ ವ್ಯಾಜ್ಯಗಳಲ್ಲಿ ಸಿಲುಕಿರುವ ಮಹಿಳೆಯರಿಗೊಂದು ಶಿಷ್ಟ ಕಾರ್ಯ ವಿಧಾನ (Standard Operating Procedure)

1. ಸಾಗರೋತ್ತರ ಭಾರತೀಯರನ್ನು ವಿವಾಹವಾದ ಭಾರತೀಯ ಮಹಿಳೆಯರನ್ನೊಳಗೊಂಡಂತೆ ಭಾರತೀಯ ನಾಗರಿಕರು ಎದುರಿಸುತ್ತಿರುವ ವೈವಾಹಿಕ ಸಮಸ್ಯೆಗಳನ್ನು ಕುರಿತಂತೆ ನಿಯಮಿತವಾಗಿ ದೂರುಗಳು ಈ ಸಚಿವಾಲಯಕ್ಕೆ ಬರುತ್ತಿವೆ. ತಮ್ಮ ಅನಿವಾಸಿ ಭಾರತೀಯ/ ಭಾರತೀಯ ಮೂಲದ ಸಂಗಾತಿಗಳಿಂದ ದೌರ್ಜನ್ಯಕ್ಕೊಳಗಾದ/ ಮೋಸಹೋದ/ ಪರಿತ್ಯಕ್ತರಾದ ಭಾರತೀಯ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಲು ವಿದೇಶಾಂಗ ಸಚಿವಾಲಯವು ಸ್ವಯಂಸಿದ್ಧವಾಗಿ ಹಲವಾರು ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿದೆ.
2. ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಬರುವ ಬಹುತೇಕ ದೂರುಗಳು ಈ ಕೆಳಗಿನ ವಿವಾದಗಳಿಗೆ ಸಂಬಂಧಿಸಿರುತ್ತವೆ:

(ಅ) ವಿವಾಹಾನಂತರ/ ಮಧುಚಂದ್ರಾನಂತರ ಭಾರತದಲ್ಲಿ ಅಥವ ವಿದೇಶದಲ್ಲಿ ಸಾಗರೋತ್ತರ ಭಾರತೀಯ ಸಂಗಾತಿಯು ಪತ್ನಿಯನ್ನು ತ್ಯಜಿಸಿರುವುದು,

(ಆ) ವಿದೇಶದಲ್ಲಿರುವ ಪತಿಯನ್ನು ಸೇರಿಕೊಳ್ಳುವ ಮೂಲಕ ದಾಂಪತ್ಯ ಹಕ್ಕಿನ ಪುನಃಸ್ಥಾಪನೆ ಮಾಡಲು ಕೋರಿಕೆ,

(ಇ) ಸಂಗಾತಿ ಮತ್ತು ಆತನ ಕುಟುಂಬದವರಿಂದ ಕಿರುಕುಳ ಮತ್ತು ದೌರ್ಜನ್ಯ, ವರದಕ್ಷಿಣೆಗಾಗಿ ಪೀಡನೆ,

(ಈ) ವಿದೇಶದಲ್ಲಿರುವ ಪತಿಯನ್ನು ಹುಡುಕಲು ಅಥವ ಆತನೊಂದಿಗೆ ಸಂಪರ್ಕ ಕಲ್ಪಿಸಲು ಸಹಾಯಕ್ಕಾಗಿ ಕೋರಿಕೆ,

(ಉ) ಭಾರತದ ನ್ಯಾಯಾಲಯದ ವಿಚಾರಣೆಗಾಗಿ ಹಾಜರಾಗಲು ಕೊಟ್ಟ ನಿರೂಪ (ಸಮನ್ಸ್), ಬಂಧನ ವಾರಂಟು ಮುಂತಾದವುಗಳನ್ನು ಜಾರಿ ಮಾಡಲು ಸಹಾಯಕ್ಕಾಗಿ ಕೋರಿಕೆ,

(ಊ) ಸಾಗರೋತ್ತರ ಭಾರತೀಯ ಸಂಗಾತಿಯ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಥವ ರದ್ದು ಮಾಡಲು ಕೋರಿಕೆ,

(ಋ) ಪತ್ನಿಯಾದ ತನ್ನನ್ನು ಸೇರಿಕೊಳ್ಳಲು ಅನುವಾಗುವಂತೆ ವಿದೇಶದಲ್ಲಿರುವ ಪತಿಯನ್ನು ಅಲ್ಲಿಂದ ಗಡಿಪಾರು ಮಾಡಿ, ಭಾರತದ ವಶಕ್ಕೆ ಒಪ್ಪಿಸಲು ಕೋರಿಕೆ,

(ೠ) ಜೀವನಾಂಶಕ್ಕಾಗಿ, ವಿಚ್ಛೇದನಕ್ಕಾಗಿ ಅಥವ ಮಕ್ಕಳ ಸುಪರ್ದಿಗಾಗಿ ಕೋರಿಕೆ.

3. ಕೆಳಗೆ ತೋರಿಸಿರುವಂತೆ ಲಭ್ಯವಿರುವ ಕಾನೂನಿನ ಆಸರೆಗಳ ಮತ್ತು ಪರಿಹಾರ ಅರಸುವ ವಿಧಾನಗಳನ್ನು ಒದಗಿಸುವ ಮೂಲಕ ಸಂತ್ರಸ್ತ ಭಾರತೀಯ ನಾಗರಿಕರಿಗೆ ಸಹಾಯ ನೀಡುವಂತಹ ಪರಿಹಾರಗಳನ್ನು ಕೊಡಲು ಈ ಸಚಿವಾಲಯವು ಶಿಷ್ಟ ಕಾರ್ಯವಿಧಾನದ ಚೌಕಟ್ಟನ್ನು ರೂಪಿಸಿದೆ:

(ಅ) ದೂರವಾಗಿರುವ ಅನಿವಾಸಿ ಭಾರತೀಯ ಸಂಗಾತಿಯ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳುವುದು/ ರದ್ದು ಮಾಡುವುದು,

1967ರ ಪಾಸ್‌ಪೋರ್ಟ್ ಕಾಯಿದೆಯ ಸೆಕ್ಷನ್ 10(3)ಇ ಪ್ರಕಾರ ಪಾಸ್‌ಪೋರ್ಟ್ ಹೊಂದಿದ ಆರೋಪಿತ ವ್ಯಕ್ತಿಗೆ ಕಾರಣ ಕೇಳಿ ನೋಟೀಸು ಕೊಡುವುದೂ ಸೇರಿದಂತೆ, ಕಾನೂನಿನ ಪ್ರಕಾರ ನಿಗದಿಪಡಿಸಿರುವ ವಿಧಾನವನ್ನನುಸರಿಸಿದ ನಂತರ ಪಾಸ್‌ಪೋರ್ಟ್ ಪ್ರಾಧಿಕಾರವು ಆರೋಪಿಯ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ/ ರದ್ದು ಮಾಡುತ್ತದೆ. ಒಂದು ಪಕ್ಷ ಮೇಲೆ ತಿಳಿಸಿರುವ ಕಾನೂನು ಪ್ರಕ್ರಿಯೆಗಳ ಪ್ರಕಾರ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳುವ/ ರದ್ದು ಮಾಡುವ ನಿರ್ಧಾರವನ್ನು ಪಾಸ್‌ಪೋರ್ಟ್ ಪ್ರಾಧಿಕಾರವು ತೆಗೆದುಕೊಂಡರೆ, ಈ ಸಚಿವಾಲಯದ ಪ್ರಕಟಣೆ ಸಂಖ್ಯೆ ಜಿ.ಎಸ್.ಆರ್. 570(ಇ) ದಿ.25/08/1993ರ ಪ್ರಕಾರ ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯದಿಂದ ನಿರಾಕ್ಷೇಪಣಾ ಪತ್ರ ಪಡೆದರೆ ಮಾತ್ರವೇ ಅದನ್ನು ಹಿಂತಿರುಗಿಸಬಹುದು ಅಥವ ಪುನಃ ನೀಡಬಹುದು.

ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳುವುದು/ ರದ್ದು ಮಾಡುವುದು : 1967ರ ಪಾಸ್‌ಪೋರ್ಟ್ ಕಾಯಿದೆಯ ಸೆಕ್ಷನ್ 10(3)ಎಚ್ ಒಂದು ಬಲವಾದ ಶಾಸನವಾಗಿದ್ದು, ದೂರಿಗೆ ತಕ್ಕಂತೆ ಸಮನ್ಸ್ ಅಥವ ಜಾಮೀನು ಸಹಿತ/ ಜಾಮೀನು ರಹಿತ ವಾರಂಟಿಗೆ ಸಂಬಂಧಿಸಿದ್ದಲ್ಲಿ, ಆಗ ಪಾಸ್‌ಪೋರ್ಟ್ ಪ್ರಾಧಿಕಾರವು ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳುವುದು/ ರದ್ದು ಮಾಡುವುದನ್ನು ಜಾರಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಆದಾಗ್ಯೂ, ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಲು/ ರದ್ದು ಮಾಡಲು/ ಹಿಂಪಡೆಯಲು ನ್ಯಾಯಾಲಯದ ನಿರ್ದಿಷ್ಟ ಆದೇಶವಿದ್ದರೆ ಅಥವ ಪಾಸ್‌ಪೋರ್ಟನ್ನು ಹೊಂದಿರುವ ವ್ಯಕ್ತಿಯು ವಿದೇಶಕ್ಕೆ ತೆರಳದಂತೆ ನಿರ್ಬಂಧ ವಿಧಿಸಿದ್ದರೆ, ಆಗ ಪಾಸ್‌ಪೋರ್ಟ್ ಪ್ರಾಧಿಕಾರವು ಪಾಸ್‌ಪೋರ್ಟನ್ನು ನೇರವಾಗಿ ಮುಟ್ಟುಗೋಲು ಹಾಕಿಕೊಳ್ಳುತ್ತದೆ/ ರದ್ದು ಮಾಡುತ್ತದೆ.

1967ರ ಪಾಸ್‌ಪೋರ್ಟ್ ಕಾಯಿದೆಯ ಸೆಕ್ಷನ್ 10ರ ಅಡಿಯಲ್ಲಿ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಲು ಅರ್ಜಿಯನ್ನು ಎಲ್ಲಾ ಸಂಬಂಧಿತ ದಾಖಲೆಗಳೊಡನೆ ಪಾಸ್‌ಪೋರ್ಟ್ ನೀಡಿದ ಅಧಿಕಾರಿಗೆ ಸಲ್ಲಿಸಬೇಕು.

(ಆ) ವ್ಯಕ್ತಿಯನ್ನು ಕೈವಶಕ್ಕೆ ಕೊಡುವ ವಿಧಾನಗಳು :

i. ಆಪಾದಿತನು ತಲೆತಪ್ಪಿಸಿಕೊಂಡಿದ್ದರೆ ಅಥವ ಶಿಕ್ಷೆಯಿಂದ ಪಾರಾಗಲು ಪಲಾಯನ ಮಾಡಿದ್ದರೆ, ಅಂತಹ ವ್ಯಕ್ತಿಯ ವಿರುದ್ಧ ಪೊಲೀಸರು ದೂರು ದಾಖಲಿಸಿಕೊಂಡು, ಸೂಕ್ತ ನ್ಯಾಯಾಲಯದಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಿದ್ದು, ಸದರಿ ನ್ಯಾಯಾಲಯವು ಹೂಡಿದ ದಾವೆಯನ್ನು ಪರಿಗಣಿಸಿ, ದಾಖಲಿಸಿದ ದೂರುಪಟ್ಟಿಯಲ್ಲಿ ಒದಗಿಸಿರುವ ಸಾಕ್ಷ್ಯಾಧಾರಗಳ ಮೇಲೆ ಸದರಿ ನ್ಯಾಯಾಲಯವು ಆರೋಪಿ/ ತಲೆತಪ್ಪಿಸಿಕೊಂಡಿರುವಾತನು ವಿಚಾರಣೆ

ಎದುರಿಸಬೇಕೆಂದು ಆದೇಶ/ ನಿರ್ದೇಶನಗಳನ್ನು ನೀಡಿದ್ದರೆ ಮತ್ತು ಆಪಾದಿತನು ಪ್ರಸ್ತುತ ದಾವೆಯ ವಿಚಾರಣೆಗಾಗಿ ಹಾಜರಿರಬೇಕೆಂದು ಅಪೇಕ್ಷಿಸಿದ್ದಲ್ಲಿ ಆಪಾದಿತನನ್ನು ಕೈವಶಕ್ಕೆ ಕೊಡಬೇಕೆಂದು ಕೋರಬಹುದು. ಇದರ ಜೊತೆಗೆ, ಒಬ್ಬ ವ್ಯಕ್ತಿಯನ್ನು ಕೈವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ಕೋರಲು ಆತನ ವಿರುದ್ಧ ಹೊರಡಿಸಿರುವ ಗಡುವಿರದ ಜಾಮೀನುರಹಿತ ವಾರೆಂಟನ್ನು ಸಹ ಉಪಯೋಗಿಸಿಕೊಳ್ಳಬಹುದು.

ii. 1962ರ ಕೈವಶ ಮಾಡುವ ಕಾಯಿದೆ ಮತ್ತು ಸಂಬಂಧಿಸಿದ ದೇಶದೊಂದಿಗೆ ಮಾಡಿಕೊಂಡಿರುವ ಕೈವಶ ಒಪ್ಪಂದದಲ್ಲಿ ಅಳವಡಿಸಿರುವ ಅಂಶಗಳಿಗನುಗುಣವಾಗಿ ಯಾವುದೇ ವ್ಯಕ್ತಿಯ ವಿರುದ್ಧ ಕೈವಶ/ ಗಡಿಪಾರು ಕ್ರಮ ಜರುಗಿಸಬಹುದು. ಈ ವಿಷಯದಲ್ಲಿ ಮಾಡಿರುವ ಅಪರಾಧವು ಒಪ್ಪಂದದ ಅಡಿಯಲ್ಲಿ ಕೈವಶ ಕಾಯಿದೆಗನುಸಾರವಾಗಿ ಅಪರಾಧವೆಂದು ಪರಿಗಣಿತವಾದಲ್ಲಿ ಮಾತ್ರ ಕೈವಶ ಕೋರಿಕೆಯನ್ನು ಮುಂದಿಡಬಹುದೆಂಬ ವಿಷಯವನ್ನು ಇಲ್ಲಿ ಉಲ್ಲೇಖಿಸಬಹುದು. ನೋಡಿ ಜಾಲತಾಣ :
http://www.mea.gv.in/Images/attach/Extradition_Act_1962.pdf

iii. ಪ್ರಸ್ತುತ ಭಾರತವು 41 ದೇಶಗಳೊಂದಿಗೆ ಕೈವಶ ಒಪ್ಪಂದವನ್ನು ಮಾಡಿಕೊಂಡಿದ್ದು, 9 ದೇಶಗಳೊಂದಿಗೆ ಕೈವಶ ಪ್ರಕ್ರಿಯೆಯ ವ್ಯವಸ್ಥೆಗಳನ್ನು ಮಾಡಿಕೊಂಡಿದೆ. ನೋಡಿ ಜಾಲತಾಣ : http://www.mea.gv.in/leta.htm

iv. ಕೈವಶ ಕ್ರಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ "ಜಂಟಿ ಕಾರ್ಯದರ್ಶಿ, ದೂತಾವಾಸ, ರಹದಾರಿ ಮತ್ತು ವೀಸಾ ವಿಭಾಗ (Consulate, Passport and Visa Division – CPV Division), ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಪಟಿಯಾಲ ಹೌಸ್ ಉಪಕಟ್ಟಡ, ತಿಲಕ್ ಮಾರ್ಗ, ನವದೆಹಲಿ, ದೂರವಾಣಿ: 011–2338 7104, 011–2338 4529, ಮಿಂಚಂಚೆ : jscpv@mea.gv.in ಫ್ಯಾಕ್ಸ್ : 011–2378 2821" ಇವರು ಕೇಂದ್ರೀಯ ಪ್ರಾಧಿಕಾರಿಯಾಗಿರುತ್ತಾರೆ.

(ಇ) <u>ಸಹಾಯ (ಮದದ್ – MADAD)</u> : ದೂತಾವಾಸ ಸೇವಾ ನಿರ್ವಹಣಾ ವ್ಯವಸ್ಥೆ (ಸಿ.ಎಸ್.ಎಂ.ಎಸ್. – Consulate Services Maintenance System) :

ವಿದೇಶಗಳಲ್ಲಿರುವ ಭಾರತೀಯ ಆಯೋಗ/ ಠಾಣಾ ಕಚೇರಿಗಳು ನೀಡುವ ದೂತಾವಾಸ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸಿಕೊಳ್ಳಲು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ದೂತಾವಾಸ ಸೇವಾ ನಿರ್ವಹಣಾ ವ್ಯವಸ್ಥೆಗಾಗಿ ಮದದ್ (MADAD) ಎಂಬ ಜಾಲತಾಣವನ್ನು ಅಭಿವೃದ್ಧಿ ಪಡಿಸಿದೆ. ವೈವಾಹಿಕ ವ್ಯಾಜ್ಯಗಳು ಮತ್ತು ಇತರ ಸಂಬಂಧಿತ ಸಮಸ್ಯೆಗಳ ದೂರುಗಳನ್ನೆದುರಿಸುತ್ತಿರುವವರು ಸಹಾಯಕ್ಕಾಗಿ ಹೆಸರು ನೋಂದಾಯಿಸಿಕೊಳ್ಳಲು ಈ ಜಾಲತಾಣವನ್ನು ಉಪಯೋಗಿಸಿಕೊಳ್ಳಬಹುದು. ವಿದೇಶಗಳಲ್ಲಿರುವ ಭಾರತೀಯ ಆಯೋಗ/ ಠಾಣಾ ಕಚೇರಿಗಳ ವಿಳಾಸ ಮತ್ತು ಸಂಪರ್ಕ ವಿವರಗಳನ್ನು ಈ ಜಾಲತಾಣದಲ್ಲಿ ನೋಡಬಹುದು : http://www.mea.gv.in/indian-missins-abrad.htm.

(ಈ) : **<u>ತಮ್ಮ ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿ ಪತಿಯಿಂದ ಪರಿತ್ಯಕ್ತರಾಗಿರುವ ಭಾರತೀಯ ಮಹಿಳೆಯರಿಗೆ ಕಾನೂನು ಹಾಗೂ ಆರ್ಥಿಕ ಸಹಾಯ</u>** : ವಿದೇಶಗಳಲ್ಲಿರುವ ಭಾರತೀಯ ಠಾಣೆಗಳು ನಿಗದಿಪಡಿಸಿ, ಪಟ್ಟಿಮಾಡಿರುವ ವಕೀಲರು ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಭಾರತೀಯ ಆಯೋಗ/ ಠಾಣೆಗಳ ಸಲಹೆ ಮತ್ತು ಕಾನೂನು ಸೇವೆಗಳನ್ನು ಪಡೆಯಲು ಅನುವಾಗುವಂತೆ ತಮ್ಮ ಸಾಗರೋತ್ತರ ಭಾರತೀಯ ಪತಿಯಿಂದ ದೌರ್ಜನ್ಯಕ್ಕೊಳಗಾದ/ ಪರಿತ್ಯಕ್ತರಾದ ಭಾರತೀಯ ಮಹಿಳೆಯರಿಗೆ ಕಾನೂನು ಮತ್ತು ಆರ್ಥಿಕ ನೆರವನ್ನು ಒದಗಿಸಲು ಸಚಿವಾಲಯವು ಒಂದು ಯೋಜನೆಯನ್ನು ಕಾರ್ಯಾರಂಭ ಮಾಡಿದೆ. ಆಪತ್ತಿನಲ್ಲಿರುವ ಭಾರತೀಯ ಮೂಲದ ಮಹಿಳೆಯರಿಗೆ ಉಚಿತವಾಗಿ ಸಲಹೆ ಮತ್ತು ಕಾನೂನು ಸಲಹೆಗಳನ್ನು ಒದಗಿಸುವುದೇ ಈ ಯೋಜನೆಯ ಗುರಿ.

ಈ ಯೋಜನೆಯ ಅಡಿಯಲ್ಲಿ ನೆರವು ಪಡೆಯಲು ಇರಬೇಕಾದ ಅರ್ಹತೆಗಳು :

i. ಅಂತಹ ಭಾರತೀಯ ಮಹಿಳೆಯು ಭಾರತೀಯ ಪಾಸ್‌ಪೋರ್ಟ್ ಹೊಂದಿರಬೇಕು.
ii. ಸಾಗರೋತ್ತರ ಭಾರತೀಯ ಅಥವ ವಿದೇಶೀಯನೊಂದಿಗೆ ಭಾರತದಲ್ಲಿಯಾಗಲೀ, ವಿದೇಶದಲ್ಲಿಯಾಗಲೀ ಮಹಿಳೆಯ ವಿವಾಹವು ವಿಧ್ಯುಕ್ತವಾಗಿ ಜರುಗಿರಬೇಕು.
iii. ವಿವಾಹವಾದ 15 ವರ್ಷಗಳೊಳಗೆ ಭಾರತದಲ್ಲಿ ಅಥವ ವಿದೇಶದಲ್ಲಿ ಮಹಿಳೆಯು ಪತಿಯಿಂದ ಪರಿತ್ಯಕ್ತಗೊಂಡಿರಬೇಕು.
iv. ವಿವಾಹವಾದ 15 ವರ್ಷಗಳೊಳಗೆ ಮಹಿಳೆಯ ಸಾಗರೋತ್ತರ ಭಾರತೀಯ/ ವಿದೇಶೀ ಪತಿಯು ವಿಚ್ಛೇದನದ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭಿಸಿರಬೇಕು.
v. ವಿವಾಹವಾದ 20 ವರ್ಷಗಳೊಳಗೆ ಮಹಿಳೆಯ ಅನುಪಸ್ಥಿತಿಯಲ್ಲಿ ಸಾಗರೋತ್ತರ ಭಾರತೀಯ/ ವಿದೇಶೀ ಪತಿಯು ವಿವಾಹ ವಿಚ್ಛೇದನವನ್ನು ಪಡೆದುಕೊಂಡಿರಬೇಕು ಮತ್ತು ಆಕೆಯು ಜೀವನಾಂಶ ಮತ್ತು ಬಾಳ್ವೆಪಡಿಗಾಗಿ ದಾವೆಯನ್ನು ಹೂಡಿರಬೇಕು.
vi. ಈ ಯೋಜನೆಯ ಅಡಿಯಲ್ಲಿ ಸೌಲಭ್ಯವನ್ನು ಪಡೆಯಲು ಉದ್ದೇಶಿಸಿರುವ ಮಹಿಳೆಯು ಯಾವ ದೇಶದಲ್ಲಿ ನೆಲೆಸಿದ್ದಾಳೆಂಬುದು ಇಲ್ಲಿ ಪ್ರಕೃತವಾಗುವುದಿಲ್ಲ (ಯಾವ ದೇಶದಲ್ಲಿ ನೆಲೆಸಿದ್ದರೂ ಅರ್ಹ ಮಹಿಳೆಗೆ ಈ ಸೌಲಭ್ಯವು ದೊರೆಯುತ್ತದೆ).
vii. ಅರ್ಜಿದಾರರ ಆರ್ಥಿಕ ಅವಶ್ಯಕತೆಯ ಆಧಾರದ ಮೇಲೆ ಅರ್ಜಿದಾರರ ಆದ್ಯತೆಯು ನಿರ್ಧರಿಸಲ್ಪಡುವುದು.

ಮಹಿಳೆಯ ಪತಿಯು ನೆಲೆಸಿರುವ ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ರಾಯಭಾರ/ ದೂತಾವಾಸ ಕಚೇರಿಯ ಮೂಲಕ ಕಾನೂನು/ ಆರ್ಥಿಕ ನೆರವನ್ನು ಒದಗಿಸಲಾಗುತ್ತದೆ. ಈ ಯೋಜನೆಯ ಮಾರ್ಗದರ್ಶಿ ಸೂತ್ರಗಳು ಮತ್ತು ನೆರವಿಗಾಗಿ ಹಾಕುವ ವಿಧ್ಯುಕ್ತ ಅರ್ಜಿ ನಮೂನೆಯು http://www.mea.gv.in/legal-and-financial-assistance.htm ಜಾಲತಾಣದಲ್ಲಿ ಲಭ್ಯವಿವೆ.

(ಉ) : **ಆಪತ್ತಿನಲ್ಲಿ ಸಿಲುಕಿರುವ ಭಾರತೀಯ ನಾಗರಿಕರಿಗೆ ನೆರವು ಒದಗಿಸಲು ಇರುವ ಇತರ ಮಾನದಂಡಗಳು** :

i. ತಮ್ಮ ಸಾಗರೋತ್ತರ ಭಾರತೀಯ ಪತಿಯಿಂದ ಪರಿತ್ಯಕ್ತರಾದ ಅಥವ ಮೋಸಕ್ಕೊಳಗಾದ ಮಹಿಳೆಯರನ್ನೊಳಗೊಂಡಂತೆ ಆಪತ್ತಿಗೊಳಗಾಗಿರುವ ಭಾರತೀಯ ನಾಗರಿಕರಿಗೆ ಆಯಾ ದೇಶಗಳಲ್ಲಿರುವ ಭಾರತೀಯ ಆಯೋಗಗಳು ಆರಂಭಿಕ ಕಾನೂನು ನೆರವು, ಆಶ್ರಯ, ಊಟ ಮತ್ತು ವಸತಿ ಮುಂತಾದುವುಗಳನ್ನು 'ಭಾರತೀಯ ಸಮುದಾಯ ಹಿತರಕ್ಷಣಾ ನಿಧಿ'ಯಿಂದ ನೀಡುತ್ತವೆ.

ii. ಭಾರತೀಯ ಆಯೋಗಗಳು ನಡೆಸುವ ನಿಯೋಜಿತ ಮುಕ್ತ ಸಭೆಗಳಲ್ಲಿ ಮಹಿಳೆಯರನ್ನೂ ಒಳಗೊಂಡಂತೆ, ಆಪತ್ತಿಗೊಳಗಾಗಿರುವ ಯಾವುದೇ ಭಾರತೀಯ ನಾಗರಿಕರು ನೆರವು ಮತ್ತು ಮಾರ್ಗದರ್ಶನಕ್ಕಾಗಿ ಆಯೋಗಗಳನ್ನು ಸಂಪರ್ಕಿಸಬಹುದು

iii. ಸಾಗರೋತ್ತರ ಭಾರತೀಯ ಪತಿಯಂದಿರಿಗೆ ನ್ಯಾಯಾಂಗ ಸಮನ್ಸುಗಳನ್ನು ಜಾರಿ ಮಾಡಲು ಇರುವ ವಿಧಾನಗಳು, ವ್ಯವಸ್ಥೆಗಳ ಮಾಹಿತಿ ಮತ್ತು ಮಾರ್ಗದರ್ಶನ ನೀಡುವ ಮೂಲಕ ಸಚಿವಾಲಯವು ಆಪತ್ತಿಗೊಳಗಾದ ಭಾರತೀಯ ನಾಗರಿಕರಿಗೆ ಬಲತುಂಬುತ್ತಿದೆ; ಭಾರತೀಯ ನ್ಯಾಯಾಲಯಗಳಲ್ಲಿ ಅಥವ ಪೊಲೀಸು ಠಾಣೆಗಳಲ್ಲಿ ದಾವೆ ಹೂಡುವ ಮೂಲಕ; ಎಚ್ಚರಿಕೆ ಸುತ್ತೋಲೆಗಳನ್ನು ಹೊರಡಿಸುವ ಮೂಲಕ; ಅಂತಹ ಪತಿಯಂದಿರ ಪಾಸ್‌ಪೋರ್ಟುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮತ್ತು ರದ್ದು ಮಾಡುವ ಮೂಲಕ; ಭಾರತೀಯ ಆಯೋಗಗಳು ವಕೀಲರು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ನಿಗದಿ ಮಾಡಿ, ಪಟ್ಟಿ ಮಾಡುವ ಮೂಲಕ ಇತ್ಯಾದಿ. ಈ ಎಲ್ಲಾ ಮಾಹಿತಿಗಳು ಸಚಿವಾಲಯದ ಜಾಲತಾಣದಲ್ಲಿಯೂ ಲಭ್ಯವಿವೆ.

iv. ಹೆ.ಕೇ.ಪ್ರ. (ಹೆಚ್ಚಾಗಿ ಕೇಳಿದ ಪ್ರಶ್ನೆಗಳು – FAQs) : ಅನಿವಾಸಿ ಭಾರತೀಯ/ ಭಾರತೀಯ ಮೂಲದ ವ್ಯಕ್ತಿಯನ್ನು ವಿವಾಹವಾದ ಭಾರತೀಯ ಮಹಿಳೆಯರು ಎದುರಿಸುವ ಸಮಸ್ಯೆಗಳು ಮತ್ತು ಅವುಗಳನ್ನು ಪರಿಹರಿಸುವ ಬಗ್ಗೆ ಸಚಿವಾಲಯವು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಹೆ.ಕೇ.ಪ್ರ.ಗಳನ್ನು ಸಿದ್ಧಪಡಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಾಲತಾಣ http://www.mea.gv.in/faq-hi.htm ದಲ್ಲಿ ಸಹ ಇವುಗಳನ್ನು ಬಿತ್ತರಿಸಲಾಗಿದೆ.

v. ಆಪತ್ತಿಗೊಳಗಾಗಿರುವ ಭಾರತೀಯ ಮಹಿಳೆಯರು ಎದುರಿಸುವ ಹಲವಾರು ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿದೇಶಗಳಲ್ಲಿ ಚಾಲ್ತಿಯಲ್ಲಿರುವ ಕಾನೂನು ಕಟ್ಟಳೆಗಳನ್ನು ಸಚಿವಾಲಯವು ಕ್ರೋಡೀಕರಿಸಿದೆ (http://www.mea.gv.in/faq-hi.htm) (ಹೆ.ಕೇ.ಪ್ರ.ಗಳ ಪುಟದಲ್ಲಿಯೇ ಇದೆ).

vi. ತಮ್ಮ ಸಾಗರೋತ್ತರ ಪತಿಯರಿಂದ ಪರಿತ್ಯಕ್ತರಾಗಿ ಆಪತ್ತಿನಲ್ಲಿರುವ ಭಾರತೀಯ ಮಹಿಳೆಯರಿಗೆ ನೆರವು ಒದಗಿಸಲು ವಿದೇಶಗಳಲ್ಲಿರುವ ಭಾರತೀಯ ಆಯೋಗ/ ಠಾಣೆಗಳಲ್ಲಿ ನೋಂದಾಯಿಸಲ್ಪಟ್ಟಿರುವ ಸಂಸ್ಥೆಗಳು/ ಸರ್ಕಾರೇತರ ಸಂಸ್ಥೆಗಳ ವಿವರಗಳನ್ನು ಸಚಿವಾಲಯದ ಜಾಲತಾಣದಲ್ಲಿ ನೀಡಲಾಗಿದೆ (http://www.mea.gv.in/legal-and-financial-assistance.htm).

vii. ಸಚಿವಾಲಯದ OIA-II ವಿಭಾಗವೂ ಕೂಡ ಇಂತಹ ಹಲವಾರು ಅರ್ಜಿದಾರರನ್ನು ತಮ್ಮ ಕಚೇರಿಯಲ್ಲಿ ವೈಯಕ್ತಿಕವಾಗಿ ಭೇಟಿಮಾಡಿದೆ ಮತ್ತು ಅವರಿಗೆ ಲಭ್ಯವಿರುವ ಕಾನೂನಿನ ಆಯ್ಕೆಗಳು, ಅನುಸರಿಸಬೇಕಾದ ಕ್ರಮಗಳು ಮತ್ತು ಪರಿಹಾರಕ್ಕಾಗಿ ಬೇಕಾದ ವಿವಿಧ ಅರ್ಜಿಗಳನ್ನು ಪಡೆಯಲು ಅವರು ಸಂಪರ್ಕಿಸಬಹುದಾದ ಸಂಪಾತ ಸಚಿವಾಲಯಗಳು ಇತ್ಯಾದಿಗಳ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಿದೆ.

(ಊ) ಇಂಟರ್‌ಪೋಲ್ ನೋಟೀಸುಗಳು : ಇವು ಅಂತಾರಾಷ್ಟ್ರೀಯ ಮಟ್ಟದ ಸಹಕಾರ ಕೋರುವ ಪ್ರಾರ್ಥನಾ ಪತ್ರಗಳು ಅಥವ ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಗಹನವಾದ ಮಾಹಿತಿಯನ್ನು ಸದಸ್ಯ ರಾಷ್ಟ್ರಗಳಲ್ಲಿನ ಪೊಲೀಸರು ಹಂಚಿಕೊಳ್ಳಲು ಅನುಮತಿಸುವ ಜಾಗೃತಿ ಪತ್ರಗಳು. ಎನ್.ಸಿ.ಬಿ.ಗಳ ಮತ್ತು ಪರವಾನಗಿ ಹೊಂದಿದ ನಿಕಾಯಗಳ ಪ್ರಾರ್ಥನೆಯ ಮೇರೆಗೆ ಈ ನೋಟೀಸುಗಳು ಇಂಟರ್‌ಪೋಲ್‌ನ ಪ್ರಧಾನ ಕಚೇರಿಯಿಂದ ಪ್ರಕಟಿಸಲಪಡುತ್ತವೆ. ಇಂಟರ್‌ಪೋಲ್ ಜಾರಿ ಮಾಡುವ ವಿವಿಧ ಮಾದರಿಯ ನೋಟೀಸುಗಳನ್ನು ಈ ಕೆಳಗೆ ಕೊಟ್ಟಿದೆ:

i. ಕೆಂಪು ನೋಟೀಸು (ಕೆಂನೋ – RN) : ವಿಚಾರಣೆಗಾಗಿ ಅಥವ ಶಿಕ್ಷೆ ವಿಧಿಸಲು ಬೇಕಾಗಿರುವ ವ್ಯಕ್ತಿಗಳಿಗೆ ಕೆಂಪು ನೋಟೀಸುಗಳನ್ನು ಜಾರಿ ಮಾಡಲಾಗುತ್ತದೆ. ಕೈವಶಕ್ಕೆ ಕೊಡಲು ಬೇಕಾಗಿರುವ ಯಾವುದೇ ವ್ಯಕ್ತಿಯ ಸ್ಥಳ ಶೋಧಿಸಲು ಮತ್ತು ತಾತ್ಕಾಲಿಕವಾಗಿ ಬಂಧಿಸಲು ಇದೊಂದು ಕೋರಿಕೆಯಾಗಿದೆ.

ii. ಹಳದಿ ನೋಟೀಸು (ಹಳನೋ – YN) : ತಪ್ಪಿಸಿಕೊಂಡ ವ್ಯಕ್ತಿಗಳನ್ನು–ಬಹಳಷ್ಟು ಸಲ ಕಿರಿಯರು–ಹುಡುಕಲು ಅಥವ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಗದಂತಹ ವ್ಯಕ್ತಿಗಳಿಗೆ ಸಹಾಯ ಮಾಡಲು ಈ ಹಳದಿ ನೋಟೀಸನ್ನು ಜಾರಿ ಮಾಡಲಾಗುತ್ತದೆ.

iii. ನೀಲಿ ನೋಟೀಸು (ನೀನೋ – BN) : ಇದನ್ನು ವಿಚಾರಣಾ ನೋಟೀಸು ಎಂದು ಕರೆಯಲಾಗುತ್ತದೆ. ಯಾರದಾದರೂ ಗುರುತನ್ನು ಪರೀಕ್ಷಿಸಲು; ಯಾವುದೇ ನಿರ್ದಿಷ್ಟ ವ್ಯಕ್ತಿಯ ಕ್ರಿಮಿನಲ್ ಹಿನ್ನೆಲೆಯನ್ನು ಪಡೆಯಲು; ತಪ್ಪಿಸಿಕೊಂಡಿರುವ, ಅಂತಾರಾಷ್ಟ್ರೀಯ ಕ್ರಿಮಿನಲ್ ಎಂದು ಗುರುತಿಸಲ್ಪಟ್ಟಿರುವ ಅಥವ ಗುರುತಿಸಲ್ಪಡದೇ ಇರುವ ಅಥವ ಸಾಮಾನ್ಯ ಕ್ರಿಮಿನಲ್ ನಿಯಮದ ಉಲ್ಲಂಘನೆಗಾಗಿ ಬೇಕಾಗಿರುವ ಮತ್ತು ಕೈವಶಕ್ಕೆ ಕೊಡಲು ಬೇಕಾಗಿರುವ ವ್ಯಕ್ತಿಗಳಿಗೆ ಈ ನೀಲಿ ನೋಟೀಸನ್ನು ಜಾರಿ ಮಾಡಲಾಗುತ್ತದೆ.

iv. ಹಸಿರು ನೋಟೀಸು (ಹಸಿನೋ – GN) : 'ಎಚ್ಚರಿಕೆ ನೋಟೀಸು' ಎಂದೂ ಕರೆಯುವ ಇದನ್ನು ಹಲವಾರು ದೇಶಗಳಿಗೆ ತೊಂದರೆಯಾಗುವಂತಹ ಅಪರಾಧ ಎಸಗಿರುವ ಅಥವ ಎಸಗಬಹುದಾದ ವ್ಯಕ್ತಿಗಳ ಬಗೆಗಿನ ಮಾಹಿತಿಯನ್ನು ಅವರು ಆ ದೇಶದ ಗಡಿಯೊಳಗೆ ಇರಬಹುದಾದ ಸಂದರ್ಭಗಳಲ್ಲಿ ಸದಸ್ಯ ದೇಶಗಳ ಕಾನೂನು ಜಾರಿ ಸಂಸ್ಥೆಗಳಿಗೆ ನೀಡಲಾಗುತ್ತದೆ.

v. ಚೆದುರಿಕೆಗಳು (Diffusions) : ಇಂಟರ್‌ಪೋಲ್ ನೋಟೀಸಿನಂತಹದೇ ಸಹಕಾರ ಬೇಡುವ ಇನ್ನೊಂದು ಅರಿಕೆ ಈ ಚೆದುರಿಕೆ ನೋಟೀಸು. ಇದು ನೋಟೀಸಿಗಿಂತಲೂ ಕಡಿಮೆ ಔಪಚಾರಿಕತೆಯುಳ್ಳದ್ದಾದರೂ, ವ್ಯಕ್ತಿಯೊಬ್ಬನ ಬಂಧನ ಅಥವ ಆತನ ನೆಲೆ ಅಥವ ಪೊಲೀಸು ತನಿಖೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕೂಡ ಇದನ್ನು ಉಪಯೋಗಿಸಲಾಗುತ್ತದೆ. ಯಾವುದೇ ದೇಶದ ಮಾದಕ ಪದಾರ್ಥ ನಿಯಂತ್ರಣ ಮಂಡಳಿಯು ತಮಗೆ ಬೇಕಾದ ಸದಸ್ಯ ದೇಶಗಳಿಗೆ ಅಥವ ಇಂಟರ್‌ಪೋಲ್‌ನ ಎಲ್ಲಾ ದೇಶಗಳಿಗೂ ನೇರವಾಗಿ ಇದನ್ನು ಪ್ರಸರಿಸುತ್ತದೆಯಲ್ಲದೆ, ಅದೇ ಸಮಯಕ್ಕೆ ಇಂಟರ್‌ಪೋಲ್‌ನ ಮಾಹಿತಿ ವ್ಯವಸ್ಥೆಯಲ್ಲಿ ದಾಖಲಾಗುತ್ತದೆ ಕೂಡ.

vi. ಕೇಳಿದ ಕೂಡಲೆ ಮಾಹಿತಿ ವಿನಿಮಯ ಮಾಡಿಕೊಳ್ಳಲು ಮತ್ತು ಸಹಕಾರ ನೀಡಲು ಅನುವಾಗುವಂತೆ ಕೇಂದ್ರೀಯ ತನಿಖಾ ದಳದ (CBI) ಉನ್ನತಾಧಿಕಾರ ಕೇಂದ್ರದ ಮೂಲಕ ಕೇಂದ್ರೀಯ ತನಿಖಾ ದಳದ ಇಂಟರ್‌ಪೋಲ್ ಕಕ್ಷೆಯೊಡನೆ ನೇರ ಸಂಪರ್ಕ ಹೊಂದಿರುವ, ಭಾರತದ ಎಲ್ಲಾ ರಾಜ್ಯಗಳ/ ಕೇಂದ್ರಾಡಳಿತ ಪ್ರದೇಶಗಳ ಪೊಲೀಸು ಪಡೆಗಳು ಮತ್ತು ಪೊಲೀಸು ಆಯುಕ್ತಾಲಯಗಳು ನಿಯೋಜಿತ ಇಂಟರ್‌ಪೋಲ್ ಸಂಪರ್ಕಾಧಿಕಾರಿಗಳನ್ನು ಹೊಂದಿರುತ್ತಾರೆ. ಮೇಲೆ ತಿಳಿಸಿರುವ ಪ್ರಕ್ರಿಯೆಗಳ ಜಾರಿಗಾಗಿ ಮಹಿಳೆಯರು ಅವರ ಸಹಾಯವನ್ನು ಪಡೆದುಕೊಳ್ಳಬಹುದು.

(ಖ) ಎಚ್ಚರಿಕೆ ಸುತ್ತೋಲೆ (Look Out Circular - LOC) : ತಲೆತಪ್ಪಿಸಿಕೊಂಡಿರುವ ಅಪರಾಧಿಗಳನ್ನು ಹುಡುಕಲು ಮತ್ತು ಕಾನೂನು ಜಾರಿ ಮಾಡುವ ಪ್ರಾಧಿಕಾರಗಳಿಗೆ ಬೇಕಾಗಿರುವ ಅವರ ಆಗಮನ ಮತ್ತು ನಿರ್ಗಮನಗಳ ಬಗ್ಗೆ ಪರಿಣಾಮಕಾರಿಯಾಗಿ ನಿಗಾ ಇಡಲು ಈ ಎಚ್ಚರಿಕೆ ಸುತ್ತೋಲೆಗಳನ್ನು ಹೊರಡಿಸಲಾಗುತ್ತದೆ.

- ಯಾವುದೇ ವ್ಯಕ್ತಿ(ಗಳು) ಭಾರತದಿಂದ ಹೊರಹೋಗದಂತೆ ತಡೆಯಲು ಅಥವ ಹಿಡಿದಿಟ್ಟುಕೊಳ್ಳಲು ಎಲ್ಲಾ ವಲಸೆ ಪರೀಕ್ಷಾ ಠಾಣೆಗಳನ್ನು ಈ ಎಚ್ಚರಿಕೆ ಸುತ್ತೋಲೆ ಮೂಲಕ ಎಚ್ಚರಿಸಲಾಗುವುದು/ ಜಾಗೃತಗೊಳಿಸಲಾಗುವುದು. ಪೊಲೀಸರು/ ನ್ಯಾಯಾಲಯ/ ಇಂಟರ್‌ಪೋಲ್ ಯಾವುದೇ ವ್ಯಕ್ತಿಯ ವಿರುದ್ಧ ತನಿಖೆಯನ್ನು/ ಮೇಲ್ನೋಟಕ್ಕೆ ಜರುಗಿದೆ ಎಂದು ತೋರುವ ಅಪರಾಧದ ವಿಚಾರಣೆಯನ್ನು ನಡೆಸುವಾಗ ಈ ಕೆಳಗಿನ ಯಾವುದೇ ಸಂದರ್ಭದಲ್ಲಿಯೂ ಈ ಎಚ್ಚರಿಕೆ ಸುತ್ತೋಲೆಯನ್ನು ಹೊರಡಿಸುತ್ತಾರೆ :
    - ಆಪಾದಿತನು ಬಂಧನಕ್ಕೊಳಗಾಗುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದರೆ ಅಥವ
    - ಜಾಮೀನುರಹಿತ ವಾರಂಟು ಮತ್ತು ಇತರ ನಿರ್ಬಂಧಿತ ಕ್ರಮಗಳಿದ್ದರೂ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗದಿದ್ದರೆ ಅಥವ
    - ವಿಚಾರಣೆ/ ಬಂಧನವನ್ನು ತಪ್ಪಿಸಿಕೊಳ್ಳಲು ಆಪಾದಿತನು ದೇಶ ಬಿಟ್ಟು ಹೋಗುವ ಸಂಭವವಿದ್ದರೆ
- ಎಚ್ಚರಿಕೆ ಸುತ್ತೋಲೆಯನ್ನು ಹೊರಡಿಸಿದ ನಂತರ ಒಂದು ವರ್ಷದವರೆಗೆ ಅದು ಜಾರಿಯಲ್ಲಿರುತ್ತದೆ. ಸಂಬಂಧಿತ ಸಂಸ್ಥೆಯು ಎಚ್ಚರಿಕೆ ಸುತ್ತೋಲೆಯ ಪುನರ್ನವೀಕರಣಕ್ಕೆ ಮುಂದಾಗದಿದ್ದರೆ, ಒಂದು ವರ್ಷದ ಜಾರಿ ಅವಧಿಯ ನಂತರ ಅದು ತಂತಾನೆ ರದ್ದಾಗುತ್ತದೆ.
- "ಉಪ ನಿರ್ದೇಶಕರು (Deputy Director), ವಲಸೆ ಬ್ಯೂರೋ (Bureau of Immigration), ಗೃಹ ಸಚಿವಾಲಯ (Ministry of Home Affairs), ಪೂರ್ವ ಘಟಕ–VIII (East Block-VIII), ಖಂಡ–1 (Sector-1), ಆರ್.ಕೆ.ಪುರ (RK Pura), ನವದೆಹಲಿ–110 066 (New Delhi-110 066). ದೂರವಾಣಿ: 011–2619 2796; ಫ್ಯಾಕ್ಸ್: 011–2619 2883" ಇವರಿಗೆ ಎಚ್ಚರಿಕೆ ಸುತ್ತೋಲೆಗೆ ಸಂಬಂಧಿಸಿದಂತೆ ಸೂಚಿತವಾಗಿರುವ ಅಧಿಕಾರಿಗಳು ಎಚ್ಚರಿಕೆ ಸುತ್ತೋಲೆ ಹೊರಡಿಸುವಂತೆ ನಿಯಮಿತ ಅರ್ಜಿ ನಮೂನೆಯಲ್ಲಿ ಕೋರಿಕೆ ಸಲ್ಲಿಸುತ್ತಾರೆ.
- ಜಿಲ್ಲಾ ಮಟ್ಟದಲ್ಲಿ ಪೊಲೀಸು ಸೂಪರಿಂಟೆಂಡೆಂಟರು/ ಪೊಲೀಸು ಉಪ ಆಯುಕ್ತರು ಯಾವುದೇ ವ್ಯಕ್ತಿಯ ವಿರುದ್ಧ ಎಚ್ಚರಿಕೆ ಸುತ್ತೋಲೆ ಹೊರಡಿಸುವಂತೆ ವಲಸೆ ಬ್ಯೂರೋವನ್ನು ಕೋರುವ ಅಧಿಕಾರ ಹೊಂದಿದ್ದಾರೆ. ಇದರ ಜತೆಗೆ, ಭಾರತದ ಯಾವುದೇ ನ್ಯಾಯಾಲಯವೂ ಕೂಡ ಯಾವುದೇ ವ್ಯಕ್ತಿಯ ವಿರುದ್ಧ ಎಚ್ಚರಿಕೆ ಸುತ್ತೋಲೆ ಹೊರಡಿಸುವಂತೆ ವಲಸೆ ಬ್ಯೂರೋಗೆ ಸೂಚಿಸಬಹುದು.
- ಇಲ್ಲಿ **ಮುಖ್ಯವಾಗಿ ಗಮನಿಸಬೇಕಾದ ಅಂಶ**ವೆಂದರೆ, ನ್ಯಾಯಾಲಯದ ನಿರ್ದೇಶನದಂತೆ ಅಥವ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳುವ ವಿಚಾರವಾಗಿ ಹೊರಡಿಸಿರುವ ಎಚ್ಚರಿಕೆ ಸುತ್ತೋಲೆಯು ಅದನ್ನು ಹೊರಡಿಸಿದ ಒಂದು ವರ್ಷದೊಳಗೆ **ತಂತಾನೆ ರದ್ದಾಗುವುದಿಲ್ಲ** ಎಂಬುದು.
- ಒಂದು ಪಕ್ಷ, ಎಚ್ಚರಿಕೆ ಸುತ್ತೋಲೆಯನ್ನು ಯಾವ ವ್ಯಕ್ತಿಯ ವಿರುದ್ಧ ಹೊರಡಿಸಿದ್ದಾರೋ ಆ ವ್ಯಕ್ತಿಯ ವಿರುದ್ಧ ಭಾರತೀಯ ದಂಡ ಶಾಸ್ತ್ರ ಸಂಹಿತೆ (ಇಂಡಿಯನ್ ಪೀನಲ್ ಕೋಡ್) ಅಥವ ಇನ್ನಾವುದೇ ಭಾರತೀಯ ಕಾನೂನಿನ ಪ್ರಕಾರ ಮೇಲ್ನೋಟಕ್ಕೆ ಅರಿವಾಗುವಂತಹ ಯಾವುದೇ ಅಪರಾಧವನ್ನು ಹೊರಿಸಿರದಿದ್ದಲ್ಲಿ, ಆ ವ್ಯಕ್ತಿಯನ್ನು ವಶದಲ್ಲಿರಿಸಿಕೊಳ್ಳುವಂತಿಲ್ಲ/ ಬಂಧಿಸಲಾಗುವುದಿಲ್ಲ ಅಥವ ದೇಶ ಬಿಟ್ಟು ಹೋಗದಂತೆ ತಡೆಯಲಾಗುವುದಿಲ್ಲ. ಆದರೆ, ಆ ವ್ಯಕ್ತಿಯ ಆಗಮನ/ ನಿರ್ಗಮನಗಳ ಬಗ್ಗೆ ಮಾಹಿತಿಯನ್ನು ಸಂಬಂಧಿತ ಅಧಿಕಾರಿಗೆ ರವಾನಿಸಲಾಗುವುದು.

---------000---------